ಕನ್ನಡ ಭಾಷಾ (ರಾಷ್ಟ್ರೀಯ ಶಿಕ್ಷಣ ನೀತಿ) ಪಠ್ಯ

# ಗಣಕ ಸೌರಭ–3

ಬಿ.ಸಿ.ಎ.

## ತೃತೀಯ ಸೆಮಿಸ್ಟರ್


ಪ್ರಧಾನ ಸಂಪಾದಕರು

**ಡಾ. ಪ್ರಶಾಂತ ಜಿ. ನಾಯಕ**

ಸಂಪಾದಕರು

**ಪ್ರೊ. ಉಮೇಶ. ಹೆಚ್. ಜಿ**

**ಪ್ರೊ. ಗಾಯತ್ರಿ ಎಸ್. ಜಿ**

**ಪ್ರೊ. ಸೌಮ್ಯ. ಎಸ್**



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

KANNADA BHASHA PATHYA - GANAKA SOURABHA- 3
A Prescribed NEP Text Book for B.C.A. Degree Course (Third Semester)

Chief Editor:
**Prof. Prashanth G. Nayak**
Professor of Kannada & Director,
Kannada Bharathi, Kuvempu University,
Shankaraghatta,B.R. Project. Shimoga Dist.

Edited BY :

| | |
|---|---|
| **Prof. Umesha. H. G** | **ಪ್ರೊ. ಉಮೇಶ ಹೆಚ್.ಜಿ** |
| **Prof. Gayathri S. G.** | **ಪ್ರೊ. ಗಾಯತ್ರಿ ಎಸ್.ಜಿ** |
| **Prof. Sowmya. S** | **ಪ್ರೊ. ಸೌಮ್ಯ. ಎಸ್** |

Publishd by : Bengaluru City University, BENGALURU
PP: 88 + vi

ಪ್ರಧಾನ ಸಂಪಾದಕರು
**ಡಾ. ಪ್ರಶಾಂತ ಜಿ. ನಾಯಕ**

© : Bengaluru City University,
First print : 2022

ಸಲಹಾ ಸಮಿತಿ:
**ಡಾ. ಕೆ. ವೈ. ನಾರಾಯಣಸ್ವಾಮಿ**
**ಡಾ. ಎಂ. ಎಸ್. ಆಶಾದೇವಿ**

ಸಂಯೋಜಕರು
**ಡಾ. ಬೆಳಕೆರೆ ಲಿಂಗರಾಜಯ್ಯ**

ಬೆಲೆ: ರೂ: 00/-

ಪ್ರಕಾಶಕರು:
ಬೆಂಗಳೂರು ನಗರ ವಿಶ್ವವಿದ್ಯಾಲಯ

## ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ 'ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣೆಸುತ್ತಲೆ ಕನ್ನಡಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ'.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020–2021ರ ವರ್ಷವನ್ನು ಕನ್ನಡ ಕಾಯಕವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ ಇದ್ದ ಜಡತ್ವವನ್ನು ತೆಗೆದು ಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಪ್ರೊ. ಲಿಂಗರಾಜಗಾಂಧಿ
ಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ

## ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯ ವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ  ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾ ತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಆತ್ಮೀಯರಾದ ಡಾ. ಲಿಂಗರಾಜಯ್ಯ ನವರ ಶ್ರಮವನ್ನು ಸ್ಮರಿಸಲೇ ಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರಿಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್ ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ಪ್ರಶಾಂತ ಜಿ. ನಾಯಕ

ಪ್ರಾಧ್ಯಾಪಕರು

# ಪರಿವಿಡಿ

## 1 ದೈನಂದಿನ ಲಯ


| | | |
|---|---|---|
| 1.1 ಏಳುತಲೆ ಎದ್ದು | -ಜನಪದ | 03 |
| 1.2 ಊಟದ ಶಿಸ್ತು ಮತ್ತು ಆರೋಗ್ಯ | -ಕೊಳ್ಳೆಗಾಲ ಶರ್ಮ | 06 |
| 1.3 ನಮ್ಮ ಎಮ್ಮೆಗೆ ಮಾತು ತಿಳಿಯುವುದೇ | -ಗೊರೂರು ರಾಮಸ್ವಾಮಿ ಅಯ್ಯಂಗಾರ್ | 10 |
| 1.4 (ಓದುಪಠ್ಯ) ನಾನು ಬಡವಿ ಆತ ಬಡವ | -ದ.ರಾ. ಬೇಂದ್ರೆ | 19 |


## 2 ಸ್ವಾತಂತ್ರ್ಯ


| | | |
|---|---|---|
| 2.1 ಸ್ವಾತಂತ್ರ್ಯದ ಹಣತೆ | -ಕೆ.ಎಸ್.ನಿಸಾರ್ ಅಹಮದ್ | 23 |
| 2.2 ನಮ್ಮ ಲೋಕದ ಗೀತೆ | - ವೈದೇಹಿ | 24 |
| 2.3 ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು | -ಬೆಸಗರಹಳ್ಳಿ ರಾಮಣ್ಣ | 29 |
| 2.4 (ಓದುಪಠ್ಯ) ನನ್ನೂರಿಗೆ ಮನುಷ್ಯರನ್ನು ಹುಟ್ಟಿಸಿ ಕಳಿಸಿ | -ಫಾತಿಮಾ ರಲಿಯಾ | 35 |


## 3 ಸೌಹಾರ್ದ


| | | |
|---|---|---|
| 3.1 ನೂಱಿಯ್ವರಾವಲ್ಲವೇ? | -ಪಂಪ | 39 |
| 3.2 ಕುಸಿಯುತ್ತಿರುವ ಸಾಂಸ್ಕೃತಿಕ ನೆಲೆಗಳು | - ರಂಜಾನ್ ದರ್ಗಾ | 42 |
| 3.3 ಅಲಿ ಅನಿಲ್ | -ತ್ರಿವೇಣಿ | 51 |
| 3.4 (ಓದುಪಠ್ಯ)ಸ್ವಾಮಿ ಸಂಧಾನ | -ಬಿ.ಜಿ.ಎಲ್ ಸ್ವಾಮಿ | 62 |


## 4 ಸಂಕೀರ್ಣ


| | | |
|---|---|---|
| 4.1 ಹದಿಹರೆಯ–ಸವಿಸಮಯ | -ಡಾ. ವಸುಂಧರಾ ಭೂಪತಿ | 70 |
| 4.2 ಈಗ ಸಕಲವೂ ಸ್ಮಾರ್ಟ್ | -ಟಿ.ಜಿ. ಶ್ರೀನಿಧಿ | 75 |
| 4.3 ಕುಲಕುಲ ಎಂದು ನಾಶವಾದ ಕುಲಗೇಡಿಗಳು | -ಪಿ. ಲಂಕೇಶ್ | 81 |
| 4.4 (ಓದುಪಠ್ಯ) ನಾನು,ಹುಡುಗ ಮತ್ತು ಕಾಲ | -ಪ್ರತಿಭಾನಂದಕುಮಾರ್ | 85 |

# 1 ದೈನಂದಿನ ಲಯ


| | | |
|---|---|---|
| 1.1 ಏಳುತಲೆ ಎದ್ದು | - ಜನಪದ | 03 |
| 1.2 ಊಟದ ಶಿಸ್ತು ಮತ್ತು ಆರೋಗ್ಯ | - ಕೊಳ್ಳೆಗಾಲ ಶರ್ಮ | 06 |
| 1.3 ನಮ್ಮ ಎಮ್ಮೆಗೆ ಮಾತು | | |
| ತಿಳಿಯುವುದೇ | - ಗೊರೂರು ರಾಮಸ್ವಾಮಿ | |
| | – ಅಯ್ಯಂಗಾರ್ | 10 |
| 1.4 (ಓದುಪತ್ಯ) ನಾನು ಬಡವಿ ಆತ ಬಡವ | - ದ.ರಾ. ಬೇಂದ್ರೆ | 19 |

# 1. ದೈನಂದಿನ ಲಯ

## ಆಶಯ

ಜಗತ್ತಿನ ಎಲ್ಲ ಜ್ಞಾನಶಾಖೆಗಳ, ವಾದ–ವಿವಾದಗಳ, 'ಇಸಂ'ಗಳ ಆಚೆಗೂ ಒಂದು ಸಹಜ ಬದುಕಿದೆ, ಅಲ್ಲಿ ಬದುಕುವ ಪ್ರಕ್ರಿಯೆಯೇ ದೊಡ್ಡದು. ಅಲ್ಲಿನ ಕಷ್ಟ ಸುಖಗಳ, ನಂಬಿಕೆ ಕನಸುಗಳ, ಗೆಲುವು–ಸೋಲುಗಳ ಪರಿಧಿಯಲ್ಲಿ ಆ ಬದುಕು ಅರಳುತ್ತದೆ – ಮುದುಡುತ್ತದೆ. ಒಂದು ಜನಾಂಗ ನೂರಾರು ವರ್ಷಗಳಿಂದ ರೂಪಿಸಿಕೊಂಡು ಬರುವ ಇಂಥ ದೈನಿಕ ಲಯಗಳಲ್ಲಿ ಒಂದು ತಾಳಿಕೆಯ ಗುಣವಿರುತ್ತದೆ. ಇದರಲ್ಲಿ ನಂಬಿಕೆಯಿಟ್ಟವರು ದೈನಿಕವನ್ನು ದೈವಿಕವಾಗಿ ಕಂಡು ಬದುಕಿನಲ್ಲಿ ಶ್ರದ್ಧಾಪೂರ್ಣವಾಗಿ ತೊಡಗಿಕೊಳ್ಳುತ್ತಾರೆ. ಅದನ್ನು ಧಿಕ್ಕರಿಸುವವರೂ ಇರುತ್ತಾರೆ. ಈ ದೈನಿಕ ಲಯ ಏಕತಾನವಾಗಿ ಬೇಸರ ಹುಟ್ಟಿಸುವ ಸಾಧ್ಯತೆಗಳೂ ಇಲ್ಲದಿಲ್ಲ. ದೊಡ್ಡ ಆಕ್ರಮಣಗಳಿಗೆ ಒಳಗಾದಾಗ ಇಂಥ ಸಹಜಲಯಗಳು ನಾಶಗೊಳ್ಳಲೂಬಹುದು. ಸಣ್ಣ ಸಣ್ಣ ಸಂಗತಿಗಳಲ್ಲೇ ಜೀವನ ವಿನ್ಯಾಸ ರೂಪಿಸುವ ಮೂಲ ಘಟಕ ಇದಾಗಿದೆ. ಅದರ ಕೆಲವು ಮುಖಗಳು ಇಲ್ಲಿವೆ.

ಮೂಕ ಪ್ರಾಣಿಗಳಿಗೂ ನಮ್ಮಂತೆ ಮನಸ್ಸಿರುತ್ತದೆ. ಅವುಗಳು ನಮ್ಮಂತೆ ಆಲೋಚಿಸುತ್ತವೆ. ಮನುಷ್ಯನ ವಾಕ್‌ಶಕ್ತಿಯೊಂದನ್ನು ಹೊರತುಪಡಿಸಿ ಇನ್ನಾವ ಅಂಶದಲ್ಲಿಯೂ ಅವು ಮನುಷ್ಯರಿಗಿಂತ ಕಡಿಮೆಯೇನಲ್ಲ. ಪ್ರತಿರೋಧಕ್ಕೆ ಮೂಲವಾಗಿರುವ ಬಾಯಿಯೊಂದು ಎಂದರೆ ಮಾತನಾಡುವ ಶಕ್ತಿಯೊಂದು ಇಲ್ಲದಿರುವುದೇ ಈ ಪ್ರಾಣಿಗಳ ಬಹು ಮುಖ್ಯ ಕೊರತೆಯಾಗಿದೆ. ಅವುಗಳಿಂದ ಮಾತಿನ ಪ್ರಹಾರ ಬರದೇ ಇರುವ ಕಾರಣವೇ ಮನುಷ್ಯ ಧೈರ್ಯವಾಗಿ ಅವುಗಳ ಮುಂದೆ ತನ್ನೆಲ್ಲ ಬೈಗಳಗಳನ್ನು ಹರಿಯ ಬಿಡುತ್ತಾನೆ.

ಒಮ್ಮೊಮ್ಮೆ ಮನುಷ್ಯನ ಈ ವಾಚಾಳಿತನವನ್ನು ಕಂಡೇ ಅವು ಮೂಕವಾಗಿವೆಯೇನೋ ಎಂಬ ಸಂದೇಹವೂ ಉಂಟಾಗುವುದಲ್ಲವೇ?! ಎಂಬ ಅಭಿಪ್ರಾಯವೂ ಇದೆ.

# 1.1 ಏಳುತಲೆ ಎದ್ದು

**– ಜನಪದ**

ಏಳುತಲೆ ಎದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳಿಯೋಳೆ । ಭೂಮಿತಾಯ।
ಎದ್ದೊಂದು ಗಳಿಗೆ ನೆನೆವೇನು॥

ಎಳ್ಳು ಹೊಲದಾಗಿರುವ ದೊಳ್ ಹೊಟ್ಟೆ ಬೆನವಣ್ಣ
ಎಳ್ಳೆಲೆ ತುಪ್ಪ ತಿಳಿದುಪ್ಪ। ಸಲಿಸುವೆ।
ದೊಳ್ ಹೊಟ್ಟೆ ಬೆನವ ಕೊಡು ಮತಿಯ॥

ಅಕ್ಕಿ ಬೀಸುವ ಕಲ್ಲೆ ಸಕ್ಕರೆ ಒಡೆಗಲ್ಲೆ
ಶೆಟ್ಟಿ ನಮ್ಮಯ್ಯ ಅರಮನೆ। ರಾಗಿಕಲ್ಲೆ ।
ಹಟ್ಟಿ ಬಾಗಿಲಿಗೆ ದನಿದೋರೆ॥

ರಾಗಿ ಬೀಸುವ ಕಲ್ಲೆ ರಾಜಾನ ಒಡಗಲ್ಲೆ
ರಾಯ ಅಣ್ಣಯ್ಯ ಅರಮನೆ। ರಾಗಿಕಲ್ಲೆ ।
ರಾಜ ಬೀದಿಗೆ ದನಿದೋರೆ ॥

ಕಲ್ಲವ್ವ ಮಾತಾಯಿ ಮೆಲ್ಲವ್ವ ರಾಗಿಯ
ಜಲ್ಲಜಲ್ಲಾನೆ ಉದುರವ್ವ। ನಾನಿನಗೆ ।
ಬೆಲ್ಲದಾರತಿಯ ಬೆಳಗೇನು॥

ಕರಿಯಂಗಿ ಕಸೂತಿ ತಲೆತುಂಬ ಜಾವೂಳ
ಅಂಗಳದಾಗ ನವಿಲಾಟ ಅದಕ್ಕಿಂತ।
ರಂಗಯ್ಯ ನಾಟ ವಿಪರೀತ॥

ಜೋಗುಳ ಹಾಡಿದರ ಆಗಲೇ ಕೇಳ್ಯಾನ
ಹಾಲ ಹಂಬಲ ಮರತಾನ । ಕಂದೈಗ ।
ಜೋಗುಳದಾಗ ಅತಿ ಮುದ್ದ॥

ಅಳುವ ಕಂದನ ತುಟಿಯು ಹವಳದ ಕುಡಿಯಂಗ
ಕುಡಿಹುಬ್ಬು ಬೇವಿನೆಸಳಂಗ । ಕಣ್ಣೋಟ ।
ಶಿವನ ಕೈಯಲಗು ಹೊಳೆದಂಗ॥

ಆಡಿ ಬಾ ಎನ ಕಂದಾ ಅಂಗಾಲ ತೊಳೆದೇನ
ತೆಂಗೀನಕಾಯಿ ತಿಳಿನೀರ। ತಕ್ಕೊಂಡು ।
ಬಂಗಾರ ಮಾರಿ ತೊಳೆದೇನ॥

ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ
ಕೂಸು ಕಂದಯ್ಯ ಒಳಹೊರಗ । ಆಡಿದರ ।
ಬೀಸಣಿಕೆ ಗಾಳಿ ಸುಳಿದಾವ॥

ಬ್ಯಾಸಗಿ ದಿವಸಕ ಬೇವಿನ ಮರ ತಂಪ
ಭೀಮರತಿಯೆಂಬ ಹೊಳಿ ತಂಪ। ಹಡೆದವ್ವ ।
ನೀತಂಪ ನನ್ನ ತವರೀಗೆ॥

ಹಾಲುಂಡ ತವರೀಗಿ ಏನೆಂದು ಹಾಡಲೆ
ಹೊಳೆ ದಂಡೆಲಿರುವ ಕರಕೀಯ। ಕುಡಿಯಂಗ ।
ಹಬ್ಬಲೆ ಅವರ ರಸಬಳ್ಳಿ॥

ತೊಟ್ಟೀಲ ಹೊತ್ಕೊಂಡು ತೌರ್ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು । ತವರೂರ।
ತಿಟ್ಟತ್ತಿ ನಿಂದು ನೋಡ್ಯಾಳೋ॥

ಹೆಣ್ಣೀನ ಜನುಮಾಕ ಅಣ್ಣತಮ್ಮರು ಬೇಕು
ಬೆನ್ನ ಕಟ್ಟುವರು ಸಭೆಯೊಳಗ । ಸಾವಿರ।
ಹೊನ್ನ ಕಟ್ಟುವರು ಉಡಿಯೊಳಗ॥

ಎನಗ ಯಾರಿಲ್ಲಾಂತ  ಮನದಾಗ ಮರುಗಿದರ
ಪರನಾಡಲೊಬ್ಬ ಪ್ರತಿ ಸೂರ್ಯ । ನನ್ನಣ್ಣ।
ಬಿದಿಗೆ ಚಂದ್ರಾಮ ಉದಿಯಾದ ॥

ಕುದುರೀಯ ಕುಣಿಸೂತ ಆನೀಯ ನಡಿಸೂತ
ಅರಗಿಣಿಗೆ ಮಾತಾ ಕಲಿಸೂತ । ಬರತಾನ।
ಬರಿಗೊಡದಮ್ಮ ಬದಿಗಾಗ॥

## 1.2 ಊಟದ ಶಿಸ್ತು ಮತ್ತು ಆರೋಗ್ಯ!

– ಕೊಳ್ಳೇಗಾಲ ಶರ್ಮ

ನಮ್ಮ ಮನೆಯಲ್ಲಿ ಇರುವವರು ಮೂರೇ ಜನರಾದರೂ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವುದು ಅಪರೂಪ. ನನಗೋ ಕಚೇರಿಗೆ ಹೋಗುವ ಆತುರ. ಸಿಕ್ಕದ್ದನ್ನು ಬಾಯಿಗೆ ತುರುಕಿ ಓಡುತ್ತೇನೆ. ಮನೆಯವಳಿಗೆ ನಮ್ಮಿಬ್ಬರಿಗೂ ಊಟ–ತಿಂಡಿ ಕೊಡುವ ಜವಾಬ್ದಾರಿ. ನಮ್ಮದೆಲ್ಲ ಮುಗಿದ ಮೇಲೆ ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತಾಳೆ. ಇನ್ನುಳಿದದ್ದು ಮಗ. ಕಾಲೇಜಿನಿಂದ ಯಾವಾಗ ಬರುತ್ತಾನೋ ಆಗ ಊಟ. ಕ್ಯಾಂಟೀನಿನಲ್ಲಿ ಏನು ಸಿಗುತ್ತದೋ ಅದುವೇ ಮೃಷ್ಟಾನ್ನ.! ಕೆಲಸ ಮಾಡೋದೇ ಹೊಟ್ಟೆ ಹೊರಯೋಕೆ. ಹೀಗೆ ಊಟವನ್ನು ಸರಿಯಾಗಿ ಮಾಡದಿದ್ದರೆ ಹೇಗೆ? "ಊಟದಲ್ಲಿ ಶಿಸ್ತಿರಬೇಕು . ಹೇಗೆಂದರೆ ಹಾಗೆ, ಯಾವಾಗ ಅಂದರೆ ಅವಾಗ, ಏನೆಂದರೆ ಅದು ತಿನ್ನುವುದಲ್ಲ" ಅಂತ ಅಜ್ಜಿ ಮೊಮ್ಮಗನನ್ನು ಬೈಯುವ ರೀತಿಯಲ್ಲಿ ನಮ್ಮೆಲ್ಲರಿಗೂ ಶಿಸ್ತಿನ ಪಾಠ ಹೇಳುತ್ತಿರುತ್ತಾರೆ .

ಹೊಟ್ಟೆ ತುಂಬಿದರೆ ಸಾಕಲ್ಲ. ಊಟಕ್ಕೂ ಶಿಸ್ತೇ? ಅದೆಲ್ಲ ಹಳೆಯ ಪರಂಪರೆ ಅನ್ನುವವರಿಗೆ ಇದೋ ವಿಜ್ಞಾನ ಜಗತ್ತಿನಿಂದ ಒಂದು ಕಿವಿಮಾತು. ಇಂದಿನ ಕಾಲದ ಖಾಯಿಲೆಗಳಾದ ಡಯಾಬಿಟೀಸ್, ಹೊಟ್ಟೆಯಹುಣ್ಣು ಮುಂತಾದುವಕ್ಕೂ ಊಟದ ಶಿಸ್ತಿಗೂ ಸಂಬಂಧವಿದೆ ಎನ್ನುವ ಕೌತುಕಮಯ ಸಂಶೋಧನೆ ಮೊನ್ನೆ ಪ್ರಕಟವಾಗಿದೆ. ಪ್ರೊಸೀಡಿಂಗ್ಸ್ ಆಫ್ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಪತ್ರಿಕೆಯಲ್ಲಿ ಫ್ರೆಂಚ್ ವಿಜ್ಞಾನಿ ಪಿಯರಿ ಶಾಂಬನ್ ಮತ್ತು ಸಂಗಡಿಗರು ಹೀಗೊಂದು ಸುದ್ದಿ ಪ್ರಕಟಿಸಿದ್ದಾರೆ. ಹೊತ್ತಲ್ಲದ ಹೊತ್ತಿನಲ್ಲಿ ಊಟ ಮಾಡುವವರ ದೇಹದಲ್ಲಿ ಆಗುವ ಸೂಕ್ಷ್ಮ ಬದಲಾವಣೆಗಳು ನಮ್ಮ ಜೀರ್ಣಕ್ರಿಯೆಯ ಮೇಲೆ ಪರೋಕ್ಷವಾಗಿ ಪ್ರಭಾವ ಬೀರುತ್ತವೆ. ಇದಕ್ಕೂ ಹೀಗೆ ಹೊತ್ತಲ್ಲದ ಹೊತ್ತಿನಲ್ಲಿ ಊಟ ಮಾಡುವವರಲ್ಲಿ ಕಂಡು ಬರುವ ಡಯಾಬಿಟೀಸ್, ರಕ್ತದೊತ್ತಡ, ಬೊಜ್ಜು ಮುಂತಾದ ಖಾಯಿಲೆಗಳಿಗೂ ಸಂಬಂಧವಿದೆ ಎಂದು ಇವರು ನಿರೂಪಿಸಿದ್ದಾರೆ.

ಹೊತ್ತಲ್ಲದ ಹೊತ್ತು ಎಂದರೇನು ಎಂದು ಕೇಳಬೇಡಿ. ಯಾರು ಏನು ಮಾಡಿದರೇನು, ಮಾಡದಿದ್ದರೇನು ಬೆಳಗಾಗುವುದು ನಿಲ್ಲುವುದಿಲ್ಲ. ರಾತ್ರಿ ಆಗುವುದು ತಪ್ಪುವುದಿಲ್ಲ ಎನ್ನುವ ಮಾತು ಕೇಳಿದ್ದೀರಿ. ಬೆಳಗಾಗುವುದಕ್ಕೂ ,ರಾತ್ರಿ ಆಗುವುದಕ್ಕೂ, ನಮ್ಮ ನಿತ್ಯದ ಚಟುವಟಿಕೆಗಳಿಗೂ ನೇರ ಸಂಬಂಧವಿದೆ ಎನ್ನುವುದು

ವಿಜ್ಞಾನಿಗಳ ಅಂಬೋಣ. ನಮ್ಮದಷ್ಟೇ ಅಲ್ಲ, ಬಹುತೇಕ ಪ್ರಾಣಿಗಳ, ಗಿಡ–ಮರಗಳ ಚಟುವಟಿಕೆಗಳೂ ಹಗಲು–ರಾತ್ರಿಯ ಜೊತೆಗೆ ತಳುಕಿಕೊಂಡಿವೆ. ಉದಾಹರಣೆಗೆ: ಸೂರ್ಯ ಉದಯಿಸಿದ್ದನ್ನ ನೀವು ಕಂಡಿರೋ ಇಲ್ಲವೋ, ಬೆಳಗ್ಗೆ ಸೂರ್ಯೋದಯದ ಸಮಯಕ್ಕೆ ಎಚ್ಚರವಾಗುವುದು ತಪ್ಪುವುದಿಲ್ಲ. ಹಾಗೆಯೇ ರಾತ್ರಿ ನೀವು ಎಷ್ಟೇ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಎಚ್ಚರವಿರಬೇಕೆಂದರೂ ತೂಕಡಿಸುವುದು ತಪ್ಪುವುದಿಲ್ಲ. ಬೆಳಗೆಲ್ಲ ಎಚ್ಚರ, ರಾತ್ರಿಯಾಗುತ್ತಿದ್ದಂತೆ ನಿದ್ರೆ.

ಹಾಗಿದ್ದರೆ ಬೆಳಗಾಗದಿದ್ದರೆ ನಾವು ಹಾಸಿಗೆ ಬಿಟ್ಟು ಏಳುವುದೇ ಇಲ್ಲವೆನ್ನಬೇಡಿ. ವಿಜ್ಞಾನಿಗಳು ಕಂಡಹಾಗೆ ಇದೊಂದು ಸಹಜ ಚಕ್ರ. ಬೆಳಗಾಗುತ್ತದೆಯೋ ಇಲ್ಲವೋ, ನಿದ್ರೆಯಾದ ಮೇಲೆ ಎಚ್ಚರವಾಗಲೇ ಬೇಕು. ಅನಂತರ ಮತ್ತೆ ನಿದ್ರೆಗೆ ಮರಳಲೇ ಬೇಕು. ಈ ಚಕ್ರವನ್ನು ದೈನಂದಿನ ಲಯ ಎಂದು ಕರೆದಿದ್ದಾರೆ. ಹೀಗೆಯೇ ವಾರ್ಷಿಕ ಲಯವೂ ಇರಬಹುದು. ಒಟ್ಟಾರೆ ಎಲ್ಲ ಚಟುವಟಿಕೆಗಳೂ ಲಯಬದ್ಧವಾಗಿ ಮರುಕಳಿಸುತ್ತವೆ ಎನ್ನುವುದು ಸತ್ಯ. ಇದನ್ನೇ ಜೈವಿಕ ಗಡಿಯಾರ ಎಂದು ವಿಜ್ಞಾನಿಗಳು ಗುರುತಿಸಿದ್ದಾರೆ.

ಲಯವನ್ನು ಕೆಡಿಸಿದರೆ ಏನಾಗಬಹುದು ? ಅರ್ಥಾತ್ ಬೆಳಗಿನ ಚಟುವಟಿಕೆಯನ್ನು ರಾತ್ರಿ, ರಾತ್ರಿ ಮಾಡಬೇಕಾದದ್ದನ್ನು ಬೆಳಗ್ಗೆ ಮಾಡಿದರೆ ಏನಾಗಬಹುದು ? ಶಿವರಾತ್ರಿ ಸಂಭವಿಸುವುದು ಇದೇ ಕಾರಣಕ್ಕೆ. ನಿದ್ರೆ ಮಾಡಬೇಕಾದ ಹೊತ್ತಿನಲ್ಲಿ ಅದನ್ನು ತಡೆದು ಜಾಗರಣೆ ಇರುತ್ತೇವಲ್ಲ ಈ ಸಾಹಸಕ್ಕೆ ಅದು ಹಬ್ಬ ಎನಿಸುತ್ತದೆ. ಶಿವರಾತ್ರಿಯಂತೆ ನಿತ್ಯವೂ ಜಾಗರಣೆ ಮಾಡಿದೆವೆನ್ನಿ; ಆಗ ತುಸು ದಿನಗಳವರೆಗೆ ಹಗಲು ಅರೆಬರೆ ನಿದ್ರೆ ಮಾಡುತ್ತೇವೆ. ಕೊನೆಗೆ ಹಗಲೆಲ್ಲ ನಿದ್ರೆ ಮಾಡಿ ಸಂಜೆ ಸೂರ್ಯ ಮುಳುಗುವ ವೇಳೆಗೆ ಬೆಳಗಾಗುವುದಕ್ಕೆ ಆರಂಭವಾಗುತ್ತದೆ. ಬೆಳಗ್ಗೆ ಸೂರ್ಯ ಉದಯಿಸುವಾಗ ನಿದ್ರೆ ಬರಲಾರಂಭಿಸುತ್ತದೆ. ನಿಮ್ಮ ದೇಹದ ಗಡಿಯಾರ ಲಯ ತಪ್ಪಿರುತ್ತದೆ. ಇದುವರೆಗಿನ ತಿಳುವಳಿಕೆಯ ಪ್ರಕಾರ ಲಯಗೆಟ್ಟ ಗಡಿಯಾರ ಮರಳಿ ಮೊದಲಿನ ಲಯವನ್ನು ಪಡೆಯುತ್ತದೆಂದು, ಇದರ ಕೀಲಿ ನಮ್ಮ ಮಿದುಳಿನಲ್ಲಿರುವ ನರಕೋಶಗಳ ಒಂದು ಪುಟ್ಟ ಗಂಟಿನಲ್ಲಿ ಇದೆ ಎಂದು ತಿಳಿದಿತ್ತು. ಈ ಗಂಟನ್ನು ಸೂಪ್ರಕಯಾ ಸ್ಮಾಟಿಕ್ ನ್ಯೂರಾನ್ (ಎಸ್.ಸಿ.ಎನ್) ಎಂದು ಕರೆಯುತ್ತಾರೆ. ಪಿಯರೆ ಶಾಂಬನ್ ಅವರ ಸಂಶೋಧನೆ ತಿಳುವಳಿಕೆಗೆ ತುಸು ಗಾಬರಿಯಾಗುವಂತಹ ವಿಷಯಗಳನ್ನು ಕೂಡಿಸಿದೆ .

ನಮ್ಮ ನಿತ್ಯದ ಚಟುವಟಿಕೆಗಳು ಈ ಸಹಜ ಲಯವನ್ನು ಮೀರಿ ಹೆಚ್ಚು ಕಾಲ ನಡೆದಿದ್ದೇ ಆದರೆ ಎಸ್.ಸಿ.ಎನ್ ಕೀಲಿಯ ನಿಯಂತ್ರಣವನ್ನೂ ಮೀರಿ ಶಾಶ್ವತ ಬದಲಾವಣೆಗಳಾಗುತ್ತವೆ. ಇವು ನಮ್ಮ ಕೆಲವು ಕಾಯಿಲೆಗಳಿಗೆ ಕಾರಣವಿರಬಹುದು ಎಂದು ಶಾಂಬನ್ ತಂಡ ಗುರುತಿಸಿದೆಯಂತೆ. ಅಂದಹಾಗೆ ಶಾಂಬನ್ ತಂಡ

ಸಂಶೋಧನೆ ಮಾಡಿದ್ದು ಇಲಿಗಳ ಮೇಲೆ. ಇಲಿಗಳು ನಮ್ಮ ಹಾಗೆ ಹಗಲು ಓಡಾಡುವುದಿಲ್ಲವಷ್ಟೆ. ಅವು ನಿಶಾಚರಿಗಳು. ಅವುಗಳ ಊಟ–ತಿಂಡಿಯು ಅಷ್ಟೆ. ಎಲ್ಲವೂ ನಮ್ಮ ದಿನಚರ್ಯೆಗೆ ವಿರುದ್ಧ. ಅವುಗಳಿಗೆ ಸಹಜವಾದ ರಾತ್ರಿ ಹೊತ್ತಿನ ಊಟದ ಬದಲಿಗೆ ಹಗಲಷ್ಟೇ ಊಟ ಮಾಡಲು ಬಿಟ್ಟು ಏನಾಗುತ್ತದೆಂದು ಶಾಂಬನ್ ತಂಡ ಗಮನಿಸಿದೆ. ಇದೊಂದು ರೀತಿ ಇಲಿಗಳನ್ನು ನಿತ್ಯ ರಾತ್ರಿ ಪಾಳಿ ಕೆಲಸ ಮಾಡಲು ಹೇಳಿದಂತೆ ಅನ್ನಿ. ಸಹಜವಾದ ಚಕ್ರವನ್ನು ಒತ್ತಾಯದಿಂದ ಬದಲಿಸಿದ ಹಾಗೆ ನಿತ್ಯ ಹಗಲು ಶಿವರಾತ್ರಿ ಮಾಡುವ ಈ ಇಲಿಗಳ ಮೈಯಲ್ಲಿ ಯಾವ್ಯಾವ ರಾಸಾಯನಿಕ ಬದಲಾವಣೆಗಳು ಕಾಣುತ್ತವೆ ಎಂದು ಅವರು ವಿಶಿಷ್ಟ ಪ್ರಯೋಗಗಳಿಂದ ತಿಳಿಯಲು ಪ್ರಯತ್ನಿಸಿದ್ದಾರೆ. ಹೀಗೆ ಮಾಡಿದಾಗ ಇವುಗಳ ಉಣಿಸಿನ ಹಾಗೂ ಜೀರ್ಣಕ್ರಿಯೆಗಳ ಲಯ ತಪ್ಪುತ್ತದಷ್ಟೆ . ಈ ಪ್ರಯೋಗಗಳಲ್ಲಿ ಮೊದಲು ಕಂಡದ್ದು ಇಲಿಗಳು ಹಗಲು ಹೊಟ್ಟೆಬಿರಿಯ ಉಂಡರೂ ಅವುಗಳ ರಕ್ತದಲ್ಲಿನ ರಾಸಾಯನಿಕಗಳು ಹಸಿದಾಗ ಇರುವಂತೆಯೇ ಇದ್ದುವು. ಅಂದರೆ ಉಂಡದ್ದು ದೇಹವನ್ನು ಕೂಡಿರಲೇ ಇಲ್ಲ. ನಡುರಾತ್ರಿಯಲ್ಲಿ ಕನಿಷ್ಠವಾಗಿರಬೇಕಿದ್ದ ಇನ್ಸುಲಿನ್ ಈ ಹಗಲುಣುವ ಇಲಿಗಳಲ್ಲಿ ಗರಿಷ್ಠವಾಗಿತ್ತು. ರಕ್ತದಲ್ಲಿನ ಕೊಬ್ಬಿನ ಅಂಶ ( ಮುಕ್ತ ಮೇದಾಮ್ಲಗಳು )ಹಾಗೂ ರಕ್ತದೊತ್ತಡಕ್ಕೆ ಕಾರಣವಾಗುವ ಟ್ರೈಗ್ಲಿಸರೈಡ್ ಅಂಶವು ಹೀಗೆ ಎಡವಟ್ಟು ಕಾಲದಲ್ಲಿ ಇತ್ತು. ಜೀರ್ಣಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುವ ಲಿವರ್ (ಯಕೃತ್ತು) ನಲ್ಲಿನ ರಾಸಾಯನಿಕಗಳ ಪರಿಸ್ಥಿತಿಯೂ ಹೀಗೆ ಇತ್ತು.

ಹಗಲಿರಬೇಕಾದ್ದು ರಾತ್ರಿ ಕಾಣುತ್ತಿರುವುದಕ್ಕೆ ಎಸ್.ಸಿ–ಎನ್ ನ ನಿಯಂತ್ರಣ ಕಾರಣವೋ ಅಥವಾ ಅಕಾಲದ ಉಣಿಸೇ ಕಾರಣವೋ ಎಂದು ಶಾಂಬನ್ ಪರೀಕ್ಷಿಸಿದ್ದಾರೆ. ಆ ಕಾಲದಲ್ಲಿ (ಹಗಲು) ಉಣಿಸು ನೀಡಿದ ಇಲಿಗಳಿಗೆ ಅನಂತರ ರಾತ್ರಿ ಒಮ್ಮೆ ಗ್ಲೂಕೋಸ್ ಚುಚ್ಚಿದ್ದಾರೆ. ಗ್ಲೂಕೋಸ್ ಆಹಾರ ಜೀರ್ಣವಾದ ನಂತರ ಉತ್ಪತ್ತಿಯಾಗುವ ವಸ್ತುವಷ್ಟೆ. ಪ್ರಯೋಗ ಆರಂಭಿಸಿದ ಒಂದೆರಡು ದಿನಗಳಲ್ಲಿ ಹೀಗೆ ಗ್ಲೂಕೋಸ್ ನೀಡಿದಾಗ ಇಲಿಗಳಲ್ಲಿ ದೈನಂದಿನ ಲಯ ಪಲ್ಲಟದಿಂದ ಆಗುವ ಪರಿಣಾಮಗಳು ಮರೆಯಾದುವು. ಆದರೆ ಅನಂತರದ ದಿನಗಳಲ್ಲಿ ನೀಡಿದಾಗ ಪಲ್ಲಟದ ಪರಿಣಾಮಗಳು ಹಾಗೇ ಉಳಿದುಕೊಂಡವು. ಅಂದರೆ ಈ ಪಲ್ಲಟನೆ ಆಹಾರಾಭ್ಯಾಸದಿಂದ ಬಂದದ್ದೇ ಹೊರತು ಎಸ್.ಸಿ.ಎನ್ ನಿಯಂತ್ರಣದಿಂದಲ್ಲ. ಎಂದು ಶಾಂಬನ್ ತೀರ್ಮಾನಿಸಿದ್ದಾರೆ.

ಈ ಯಾವ ಬದಲಾವಣೆಗಳೂ ಎಸ್ ಸಿ ಎನ್ ನ ಲಯವನ್ನು ತಾಕುವುದಿಲ್ಲ. ಆದರೆ ಇತರೆ ಕ್ರಿಯೆಗಳ ನಡುವಣ ತಾಳಮೇಳ ಬದಲಾಗುತ್ತದೆ. ದೇಹದ ವಿವಿಧ ಕ್ರಿಯೆಗಳು ಒಂದಕ್ಕೊಂದು ತಳುಕಿಕೊಂಡ ಚಕ್ರದಂತೆ

ಇರುವುದರಿಂದ ಒಂದರ ಲಯ ತಪ್ಪಿದ ಕೂಡಲೇ ಮತ್ತೊಂದರ ಲಯವು ಬದಲಾಗುತ್ತದೆ; ಎನ್ನುತ್ತಾರೆ ಶಾಂಬನ್. ಬಲವಂತವಾಗಿ ನಮ್ಮ ದೈನಂದಿನ ಲಯವನ್ನು ಬದಲಿಸುವುದರಿಂದ ರಾಸಾಯನಿಕ ಕ್ರಿಯೆಗಳಲ್ಲಿ ಉಂಟಾಗುವ ವ್ಯತ್ಯಾಸಗಳೇನು ಎನ್ನುತ್ತಾರೆ ಶಾಂಬನ್.

ಪ್ರಯೋಗಗಳನ್ನು ಇಲಿಗಳಲ್ಲಿ ನಡೆಸಿದ್ದರೂ ಈ ರಸಾಯನಿಕ ಕ್ರಿಯೆಗಳಿಗೂ ನಮ್ಮ ದೇಹದಲ್ಲಿ ಜರುಗುವ ಕ್ರಿಯೆಗಳಿಗೂ ಅಷ್ಟೇನೂ ವ್ಯತ್ಯಾಸವಿಲ್ಲ. "ಜೈವಿಕ ಗಡಿಯಾರದಲ್ಲಿ ಆಗುವ ಈ ಲಯಪಲ್ಲಟನ ಪಾಳಿಗಳಲ್ಲಿ ಕೆಲಸ ಮಾಡುವವರಲ್ಲಿ ಸಾಮಾನ್ಯವಾಗಿ ಕಾಣಬರುವ ಖಾಯಿಲೆಗಳನ್ನು ಉಂಟುಮಾಡುವಂತಹ ರಾಸಾಯನಿಕ ಕ್ರಿಯೆಗಳನ್ನೇ ತಾಕುತ್ತದೆ." ಎನ್ನುವುದು ಶಾಂಬನ್ ಅಭಿಪ್ರಾಯ. ಅರ್ಥಾತ್ ನಮ್ಮ ಊಟ ಹೇಗಿದೆ ಅನ್ನುವುದು ಅಷ್ಟೆ ಅಲ್ಲ. ನಾವು ಯಾವಾಗ ಊಟ ಮಾಡುತ್ತೇವೆ ಎಂಬುದು ಮುಖ್ಯ ಅಂತಲ್ಲವೇ? ಅಜ್ಜಿ ಇದನ್ನು ತಿಳಿದೆ ಹೇಳಿದಳು ಅನ್ನಬೇಡಿ. ಅಂತೂ ಗೊತ್ತಿದ್ದೋ ಗೊತ್ತಿಲ್ಲದೆಯೋ ಈ ಶಿಸ್ತು ನಮ್ಮ ಆರೋಗ್ಯವನ್ನು ಕಾಪಾಡುತ್ತದೆ ಅನ್ನುತ್ತದೆ ಶಾಂಬನ್ ಸಂಶೋಧನೆ.

# 1.3 ನಮ್ಮ ಎಮ್ಮೆಗೆ ಮಾತು ತಿಳಿಯುವುದೇ ?

**– ಗೊರೂರು ರಾಮಸ್ವಾಮಿ ಅಯ್ಯಂಗಾರ್**

ನಮ್ಮ ನಾಡು ಎಮ್ಮೆಯ ನಾಡು. ಮಹಿಷಮಂಡಲ ಎಂಬುದು ನಾವು ಹೆಮ್ಮೆಯಿಂದ ಹೇಳಿಕೊಳ್ಳುವ ಹೆಸರು. ನಮ್ಮ ರಾಜರಿಗೆ ಮಹಿಷಾಸುರಮರ್ದಿನಿ ದೇವರು. ನಾವೆಲ್ಲ ಎಮ್ಮೆಯ ಹಾಲಿನಿಂದಲೇ ಬೆಳೆದವರು. ಎಮ್ಮೆ ಹೀಗೆ ನಮಗೆ ದೇವರಾದುದರಿಂದಲೇ ನಮ್ಮ ದೇಶದಲ್ಲಿ ಇತರ ದೇಶಗಳಿಗಿಂತ ಎಮ್ಮೆ ಪ್ರಾಬಲ್ಯ ಹೆಚ್ಚು.

ಇದು ನಮ್ಮ ಮನೆಯ ಮಾತು. ನಮ್ಮ ಮನೆಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತ. ಎಮ್ಮೆ ಇಲ್ಲದ ಕಾಲ ನಮ್ಮಲ್ಲಿ ಇಲ್ಲವೇ ಇಲ್ಲ. ಮನೆಯ ಯಜಮಾನರ ವಂಶವನ್ನು, ಹಿರಿಯರನ್ನು ಮೂರು ತಲೆ ನಾಲ್ಕು ತಲೆಗಳಿಂದ ಗುರುತಿಸುವಂತೆ ನಮ್ಮ ಮನೆಯ ಎಮ್ಮೆಯ ಮೂಲವನ್ನು ನಾಲ್ಕು ತಲೆಗಳಿಂದ ಗುರುತಿಸಬಹುದು. ಇದು ಹಿರೇಗೌಡ್ನಹಳ್ಳಿ ಎಮ್ಮೆ ಇದರ ಹೆಸರು ದೊಡ್ಡಿ. ಇದು ಒಂಬತ್ತು ಕರು ಹಾಕಿದೆ. ಇದರ ನಾಲ್ಕನೆಯ ಕರು ಬಿಳಿ ಕೋಡಿನ ಎಮ್ಮೆ. ಅದರ ಮೂರನೆಯ ಕರು ಸಣ್ಣ ಎಮ್ಮೆ. ಅದರ ಎರಡನೆಯ ಕರು ಕಡಸು. ಸಣ್ಣೆಮ್ಮೆಯ ಮೊದಲನೇ ಕರು ಈಗಾಗಲೇ ಎರಡು ಕರು ಹಾಕಿದೆ. ನಮ್ಮ ಮನೆಯ ವಂಶವೃಕ್ಷ ರಾಜ–ಮಹಾರಾಜ ವಂಶವೃಕ್ಷಗಳಿಗಿಂತ ಹೆಚ್ಚು ಸ್ಪಷ್ಟವೂ, ಶುದ್ಧವೂ, ನೇರವೂ ಆಗಿದೆ. ಸಣ್ಣ ಎಮ್ಮೆಯ ಸಾಧುಸ್ವಭಾವವನ್ನು, ಅಂದವಾದ ಕೋಡುಗಳನ್ನು, ಅಷ್ಟು ಸಣ್ಣ ಕೆಚ್ಚಲಿಗೆ ಅಷ್ಟೊಂದು ಹಾಲನ್ನು ನೋಡಿ ಅನೇಕರು ಅದರ ಅಪ್ಪ–ಅಮ್ಮ ತಳಿ ಯಾವುದೆಂದು ಪದೇಪದೇ ವಿಚಾರಿಸಿಕೊಂಡು ಹೋಗುತ್ತಾರೆ. ಈ ಕಾರಣಗಳಿಗಾಗಿ ನಮ್ಮ ಎಮ್ಮೆಯ ವಂಶವೃಕ್ಷವನ್ನಿಡುವುದು ನನಗೆ ಅವಶ್ಯಕ.

ನಮ್ಮ ಮನೆಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತ ಎಂದು ಹೇಳಿದೆ. ನಮ್ಮ ಮನೆಯಲ್ಲಿ ಯಾವಾಗಲೂ ಎಮ್ಮೆಗಳು ಇದ್ದೇ ಇರುತ್ತವೆ. ಆದರೆ ಈ ಎಲ್ಲಾ ಎಮ್ಮೆಗಳೂ ಹಿರೇಗೌಡನಹಳ್ಳಿಯ ದೊಡ್ಡ ಎಮ್ಮೆಯ ತಳಿಗಳೆಂದು ನಮ್ಮ ಹಿರಿಯರು ಹಠದಿಂದ ವಾದಿಸುತ್ತಾರೆ. ಹಿರೇಗೌಡನಹಳ್ಳಿಯ ಆ ದೊಡ್ಡ ಎಮ್ಮೆಗೆ ಈಗಾಗಲೇ ಮೂವತ್ತು ನಲವತ್ತು ವರುಷಗಳಾಗಿರಬೇಕು. ಆದರೆ ಅದರ ತಳಿಗಳ ಸಂಖ್ಯೆ ಹೆಚ್ಚಾಗಿ ಬೆಳೆದಿರುವುದರಿಂದ ಯಾವುದರ ಅಪ್ಪ ಅಜ್ಜ ಯಾರು ಎಂದು ಗುರುತಿಸುವುದು ಅಸಾಧ್ಯವಾಗುತ್ತಿದೆ. ಆದರೆ ಇಷ್ಟು ಖಂಡಿತ . ನಮಗೆ ಗಾಳಿ, ನೀರು, ನದಿ, ಮರ, ಕೆರೆ,ಹೂವು, ಕಾಡು ಹೇಗೆ ಪ್ರಕೃತಿಯೋ ಹಾಗೆಯೇ ಎಮ್ಮೆಯೂ ಪ್ರಕೃತಿ. ಜನ ಬರಬಹುದು;

ಜನ ಹೋಗಬಹುದು; ಜನ ಹುಟ್ಟಬಹುದು; ಜನ ಸಾಯಬಹುದು; ರಾಜ ಬದಲಾಯಿಸಬಹುದು; ರಾಜ್ಯದಲ್ಲಿ ಕ್ರಾಂತಿಯಾಗಬಹುದು. ಆದರೆ ನಮ್ಮ ಕೊಟ್ಟಿಗೆಯಲ್ಲಿ ಮಾತ್ರ ಎಮ್ಮೆ ನಿತ್ಯ  ಪುರಾತನ; ಅಚಲ.

ಪ್ರಕೃತಿಯನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಸುಮ್ಮನೆ ನೋಡಬೇಕು. ಸಾಧ್ಯವಾದರೆ ಅನುಸರಿಸಬೇಕು. ನಮ್ಮ ಪೂರ್ವದ ಋಷಿಗಳು  ಪ್ರಕೃತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ. ಅದನ್ನು ಅನುಸರಿಸಿದರು. ಅದರ ಪೂಜಾರಿಗಳಾದರು. ಎಮ್ಮೆ ಪ್ರಕೃತಿಯಂತೆ; ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅದನ್ನು ಸುಮ್ಮನೆ ಅನುಸರಿಸಬೇಕು. ಮಹಾತ್ಮ ಗಾಂಧಿಯಂತಹ ಭಾರತ ಭಾಗ್ಯವಿಧಾತರಿಗೆ ಸಹ ಎಮ್ಮೆ ಅರ್ಥವಾಗಲಿಲ್ಲ. "ಎಮ್ಮೆ ಗೋಜಾತಿಗೆ ಸೇರಿದುದಲ್ಲ. ಇದರ ಬೆಳವಣಿಗೆಯಿಂದ ಭಾರತದಲ್ಲಿ ಗೋವುಗಳ ಪ್ರಾಬಲ್ಯ ಕಡಿಮೆಯಾಗಿದೆ. ಸಾಧ್ಯವಾದಷ್ಟು ಬೇಗ ಎಮ್ಮೆಗಳನ್ನು ಇಲ್ಲದಂತೆ ಮಾಡಬೇಕು. ಇದರ ಹಾಲು ಜನಕ್ಕೆ ಆರೋಗ್ಯವಲ್ಲ. ಹಸುವಿನ ಹಾಲಿನಲ್ಲಿರುವ ತ್ರಾಣ ಪುಷ್ಟಿ ಎಮ್ಮೆಯ ಹಾಲಿನಲ್ಲಿ ಇಲ್ಲ.  ಆದುದರಿಂದ ಎಮ್ಮೆಗಳನ್ನು ಇಲ್ಲದಂತೆ ಮಾಡಿ ಒಳ್ಳೆಯ ಜಾತಿಯ ಗೋವುಗಳನ್ನು ವೃದ್ಧಿ ಪಡಿಸುವುದೇ ಗೋಸೇವೆ" ಎಂದು ಮಹಾತ್ಮಗಾಂಧಿಯವರು ಸಾರಿ ಸಾರಿ ಹೇಳಿದ್ದಾರೆ. ನಮ್ಮ ಮನೆಯ ಎಮ್ಮೆಯ ಮುಖವನ್ನು ನೋಡಿದರೆ ಅದು ನನ್ನನ್ನು ನೋಡಿ ಕನಿಕರದಿಂದ "ಪಾಪ ಋಷಿಗಳಿಗೆ ಪ್ರಕೃತಿ ಅರ್ಥವಾಗಲಿಲ್ಲ. ಹಾಗೆಯೇ ಗಾಂಧಿಗೂ ನಾವು ಅರ್ಥವಾಗಿಲ್ಲ. ನಮ್ಮನ್ನು ಇಲ್ಲದಂತೆ ಮಾಡಬೇಕಂತೆ; ಹೇಗೆ ಮಾಡುತ್ತೀರಿ ? ಬೆಟ್ಟಗಳನ್ನು ಇಲ್ಲದಂತೆ ಮಾಡುತ್ತೀರಾ? ನದಿಗಳನ್ನು ಕಾಡುಗಳನ್ನು ಇಲ್ಲದಂತೆ ಮಾಡುತ್ತೀರಾ? ಪಾಪ, ಗಾಂಧಿಗೆ ಏನು ಗೊತ್ತು?" ಎಂದು ಹೇಳುವಂತೆ ತೋರುತ್ತದೆ. ಗಾಂಧಿಯವರ ತತ್ವವನ್ನು ಜ್ಞಾಪಕವಿಟ್ಟುಕೊಂಡಿರುವ ನಾನು ಆ ಎಮ್ಮೆಯ ಮುಂದೆ ಹೋದಾಗ ನಮ್ಮ ಮನಸ್ಸಿನಲ್ಲಿರುವುದನ್ನು ಅದು ತಿಳಿದಿರುವಂತೆ "ನನಗೆ ಎಲ್ಲಾ ಗೊತ್ತು" ಎಂಬುದಾಗಿ ತಲೆಯಲ್ಲಾಡಿಸುತ್ತದೆ. ಗಾಂಧಿಯವರ ತತ್ವವನ್ನು ತಿಳಿದುದೇ ನನ್ನ ತಪ್ಪು ಎಂಬ ಭಾವ ನನ್ನಲ್ಲಿ ಮೂಡಿ ನಾನು ಈ ಎಮ್ಮೆಗೆ ಅಪರಾಧಿ ಎಂದುಕೊಳ್ಳುತ್ತೇನೆ.

ನಮ್ಮ ದೇಶದಲ್ಲಿ ಜನಗಳಂತೆಯೇ ನಮ್ಮ ದೇಶದ ರಾಸುಗಳೂ, ಈಗಾಗಲೇ, ಪುಷ್ಟರಾದ ಜನ ನಮ್ಮಲ್ಲಿ ಎಲ್ಲಿಯೂ ಕಣ್ಣಿಗೆ ಬೀಳುವುದಿಲ್ಲ. ಎಲ್ಲರೂ ಗುಜ್ಜಾರಿಗಳೇ, ವಾಮನರೇ, ಇನ್ನು ಕೆಲವು ಕಾಲ ಕಳೆದರೆ ಇವರು ಮನುಷ್ಯರೋ ಎಂಬುದನ್ನು ಕುರಿತು ನೋಡಬೇಕಾಗುತ್ತದೆ. ಹೊಟ್ಟೆ ತುಂಬ ಆಹಾರವಿಲ್ಲದವನು ಬೆಳೆಯುವುದು ಹೇಗೆ? ಜನಕ್ಕೆ ಹೊಟ್ಟೆಗಿಲ್ಲದೆ ತಿರುಗುವಾಗ ದನಕ್ಕೆ ಏನು ಸಿಕ್ಕೀತು? ನಮ್ಮ ಹಸುಗಳು ಆಡು ಕುರಿಗಳಂತೆ ಆಗುತ್ತಿವೆ. ಆಹಾರ ನಿಪುಣರ ಸಲಹೆ ಪ್ರಕಾರ ನಮ್ಮಲ್ಲಿ ಪ್ರತಿಯೊಬ್ಬರೂ ಪ್ರತಿ ದಿನವೂ ಹತ್ತು ಔನ್ಸ್ ಹಾಲನ್ನಾದರೂ

ಕುಡಿಯಬೇಕಂತೆ. ಇಲ್ಲದಿದ್ದರೆ ನಮ್ಮ ಆರೋಗ್ಯ ಸರಿಯಾಗಿರುವುದಿಲ್ಲವಂತೆ. ಹಾಲು ಇರಲಿ. ಈ ನಲವತ್ತು ಕೋಟಿ ಜನಕ್ಕೆ ನಿತ್ಯ ಹತ್ತು ಔನ್ಸ್ ಗಂಜಲ ಸಹ ದೊರೆಯುವಷ್ಟು ಒಳ್ಳೆಯ ಹಸುಗಳು ನಮ್ಮ ದೇಶದಲ್ಲಿ ಇಲ್ಲ. ಎಮ್ಮೆ ವಿಶ್ವಾಮಿತ್ರನ ಸೃಷ್ಟಿಯೆಂದು ಹೇಳುತ್ತಾರೆ. ವಿಶ್ವಾಮಿತ್ರ ಕಾರುಣ್ಯ, ಸೇಡು, ಛಲ, ಮನುಷ್ಯತ್ವ, ಮಾನ, ರಸಿಕತೆಗಳ ಪ್ರತಿಬಿಂಬ. ವಸಿಷ್ಠನಂತೆ ಅವನು ಬರಿಯ ಒಣ ಕಾಷ್ಟವಲ್ಲ . ಅವನು ಅಂತಹ ಕರುಣಾಮೂರ್ತಿಯಾದುದರಿಂದಲೇ ತಾಯಿ–ತಂದೆಗಳಿಬ್ಬರಿಗೂ ಬೇಡವಾದ ಶುನಶ್ಯೇಪನನ್ನು ಯಜ್ಞ ಬಲಿಯಿಂದ ಉಳಿಸಿದನು. ಅವನು ಕರುಣಾಮೂರ್ತಿಯಾದುದರಿಂದಲೇ ವಸಿಷ್ಠನ ಮತ್ತು ಅವನ ಮಕ್ಕಳ ಕ್ರೋಧಕ್ಕೆ ತುತ್ತಾಗಿ ಚಂಡಾಲನಾಗೆಂದು ಶಪಿಸಲ್ಪಟ್ಟ ತ್ರಿಶಂಕುವಿನಿಂದ  ಯಜ್ಞ ಮಾಡಿಸಿ ಅವನನ್ನು ಸ್ವರ್ಗಕ್ಕೆ ಕಳುಹಿಸಿದನು. ಹೀಗೆ ಸಂಪ್ರದಾಯಗಳಿಗೆಲ್ಲಾ ವಿರೋಧವಾಗಿ ಕ್ರಾಂತಿಯನ್ನೆಬ್ಬಿಸಿದ ವಿಶ್ವಾಮಿತ್ರನ ಶಿಷ್ಯ ತ್ರಿಶಂಕುವಿಗೆ ಸಂಪ್ರದಾಯಶರಣನಾದ ಇಂದ್ರ ತನ್ನ ಸಂಸ್ಥಾನದಲ್ಲಿ ಸ್ಥಳ ಕೊಡಲಿಲ್ಲ. ತ್ರಿಶಂಕು ತಲೆಕೆಳಗಾಗಿ ಭೋ ಎಂದು ಕೂಗುತ್ತಾ ಭೂಮಿಗೆ ಬಿದ್ದನು. ಆ ಆರ್ತನಾದವನ್ನು ಕೇಳಿ ಕರುಣಾಮಯನಾದ ವಿಶ್ವಾಮಿತ್ರ ಅವನಿಗೆ ಒಂದು 'ಪಾಕಿಸ್ತಾನ'ವನ್ನೇ ನಿರ್ಮಿಸಿದನು. ಹೊಸ ಜಗತ್ತನ್ನೇ ಸೃಷ್ಟಿ ಮಾಡಿದನು. ತೆಂಗಿನಮರಕ್ಕೆ ಬದಲು ಈಚಲು ಮರವನ್ನು ಸೃಷ್ಟಿಸಿದನು. ಹಸುವಿಗೆ ಬದಲು ಎಮ್ಮೆಯನ್ನು ಸೃಷ್ಟಿಸಿದನು. ವಿಶ್ವಾಮಿತ್ರ ಮಾಡಿದುದೇ ಸರಿ ಎಂಬಂತೆ ತೆಂಗಿನಮರದಿಂದಲೂ ಹೆಂಡವನ್ನೇ ತೆಗೆಯುತ್ತಿದ್ದಾರೆ. ವಿಶ್ವಾಮಿತ್ರ ಎಮ್ಮೆಯನ್ನು ಸೃಷ್ಟಿಸಲು ತನ್ನಲ್ಲಿದ್ದ ನಂದಿನೀ ಧೇನುವನ್ನು ವಿಶ್ವಾಮಿತ್ರನಿಗೆ ಕೊಡಲಿಲ್ಲ. ವಿಶ್ವಾಮಿತ್ರ ಕೋಪದಿಂದ ಹಸುವಿಗಿಂತ ಹೆಚ್ಚು ಹಾಲು ಕೊಡುವ ಎಮ್ಮೆಯನ್ನೇ ಸೃಷ್ಟಿಸಿದನು. ವಿಶ್ವಾಮಿತ್ರ ಮೈಸೂರಿನವನೇ ಆಗಿರಬೇಕು. ಆದುದರಿಂದಲೇ ಇಲ್ಲಿ ಎಮ್ಮೆಗಳು ಹೆಚ್ಚು; ಈ ದೇಶಕ್ಕೂ ಎಮ್ಮೆಯ ದೇಶವೆಂದು ಹೆಸರು.

ನಮ್ಮಲ್ಲಿ ಸ್ವಲ್ಪ ಬುದ್ಧಿ ಮಂಕಾಗಿರುವವನನ್ನು' ಎಮ್ಮೆಯ ಹಾಲು ಕುಡಿದವನು' ಎಂದು ಹಾಸ್ಯ ಮಾಡುತ್ತಾರೆ . ಹಾಲು ಬೆಳ್ಳಗಿದೆಯೋ ಕಪ್ಪಾಗಿದೆಯೋ ಎಂಬುದನ್ನು ನಮ್ಮ ದೇಶದ ಅನೇಕ ಹಳ್ಳಿಗಳವರು ಕಾಣರು. ಹಾಲು ಹಸುವಿನಿಂದ ಬರುತ್ತದೆ ಎಂಬುದು ಅನೇಕರಿಗೆ ಗೊತ್ತಿಲ್ಲ. ನಮ್ಮೂರಿನಿಂದ ಕೊಡಗಿಗೆ ಒಂದು ಸಲ ಬಸ್ಸಿನಲ್ಲಿ ಹೋಗುತ್ತಿದ್ದೆ. ಬಸ್ಸಿನ ಪ್ರಯಾಣಿಕರ ಪೈಕಿ ಒಬ್ಬ ಹೆಂಗಸು ಒಂದು ಚಿಕ್ಕ ಮಗುವನ್ನು ಎತ್ತಿಕೊಂಡು ಕುಳಿತಿದ್ದರು. ಮಗು ಸಾಯುವಂತೆ ಇತ್ತು. ಹತ್ತು ಹದಿನೈದು ದಿನಗಳಿಂದ ಜ್ವರ ಬರುತ್ತಿದೆ ಎಂದು ಆಕೆ ಮತ್ತೊಬ್ಬರೊಂದಿಗೆ ಹೇಳುತ್ತಿದ್ದಳು. ಮಧ್ಯಾಹ್ನ ಒಂದು ಗಂಟೆಯ ಉರಿಬಿಸಿಲಿನಲ್ಲಿ ಬಸ್ಸು ಒಂದು ಹಳ್ಳಿಯ ಮುಂದೆ ನಿಂತಿತು. ತಾಯಿ ಎತ್ತಿಕೊಂಡಿದ್ದ ಮಗು ಮೆತ್ತಗೆ ಸಣ್ಣದನಿಯಲ್ಲಿ ಅಳಲು ಪ್ರಾರಂಭಿಸಿತು. ಅದರ

ಗಂಟಲಿನಿಂದ ಧ್ವನಿ ಹೊರಡುವುದೇ ಕಷ್ಟವಾಗಿತ್ತು. ತಾಯಿ ಸ್ವಲ್ಪ ಹಾಲು ಕುಡಿಸಬೇಕು ಎಂದುಕೊಂಡು ಮೇಲೆ ಇಟ್ಟಿದ್ದ ಬುಟ್ಟಿಯನ್ನು ಕೆಳಕ್ಕೆ ತೆಗೆಸಿಕೊಂಡಳು. ಬುಟ್ಟಿಯೊಳಗೆ ಒಂದು ಸೀಸೆಯಲ್ಲಿ ಇಟ್ಟಿದ್ದ ಹಾಲು ಚೆಲ್ಲಿ ಬುಟ್ಟಿಯ ಬಟ್ಟೆ ನೆನೆದಿದ್ದಿತು. ಹಾಲು ಇರಲಿಲ್ಲ. ಮಗು ಹಸಿವಿನಿಂದ ಸಾಯುವಂತೆ ಅರಚುತ್ತಾ ಕೈಕಾಲು ಬಡಿಯುತ್ತಿದ್ದಿತು. ನಮಗೆಲ್ಲಾ ಅದು ಹಾಲಿಲ್ಲದಿದ್ದರೆ ಸಾಯುವುದೆಂದು ಖಂಡಿತವಾಗಿದ್ದಿತು. ಆ ಹಳ್ಳಿಯಲ್ಲಿ ಮೂವತ್ತು ಮನೆಗಳಿವೆ. ನಾವೆಲ್ಲ ಇಳಿದು ಊರಿನೊಳಕ್ಕೆ ಹೋದೆವು. ಮೂವತ್ತು ಮನೆಗಳನ್ನು ವಿಚಾರಿಸಿದೆವು. ಸೇರಿಗೆ ಒಂದು ರೂಪಾಯಿ ಕೊಡುವುದಾಗಿ ಹೇಳಿದೆವು. ಆದರೆ ಹಾಲು ಸಿಕ್ಕಲಿಲ್ಲ. ಒಂದು ಮನೆಯಲ್ಲಿಯೂ ಕರೆಯುವ ಹಸುವಾಗಲಿ ಎಮ್ಮೆಯಾಗಲಿ ಇರಲಿಲ್ಲ. ಹಳ್ಳಿಗರು ತಿಂಗಳಿಗೆ ಒಂದು ದಿನವೂ ಮಜ್ಜಿಗೆ ಕುಡಿಯುತ್ತಿರಲಿಲ್ಲ.

ಇಂತಹ ದೇಶದಲ್ಲಿ ಎಮ್ಮೆಯ ಹಾಲು ಕುಡಿದರೆ ಬುದ್ಧಿ ಮಂದ; ಹಸುವಿನ ಹಾಲು ಕುಡಿ ಎಂದು ಹೇಳುವುದು ಹೊಟ್ಟೆಗೆ ಅನ್ನ ಒದಗಿಸಲು ಚೈತನ್ಯ ವಿಲ್ಲದವನ ಮಗುವಿಗೆ ಶಕ್ತಿ ಬರುವುದಕ್ಕಾಗಿ ಗ್ಲೂಕೋಸ್, ಓವಲ್ಟೀನ್ ಸೇವಿಸು ಎಂಬಂತೆ. ವಸಿಷ್ಠ ಶ್ರೀಮಂತ. ( ಅರಿಷ್ಟೋಕ್ರಾಟ್) ಪಂಗಡಕ್ಕೆ ಸೇರಿದವನು. ಆತನ ಗೋವು ನಂದಿನಿಧೇನು ಯಜ್ಞಕ್ಕೆ ಹಾಲನ್ನು ಘೃತವನ್ನೂ ಒದಗಿಸುವುದು. ದೇವತಾರಾಧನೆಗೆ ಅಮೃತವನ್ನು ಒದಗಿಸುವುದು. ಆದರೆ ಅದರ ಹಾಲು ಎಲ್ಲರಿಗೂ ಸಾಲದು; ಗೋವಿನ ಹಾಲು ಅತಿ ಸಾತ್ವಿಕ, ವಸಿಷ್ಠಋಷಿಗಳಂತೆಯೇ, ಮೇನಕೆಯ ನರ್ತನವನ್ನು ನೋಡಿ ಮುಗ್ಧನಾಗಿ ಇಂದ್ರಿಯಗಳ ಮೇಲಿನ ಹಿಡಿತವನ್ನು ಸಡಿಲಿಸಿ ಆಕೆಯೊಂದಿಗೆ ಹತ್ತು ವರ್ಷ ವಿಲಾಸಿಯಾಗಿ "ನೀನು ಇಲ್ಲಿ ಬಂದುದು ನೆನ್ನೆ ಅಲ್ಲವೇ" ಎಂದು ಆಕೆಯನ್ನು ಕೇಳಿದ ರಸಿಕತೆ ಕಾವು ರಾಜಸ ಗುಣಗಳುಳ್ಳ ರಾಜಋಷಿಯ ಸೃಷ್ಟಿ ಎಮ್ಮೆಯ ಹಾಲು. ವಸಿಷ್ಠನ ಎದುರಿಗೆ ನೂರು ಮೇನಕೆಯರು ನೂರು ಭಾವ ಭಂಗಿಗಳಲ್ಲಿ ನೂರು ವರುಷ ಕುಣಿದಿದ್ದರೂ ಆ ಕಾಷ್ಠ ಚಿಗುರುತ್ತಿರಲಿಲ್ಲ. ಆದರೆ ಮನುಷ್ಯನೇ ಆಗಿದ್ದ ವಿಶ್ವಾಮಿತ್ರ ಮೇನಕೆಗೆ ಮನಸೋತ ಅದೇ ರಾಜಸ ಗುಣ . ಕಲಿಯುಗದಲ್ಲಿ ಬೇಕಾದದ್ದು ಶುದ್ಧ ಸಾತ್ವಿಕವಲ್ಲ ; ಅದು ಅತಿ ಬಿಳುಪು ; ಶುದ್ಧ ತಾಮಸವೂ ಅಲ್ಲ; ಅದು ಅತಿ ಕಪ್ಪು. ಬೇಕಾದುದು ಕೆಂಪು ರಾಜಸ ಗುಣ. ಕಲಿಯುಗದಲ್ಲಿ ಧರ್ಮಕ್ಕೆ ಮೂರು ಕಾಲು ಇಲ್ಲವೆಂಬಂತೆ, ಸಾತ್ವಿಕ ಗುಣಕ್ಕೆ ಸ್ಥಾನವೇ ಇಲ್ಲ. ಅದು ರಸ. ಆದರೆ ತಾಮಸ ಗುಣ ಬೇಕಾಗಿಲ್ಲ; ಅದು ವಿರಸ. ಬೇಕಾದುದು ಸಮರಸ. ಅದೇ ರಾಜಸ. ಕಾಫಿ ಈ ರಾಜಸ ಗುಣದ ಗುರುತು. ಅದು ಕೃತಯುಗದ ಅಮೃತದಂತಹ ಸಾತ್ವಿಕ ವಸ್ತುವೂ ಅಲ್ಲ. ಕಲಿಯುಗದ ಕಳ್ಳು ಸಾರಾಯಿನಂತಹ ತಾಮಸ ವಸ್ತುವೂ ಅಲ್ಲ. ಕಲಿಯುಗದ ನಾಗರಿಕತೆಯ ಶಿಖರ ಕಾಫಿ. ಸ್ವಭಾವದಿಂದ ಋಷಿಯಾದ ವಿಶ್ವಾಮಿತ್ರನಿಗೆ ಈ ರಹಸ್ಯ ಭವಿಷ್ಯ ತಿಳಿಯಿತು. ಆತ ರಾಜಸ ಕಾಫಿಗೆ ಅನುಗುಣವಾಗದ ರಾಜಸ ಎಮ್ಮೆಗಳನ್ನು ಸೃಷ್ಟಿ ಮಾಡಿದ.

ಎಮ್ಮೆಯ ಹಾಲು ಸೇರದ ಕಾಫಿ ಕಾಫಿಯೇ ಅಲ್ಲ; ಸ್ವರ್ಗಲೋಕದಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ಬಂದು ಎಲ್ಲೆಲ್ಲೂ ಪಾನನಿರೋಧಕ ಕಾನೂನು ಜಾರಿಯಾಯಿತಷ್ಟೆ. ಅಮೃತವನ್ನೆಲ್ಲಾ ಉಗ್ರಾಣಗಳಲ್ಲಿ ಹಾಕಿ ಸೀಲು ಮಾಡಿಬಿಟ್ಟರು. ಅಮೃತಪಾನದಿಂದ ಮತ್ತರಾಗುವುದರಲ್ಲಿ ನಿರತರಾಗುತ್ತಿದ್ದ ಇಂದ್ರಾದಿಗಳು ಸಹ ಗುಟ್ಟಿನಲ್ಲಿ ಎಮ್ಮೆಯ ಹಾಲನ್ನು ಕಾಫಿ ಮಾಡಿಕೊಂಡು ಕುಡಿದು ಸ್ವಲ್ಪ ತುಷ್ಟರಾದರಂತೆ.

ಇಂತಹ ಪೂರ್ಣ ಪುರುಷ ವಿಶ್ವಾಮಿತ್ರನಿಂದ ಪ್ರತಿ ಜಗತ್ತಿನ ಸೃಷ್ಟಿಯಾದುದರಿಂದಲೇ ಎಮ್ಮೆ ಮೂಲ ಜಗತ್ತಿನ ಹಸುವಿಗಿಂತ ಹೆಚ್ಚು ಬಲವಾಗಿದೆ. ಹೆಚ್ಚು ಒರಟಾಗಿದೆ. ಹೆಚ್ಚು ಕಪ್ಪಾಗಿದೆ; ಹೆಚ್ಚು ದಪ್ಪನಾಗಿದೆ. ಎಮ್ಮೆಯಲ್ಲಿ ಹಾಲು ಹೆಚ್ಚು ಬೆಣ್ಣೆಯೂ ಹೆಚ್ಚು. ಇಂತಹ ಪ್ರಾಣಿಯ ಹಾಲನ್ನು ತೆಗೆದುಕೊಳ್ಳುವವರಿಗೆ ಬುದ್ಧಿ ಮಂಕು ಎಂದು ಹೇಳುವವರ ಬುದ್ಧಿಗೆ ಏನು ಹೇಳೋಣ? ನಮ್ಮ ಮೈಸೂರಿನವರ ಬುದ್ಧಿ ಮಂಕೆ ? ಇವರನ್ನು ನೋಡಿದ ಕೂಡಲೇ ಇವರು ಎಮ್ಮೆಯ ಹಾಲನ್ನು ಕುಡಿದವರೆಂಬುದು ಗೊತ್ತಾಗುವುದಿಲ್ಲವೆ? ಎಮ್ಮೆಯ ಹಾಲನ್ನು ಕುಡಿಯುವವರ ಬುದ್ಧಿ ಇರಲಿ ಸ್ವತಹ ಎಮ್ಮೆಯೇ ಬಹು ಚುರುಕಾದ ತೀಕ್ಷ್ಣ ಬುದ್ಧಿಯ ಪ್ರಾಣಿ. ಎಮ್ಮೆಯನ್ನು ಅನುಸರಿಸಿಕೊಂಡು ಅದರ ಜೊತೆಯಲ್ಲಿ ಓಡಾಡುತ್ತಿರುವವರಿಗೆ ಇದು ಗೊತ್ತಾಗುವುದೇ ಹೊರತು ಎಲ್ಲಿಯೋ ದೂರದಿಂದ ಅದರ ಕಪ್ಪು ಮೈಯ್ಯನ್ನು ನೋಡುವವರಿಗೆ ಖಂಡಿತ ಗೊತ್ತಾಗುವುದಿಲ್ಲ. ಬುದ್ಧಿಯ ವಿಷಯ ಒಂದೇ ಅಲ್ಲ. ಎಮ್ಮೆಗೆ ಮಾತು ಸಹ ತಿಳಿಯುವುದು. ಒಂದು ಉದಾಹರಣೆ ಕೇಳಿ.

ನಮ್ಮ ಮನೆಯ ಎಮ್ಮೆ – ಇದು ಸಾಧಾರಣವಾಗಿ ಕರು ಹಾಕಬೇಕಾದರೆ ನಿಂತುಕೊಂಡೆ ಕರುವನ್ನು ಎಸೆದುಬಿಡುತ್ತಿದ್ದಿತು. ಅಂತಹ ಒರಟು ಪ್ರಾಣಿ ! ಹೊಟ್ಟೆಯಿಂದ ಹೊರಕ್ಕೆ ಬರುವಾಗಲೇ ಅಂತಹ ಒದೆತದೊಂದಿಗೆ ರಭಸದಿಂದ ಭೂಮಿಗೆ ಬಿದ್ದ ಹೊಸ ಎಳೆಗರು ಪಾಪ, ಚೇತರಿಸಿಕೊಳ್ಳುವುದಕ್ಕೆ ಎರಡು ಮೂರು ಗಂಟೆ ಬೇಕಾಗುತ್ತಿತ್ತು. ಪ್ರಪಂಚ ಏನು ಸುಖವಿಲ್ಲ. ಇಲ್ಲಿ ಒದೆತಗಳೇ ಜಾಸ್ತಿ ತಾಯಿ, ತಂದೆ, ಅಣ್ಣ, ತಮ್ಮ, ಹೆಂಡತಿ, ಅಪ್ಪ, ಮಗ ಎಲ್ಲರೂ ಒಬ್ಬರನೊಬ್ಬರು ಒದೆಯುತ್ತಾರೆ, ಬಡಿಯುತ್ತಾರೆ. ಜಗತ್ತಿಗೆ ಬರುವುದು ಸುಖಕ್ಕಲ್ಲ ಎಂಬುದು ಬಡಪಾಯಿ ಎಳೆಗರುವಿಗೆ ಬರುವಾಗಲೇ ಗೊತ್ತಾಗುತ್ತದೆ. ಹೋಗು, ನಿನ್ನ ಪಾಪಗಳಿಗೆ ಅಲ್ಲಿ ಅನುಭವಿಸು ಎಂದು ತನ್ನನ್ನು ತಂದು ಹೊರಕ್ಕೆ ದೂಡಿದಂತಾಗಿ ಕರು ಭೂಮಿಯ ಮೇಲೆ ಎರಡು ಗಂಟೆ ಬಿದ್ದಿದ್ದು ಮುಂದಿನ ಕಷ್ಟಗಳಿಗೆ ಸಿದ್ಧವಾಗುತ್ತದೆ. ಹೀಗೆ ಎಮ್ಮೆ ಎರಡು ಮೂರು ಸಲ ಕರುವನ್ನು ಎಸೆದುದನ್ನು ನೋಡಿ ನನ್ನ ಆಳು ತೂರ "ಮುಂದಿನ ಸಲ ಕರ ಎಸೆಯುವುದಕ್ಕೆ ಬಿಡಕೂಡದು. ಗೋಣಿಚೀಲ ಹಿಡಿದುಕೊಂಡು ಕರು ಆತುಕೋಬೇಕು" ಎಂದ. ಎಮ್ಮೆ ಮುಂದಿನ ಸಲ ಗಬ್ಬವಾಗಿ ಈಯುವ ಕಾಲವೂ ಬಂದಿತು .

ಬೆಳಗ್ಗೆ ತೂರ ನನ್ನೊಂದಿಗೆ "ಇವತ್ತು ಸಾಯಂಕಾಲ ಎಮ್ಮೆ ಕರ ಹಾಕುತ್ತೆ" ಎಂದ. ಆ ವಿಷಯ ಅವನಿಗೆ ಚೆನ್ನಾಗಿ ಅನುಭವ. ಈ ವಿಚಾರಗಳು ಇವನಿಗೆ ಇಷ್ಟು ಖಂಡಿತವಾಗಿ ಹೇಗೆ ಗೊತ್ತಾಗುವುದೆಂದು ನಾನು ಅನೇಕ ಬಾರಿ ಆಶ್ಚರ್ಯಪಟ್ಟಿದ್ದೇನೆ. ತೂರ ಎಮ್ಮೆಗೆ ಕೇಳಿಸುವಂತೆ "ಇರಲಿ ನಿನಗೆ ಮಾಡುತ್ತೇವೆ ಕರ ಎಸೀತೀಯ" ಎಂದ. ನನ್ನೊಂದಿಗೆ "ಗೋಣಿಚೀಲ ಹಿಡಿದುಕೊಂಡು ಆತುಕೋಬೇಕು" ಎಂದ. ಆ ಮಾತನ್ನು ಕೇಳಿ ಎಮ್ಮೆ ಸರ್ರನೆ ಒಂದು ಸಲ ನನ್ನ ಕಡೆ ತಿರುಗಿತು. ಆ ನೋಟವನ್ನು ನೋಡಿ ನಾನು ಬೆಚ್ಚಿಬಿದ್ದೆ. ಒಬ್ಬನನ್ನು ನೀವು ಮನಸ್ಸಿನಲ್ಲಿಯೇ ಬೈದುಕೊಂಡು ಹೋಗುತ್ತಿರುವಾಗ ಆತ ನಿಮ್ಮ ಎದುರಿಗೆ ಬಂದು ನಿಂತರೆ ಹೇಗಾಗುವುದೋ ಹಾಗೆ ಆಯಿತು. ಆ ಕ್ಷಣದಲ್ಲಿ ಇದಕ್ಕೆ ಬುದ್ಧಿ ಇದೆ, ಮಾತು ತಿಳಿಯುತ್ತದೆ; ಕಿವಿಯೂ ಕೇಳಿಸುತ್ತದೆ ಎಂಬ ಭಾವ ಉಂಟಾಯಿತು. ಇದರಿಂದ ನನ್ನ ಮನಸ್ಸಿನಲ್ಲಿ ಹೇಗೆ ಹೇಗೋ ಆಯಿತು.

ಹಿಂದೆ ಹಾಲಿವುಡ್ ಸಿನಿಮಾ ತಾರೆಯರು ನೀಗ್ರೋ ಪುರುಷರನ್ನು ಪುರುಷ ರಾಗಿಯೇ ಪರಿಗಣಿಸದೆ ಅವರ ಎದುರಿಗೆ ಅಸ್ತವ್ಯಸ್ತವಾಗಿ ಉಡುಪುಗಳನ್ನು ಧರಿಸಿ ಅಂತಃಪುರದಲ್ಲಿ ತಿರುಗಾಡುತ್ತಿದ್ದರಂತೆ . ನೀಗ್ರೋಗಳು ನಾಗರಿಕ ಜನಾಂಗ ಎಂದು ಆದ ಮೇಲೆ ಅವರಿಗೆ ಬಹಳ ಬೇಜಾರಾಯಿತಂತೆ. ನನ್ನ ವಿಷಯವು ಹಾಗೆಯೇ ಆಯಿತು. ಎಮ್ಮೆಗೆ ಮಾತು ತಿಳಿಯುವುದಿಲ್ಲ ಎಂದು ಅದರ ಎದುರಿಗೆ ಮನಸ್ಸಿಗೆ ಬಂದುದನ್ನು ಹರಟುತ್ತಿದ್ದ ನನಗೆ ನಮ್ಮ ಎಮ್ಮೆಯ ಆ ನೋಟವನ್ನು ನೋಡಿ ಗಾಬರಿಯಾಯಿತು. ಎಮ್ಮೆ 'ಆಗಲಿ' ಎನ್ನುವಂತೆ ನನ್ನ ಕಡೆ ನೋಡಿತು. ಆ ನೋಟ ಅದರ ಮುಖದಲ್ಲಿ ಕಂಡುದು ಒಂದೇ ಕ್ಷಣ. ಮರುಕ್ಷಣ ಎಮ್ಮೆ ಮುಖವನ್ನು ಬೇರೆ ಕಡೆ ತಿರುಗಿಸಿ ಕೊಂಡಿತು. ಅದರ ಕಣ್ಣಿನಲ್ಲಿ ನನಗೆ ಆ ಮೊದಲಿನ ತಿಳಿವಿನ ನೋಟ ಈಗ ಕಾಣಲಿಲ್ಲ. ಎಮ್ಮೆ ನಿಮಿಷ ನಿಮಿಷಕ್ಕೂ ತಿರುಗತೊಡಗಿತು. ನಾವು ನಿಮಿಷ ನಿಮಿಷಕ್ಕೂ ಕೊಕ್ಕಿನ ಆಟದಲ್ಲಿಯಂತೆ ಹಾರ ತೊಡಗಿದೆವು. ಸರ್ಕಸ್ ನಲ್ಲಿ ಮೇಲುಗಡೆ ಒಬ್ಬ ಆಟಗಾರ ಸಾಧನೆ ಮಾಡುತ್ತಿರುವಾಗ ಅವನ ಕೈ ಕಾಲು ಜಾರಿತೆಂಬ ಭಯದಿಂದ ಕೆಳಗಡೆ ಹತ್ತಾರು ಜನ ಬಂದು ಜಮಖಾನ ಹಿಡಿದುಕೊಂಡು ಅವನ ನೇರದಲ್ಲಿ ತಿರುಗುವುದನ್ನು ನೀವು ಕಂಡಿದ್ದೀರಿ. ನಮಗೂ ಎಮ್ಮೆಗೂ ಉಂಟಾದ ಸ್ಪರ್ಧೆ ಈ ಬಗೆಯದಾಯಿತು. ಬರಬರುತ್ತಾ ಎಮ್ಮೆ ನಿಮಿಷಕ್ಕೆ ಎರಡು ಸಲ ತಿರುಗಲು ಪ್ರಾರಂಭಿಸಿತು. ಅದು ಈ ವಿನೋದದಲ್ಲಿ ಕರು ಹಾಕಬೇಕೆಂಬುದನ್ನು ಪೂರ್ಣವಾಗಿ ಮರೆತಂತೆ ತೋರಿತು. ಈ ಓಡಾಟದಲ್ಲಿ ಎಮ್ಮೆ ಗಿಂತ ನಮಗೆ ಹೆಚ್ಚು ಸುಸ್ತಾಗಿ ನಮ್ಮ ಅಳ್ಳೆಗಳು ಹೊಡೆದುಕೊಳ್ಳತೊಡಗಿದವು. ಎಮ್ಮೆ ಮಾತ್ರ ಹಿಂದಿನ ಚೇಷ್ಟೆಯ ನಗುವಿನಿಂದ ಮತ್ತೆ ನನ್ನ ಕಡೆ ನೋಡಿತು. ಇದು ಸದ್ಯಕ್ಕೆ ಕರು ಹಾಕುವುದಿಲ್ಲ. ಇನ್ನೂ ಒಂದು ಗಂಟೆ ಬಿಟ್ಟು ಬರೋಣವೆಂದು ನಾನೂ ತೂರನೂ ಚೀಲವನ್ನು

ಒಂದು ಮೂಲೆಗಿಟ್ಟು ಒಳಕ್ಕೆ ಹೋದೆವು. ಒಂದು ನಿಮಿಷದೊಳಗಾಗಿ ಕೊಟ್ಟಿಗೆಯಲ್ಲಿ ದೊಪ್ಪೆಂದು ಸದ್ದಾಯಿತು. ಹೋಗಿ ನೋಡಿದರೆ ಎಮ್ಮೆ ಪದ್ಧತಿಯಂತೆ ನಿಂತುಕೊಂಡೇ ಎರಡು ಮಾರು ಆಚೆಗೆ ಕರುವನ್ನು ಎಸೆದಿದ್ದಿತು.

ಹೀಗೆ ತನ್ನನ್ನು ಅವಮಾನಮಾಡಿದುದರಿಂದಲೋ ಎಂಬಂತೆ ಪ್ರತಿ ಸಲವೂ ಸರಾಗವಾಗಿ ಹಾಲು ಕೊಡುತ್ತಿದ್ದ ಎಮ್ಮೆ ಈ ಕರು ಹಾಕಿದ ಮೇಲೆ ಹಾಲು ಕರೆಯುವುದಕ್ಕೆ ಹೋದರೆ ಒದೆಯುವುದನ್ನು ಪ್ರಾರಂಭಿಸಿತು. ಆಗ ಅದಕ್ಕೆ ತವುಡು, ಹಿಂಡಿ, ಹತ್ತಿಬೀಜ ಮುಂತಾದ ತಿಂಡಿಗಳನ್ನು ಎರಡು ಹೊತ್ತೂ, ಕರೆಯುವ ವೇಳೆಯಲ್ಲಿ ಇಡತೊಡಗಿದೆವು. ತಿಂಡಿಯನ್ನು ತನ್ನ ಮುಂದೆ ಇಟ್ಟಾಗ ಎಮ್ಮೆ "ತನ್ನಿ, ನೀವೇನೋ ಪರೋಪಕಾರ ದೃಷ್ಟಿಯಿಂದಲೂ, ಗೋಸೇವಾ ಬುದ್ಧಿಯಿಂದಲೂ ತರುತ್ತಿಲ್ಲ. ನನ್ನ ಹಾಲು ಬೇಕಾಗಿದೆ. ಅದಕ್ಕಾಗಿ ತರುತ್ತಿದ್ದೀರಿ" ಎನ್ನುವಂತೆ ನಮ್ಮ ಕಡೆ ನೋಡುತ್ತಿದ್ದಿತು. ಬೆಳಗಿನ ಕಾಫಿ ನಮಗೆ ಹೇಗೆ ಸಕಾಲಕ್ಕೆ ಆಗಬೇಕೋ ಹಾಗೆ ಎಮ್ಮೆಗೆ ತಿಂಡಿ ಸಕಾಲಕ್ಕೆ ಆಗಬೇಕಾಗಿದ್ದಿತು. ಒಂದು ದಿವಸ ತಿಂಡಿ ಇಟ್ಟು ಹಾಲು ಕರೆಯುವುದಕ್ಕೆ ನನ್ನ ಹೆಂಡತಿ ಬರುವುದು ಬೆಳಗ್ಗೆ ಹತ್ತು ಗಂಟೆಯಾಯಿತು. "ಇಷ್ಟು ಹೊತ್ತು ಯಾಕೆ ? ಹೊತ್ತಿಗೆ ಮುಂಚೆ ಕರೆಯುವುದಕ್ಕೇನು ಕಷ್ಟ? ಈಗ ಕೊಡುತ್ತದೆಯೇ?" ಎಂದೆ ನನ್ನ ಹೆಂಡತಿ " ಕೊಡದೆ ಅದಕ್ಕೇನು ರೋಗ ? ಹೊಟ್ಟೆ ಬಿರಿಯುವ ಹಾಗೆ ತಿಂಡಿ ತಿನ್ನುತಿಲ್ಲವೇ?" ಎಂದಳು. ಎಮ್ಮೆ ಒಂದುಸಲ ಸರ್ರನೆ ಅವಳ ಕಡೆ ನೋಡಿತು. ಆ ನೋಟದಲ್ಲಿ ಆ ಹಿಂದಿನ ತಿಳಿವು ಕಾಣುತ್ತಿದ್ದಿತು. ಎಮ್ಮೆಯ ಭಾಷೆ ನನಗೆ ಅರ್ಥವಾಯಿತು. ನನ್ನ ಹೆಂಡತಿ ಅದರ ಮೊಲೆಯನ್ನು ಎಷ್ಟು ಹೀಜಿದರೂ ಎಮ್ಮೆ ಸೋರು ಬಿಡಲಿಲ್ಲ. ಬಾಂಡಲೆಯಲ್ಲಿದ್ದ ತಿಂಡಿಯೆಲ್ಲ ಮುಗಿಯಿತು. ತಿಂಡಿ ಹೊಡೆಯುವುದಕ್ಕೆ ಇದೊಳ್ಳೆ ಅಭ್ಯಾಸ ಮಾಡಿಕೊಂಡಿತು, ಹಾಳು ಮುಂಡೇದು" ಎಂದುಕೊಂಡು ನನ್ನ ಹೆಂಡತಿ ಮತ್ತೊಂದು ಬಾಂಡಲೆ ತಿಂಡಿ ತರಲು ಒಳಕ್ಕೆ ಹೋದಳು. ಅವಳು ಒಳಗಿನಿಂದ ತಿಂಡಿ ತರುತ್ತಿರುವಾಗ ಎಮ್ಮೆ ಮತ್ತೆ ದುರದುರನೆ ನೋಡಿತು. " ತನ್ನಿ ತನ್ನಿ. ಇಲ್ಲದಿದ್ದರೆ ನೀವು ತರುತ್ತೀರಾ" ಎಂಬಂತೆ ಕಣ್ಣು ಮಿಟುಕಿಸಿತು. " ಇದು ಈ ಉಪಾಯ ಮಾಡಿಕೊಳ್ಳದೆ ಸುಮ್ಮನೆ ಸಾಧುವಾಗಿ ಹಾಲು ಕೊಟ್ಟಿದ್ದರೆ ಹೀಗೆ ನಿತ್ಯ ಇದಕ್ಕೆ ಎರಡು ಹೊತ್ತು ತಿಂಡಿ ಇಡುತ್ತಿದ್ದಿರಾ" ಎಂದು ನಾನು ನಕ್ಕೆ. ಹೀಗೆ ಅಂದು ಎಮ್ಮೆಗೆ ತಿಂಡಿ ಎರಡು ಸಲ ಇಡಬೇಕಾಗಿ ಬಂದುದರಿಂದ ಅಲ್ಲಿಂದ ಮುಂದೆ ನನ್ನ ಹೆಂಡತಿ ಎಮ್ಮೆಗೆ ಸಕಾಲದಲ್ಲಿ ಇಟ್ಟು ಹಾಲು ಕರೆಯುತ್ತಿದ್ದಳು.

ಈ ಎಮ್ಮೆಯನ್ನು ಸಾಧಾರಣವಾಗಿ ನನ್ನ ಹೆಂಡತಿಯೇ ಕರೆಯುವ ಅಭ್ಯಾಸವಿದ್ದಿತು. ಒಂದು ಸಲ ಎಂಟು ದಿವಸ ಅವಳು ನರಸೀಪುರದ ತೇರಿಗೆ ಹೋದಳು. ನಾನೇ ತಿಂಡಿ ಕಲಸಿ ಎಮ್ಮೆಗೆ ತೆಗೆದುಕೊಂಡು ಹೊರಟೆ. ತೂರ "ಹಿಂಡಿ ಸಾಲದು. ಇನ್ನೊಂದು ಹಿಡಿ ರಾಗಿ ಹಿಟ್ಟು ಹಾಕಿ" ಎಂದ. ನಾನು " ಸರಿ ಸರಿ. ಜನರಿಗೆ ತಿನ್ನುವುದಕ್ಕೆ

ರಾಗಿ ಇಲ್ಲ; ಹನುಮಂತರಾಯ ಹಗ್ಗ ಮೇಯ್ತಿರೋವಾಗ ಪೂಜಾರಿ ಶಾವಿಗೆ ಬೇಡಿದ ಹಾಗೆ ಆಯಿತು. ನಡಿ ಸಾಕು" ಎಂದು ತಿಂಡಿಯನ್ನು ತೆಗೆದುಕೊಂಡು ಹೋಗಿ ಎಮ್ಮೆಯ ಮುಂದೆ ಇಟ್ಟು ನಾನೇ ಹಾಲು ಕರೆಯಲು ಕುಳಿತೆ. ಎಮ್ಮೆ ಒಂದು ಸಲ ತಿಂಡಿ ಮೂಸಿ ನೋಡಿತು. ನಾನು ಹಾಲು ಕರೆಯಲು ಕೈಯಲ್ಲಿ ಹಿಡಿದಿದ್ದ ಪಾತ್ರೆ ಕೆಳಕ್ಕೆ ಬೀಳುವಂತೆ ಪಟಾರನೆ ಒದೆಯಿತು. ನಾನು ತೂರನಿಗೆ " ನಿನ್ನ ಮಾತು ನಿಜ. ಇದಕ್ಕೆ ರಾಗಿ ಹಸಿಹಿಟ್ಟಿನ ರಸ ಹಲ್ಲಿಗೆ ಇಳಿದು ಅಭ್ಯಾಸವಾಗಿದೆ. ಇನ್ನಷ್ಟು ಹಸಿಹಿಟ್ಟು ಹಾಕಿಕೊಂಡು ಇನ್ನೊಂದು ಗಳಿಗೆ ಬಿಟ್ಟು ಬರೋಣ. ಎಲ್ಲಾ ಕೆಟ್ಟ ಅಭ್ಯಾಸ" ಎಂದು ಒಳಕ್ಕೆ ಬಂದೆ. ಮತ್ತೆ ತಿಂಡಿ ಸರಿಮಾಡಿಕೊಂಡು ಹೋಗುವುದಕ್ಕೆ ಮುಂಚೆ ತೂರ " ಇದಕ್ಕೆ ಅಮ್ನೋರು ಕರ ಬಿಟ್ಟ ಪಾಠ. ನಿಮಗೆ ಕೊಡೋಕಿಲ್ಲ. ಖಂಡಿತ ಒದೀತದೆ" ಎಂದ. ಆಗ ನಾನು ಒಂದು ಉಪಾಯವನ್ನು ಮಾಡಿದೆ. ಇದನ್ನು ಓದುವ ವಾಚಕರು ನಗಬೇಕಾಗಿಲ್ಲ. ನನ್ನ ಹೆಂಡತಿಯ ಒಂದು ಸೀರೆಯನ್ನು ಮೈತುಂಬ ಹೊದೆದುಕೊಂಡು ಎಮ್ಮೆಯ ಮುಂದೆ ಕುಳಿತೆ. ಎಮ್ಮೆ ಮೋಸಕ್ಕೆ ಬಿದ್ದಿತು. ಹಾಲು ಕೊಟ್ಟಿತು. ಹೀಗೆ ನಾನು ಐದು ದಿನ ಅಭಿನವ ಸೈರಂಧ್ರಿಯಾಗಿ ರಾಗಿಹಿಟ್ಟು ತಿಂಡಿಗಳನ್ನು ಪೂರಾ ಹಾಕಿ ಹಾಲು ಕರೆದುಕೊಳ್ಳುತ್ತಿದ್ದೆ. ನನ್ನ ಹೆಂಡತಿ ಹಿಂದಿರುಗುವುದು ನಾಳೆ ಎನ್ನುವಾಗ, ನಾನು ಎಮ್ಮೆಯ ಮುಂದೆ ಹಾಲು ಕರೆಯುತ್ತಾ ಕುಳಿತಿದ್ದೆ. ತೂರ " ಹಸು ಆಗಿದ್ದರೆ ವಾಸನೆ ಮೇಲೆ ಹಿಡಿದು ಒದ್ದು ಬಿಡೋದು. ಇದು ಎಮ್ಮೆ ಜಾತಿ. ದೆಯ್ಯದಂತೆ ಮುಂಡೇದು ಬುದ್ಧಿ ಇಲ್ಲ" ಎಂದ. ನಾನು ನನ್ನ ಹೆಂಡತಿಯ ದನಿಯಂತೆ ದನಿ ಮಾಡಿಕೊಂಡು "ಇದಕ್ಕೆ ಬುದ್ಧಿ ಇದೆ" ಎಂದೆ ಎಮ್ಮೆ ಒದ್ದೇ ಬಿಟ್ಟಿತು.

ಈ ಎಮ್ಮೆಗೆ ಒಂದು ಸಲ ಕಾಲು ಜ್ವರ ಬಾಯಿ ಜ್ವರ ಆಯಿತು. ಆಳು ತೂರ ಎಲ್ಲಾ ಹಸುಗಳನ್ನು ಬೋರೆಗೆ ಬಿಡುತ್ತಿದ್ದ. "ಎಮ್ಮೆ ಬಿಡಬೇಡ. ದನೀನ ಆಸ್ಪತ್ರೆಯಿಂದ ಔಷಧಿ ತರಿಸಿ ಹುಯ್ಯಿಸುತ್ತೇನೆ" ಎಂದೆ. ಆ ಮಾತು ಅಲ್ಲೇ ನಿಂತಿದ್ದ ಎಮ್ಮೆಗೆ ಕೇಳಿಸಿರಬೇಕು. ನಾವು ಒಳಕ್ಕೆ ಹೋದಾಗ ಎಮ್ಮೆ ಕಿತ್ತುಕೊಂಡು ಬೋರೆಗೆ ಓಡಿ ಬಿಟ್ಟಿತು. ಈ ಎಮ್ಮೆಗೆ ರಾಗಿ ಅಂಬಲಿ ಬಹಳ ಇಷ್ಟ. ಕಾಯಿಲೆಯಾದಾಗಲೂ, ಬೇರೆ ಹುಲ್ಲು ತಿಂಡಿಗಳನ್ನು ಮುಟ್ಟದಿದ್ದರೂ, ಇದು ರಾಗಿಯ ಅಂಬಲಿಯನ್ನು ಮಾತ್ರ ಯಾವಾಗಲೂ ಕುಡಿಯುತ್ತದೆ. ಇದಕ್ಕೆ ಕಾಲು ಜ್ವರ ಬಾಯಿ ಜ್ವರ ವಾದಾಗ “ಇದನ್ನು ಹಿಡಿದುಕೊಂಡು ಗಂಟಲಿಗೆ ಗೊಟ್ಟ ಹಾಕಿ ಔಷಧಿ ಹುಯ್ಯುವುದು ಕಷ್ಟ. ಅಂಬಲಿಗೆ ಸೇರಿಸಿ ಕೊಟ್ಟುಬಿಡೋಣ" ಎಂದಳು, ನನ್ನ ಹೆಂಡತಿ. ಮೊದಲನೆಯ ಸಲ ಹಾಗೆ ಮಾಡಿ ಎಮ್ಮೆಯ ಮುಂದೆ ಇಟ್ಟೆವು. ಅದು ಏನೂ ತಿಳಿಯದ ಪ್ರಾಣಿಯಂತೆ ಸುಮ್ಮನೆ ಅಂಬಲಿ ಕುಡಿಯಿತು. ಆ ಸಾಯಂಕಾಲ, ದನದ ವೈದ್ಯರು ಮನೆಗೆ ಬಂದು ಎಮ್ಮೆ ನೋಡಿದರು. " ಇದಕ್ಕೆ ಔಷಧಿ ಹೇಗೆ ಕುಡಿಸುತ್ತೀರಿ" ಎಂದರು. ಆಳು

ತೂರ "ಅಂಬಲಿ ಒಳಗೆ ಕುಡೀತದೆ" ಎಂದ. ಆ ಮಾತು ಎಮ್ಮೆಗೆ ಕೇಳಿಸಿತು. ಆ ಸಂಧ್ಯಾ ಕಾಲದಿಂದಲೇ ಅದು ಅಂಬಲಿ ಕುಡಿಯುವುದನ್ನು ಬಿಟ್ಟಿತು. ಮರುದಿನ ಬೆಳಿಗ್ಗೆ ಬಂದ ವೈದ್ಯರು "ಇದಕ್ಕೆ ಔಷಧಿ ಕೊಡಿಸಲೇಬೇಕು" ಎಂದರು. ಆಗ ಎಮ್ಮೆ ಮಲಗಿದ್ದಿತು. ಆಳು ತೂರ "ಮಲಗಿರುವಾಗ ಕಾಲು ಕಟ್ಟಿ ಗೊಟ್ಟದಲ್ಲಿ ಹುಯ್ಯಬೇಕು" ಎಂದನು. ಎಮ್ಮೆ ಎದ್ದುನಿಂತುಕೊಂಡಿತು. ತೂರ ಮನೆಯಲ್ಲಿರುವವರೆಗೆ ಅದು ಮಲಗುತ್ತಲೇ ಇರಲಿಲ್ಲ. ಹುಷಾರಿಲ್ಲದಿದ್ದರೂ ನಿಂತೆ ಇರುತ್ತಿದ್ದಿತು. ತೂರ ಹನ್ನೊಂದು ಗಂಟೆಗೆ ದನಗಳನ್ನು ಬೋರೆಗೆ ಹೊಡೆದುಕೊಂಡು ಹೋದ ಮೇಲೆಯೇ ಅದು ಮಲಗುತ್ತಿದ್ದಿತು. ಅನಂತರ ತೂರ ಬೋರೆಯಿಂದ ಸಾಯಂಕಾಲ ಬಂದನಂತರ ಉಳಿದ ದನಗಳೆಲ್ಲ ಒಳಕ್ಕೆ ಬಂದ ಕೂಡಲೇ ಎದ್ದು ನಿಂತು ಬಿಡುತ್ತಿದ್ದಿತು.

ಹೀಗೆ ನಮ್ಮ ಎಮ್ಮೆ ನಮ್ಮ ಮನೆಯಲ್ಲಿ ಒಂದು ಅದೃಶ್ಯ ಶಕ್ತಿಯಾಗಿದೆ. ಭಗವಂತ ಕಣ್ಣಿಗೆ ಕಾಣದಿದ್ದರೂ ನಮ್ಮ ಕಾರ್ಯಗಳ ಮೇಲೆ ತನ್ನ ಪ್ರಭಾವವನ್ನು ಬೀರುವಂತೆ ಎಮ್ಮೆ ಮೂಕಪ್ರಾಣಿಯಾದರು ನಮ್ಮ ಆಚರಣೆ ಮಾತುಗಳಿಗೆ ಒಂದು ವಿಧವಾದ ಅಂಕುಶವಾಗಿದೆ. ಈ ಎಮ್ಮೆ ಮಾತ್ರವೇ ಅಲ್ಲ. ಯಾವ ಮೂಕ ಪ್ರಾಣಿಯ ಎದುರಿಗೂ ಮನಸ್ಸಿಗೆ ಬಂದಂತೆ ಮಾತನಾಡಲು ನಮಗೆ ಭಯವಾಗಿದೆ. ಯಾಕೆಂದರೆ ಯಾವ ಪ್ರಾಣಿಗೆ ಯಾವ ಶಕ್ತಿ ಇದೆಯೋ ಬಲ್ಲವರಾರು? ಹೀಗಿರುವಲ್ಲಿ ಎಮ್ಮೆಗೆ ಬುದ್ಧಿ ಇಲ್ಲವೆಂದು ಹೇಳಿದರೆ ನಂಬುವುದಕ್ಕೆ ಆಗುತ್ತದೆಯೇ. ಆ ಎಮ್ಮೆಯ ಹಾಲು ಕುಡಿದ ನಮ್ಮನ್ನೇ ನೋಡಿ!

# 1.4 ಓದು ಪಠ್ಯ: ನಾನು ಬಡವಿ

**– ದ.ರಾ.ಬೇಂದ್ರೆ**

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು.

ಹತ್ತಿರಿರಲಿ ದೂರವಿರಲಿ
ಅವನೆ ರಂಗಸಾಲೆ
ಕಣ್ಣುಕಟ್ಟುವಂಥ ಮೂರ್ತಿ
ಕಿವಿಗೆ ಮೆಚ್ಚಿನೋಲೆ.

ಚಳಿಗೆ ಬಿಸಿಲಿಗೊಂದೆ ಹದನ
ಅವನ ಮೈಯ ಮುಟ್ಟೆ
ಅದೇ ಗಳಿಗೆ ಮೈಯ ತುಂಬ
ನನಗೆ ನವಿರುಬಟ್ಟೆ.

ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳಬಂದಿ
ಕೆನ್ನೆ ತುಂಬ ಮುತ್ತು.

ಕುಂದು ಕೊರತೆ ತೋರಲಿಲ್ಲ

ಬೇಕು ಹೆಚ್ಚಿಗೇನು?

ಹೊಟ್ಟೆಗಿತ್ತ ಜೀವಫಲವ

ತುಟಿಗೆ ಹಾಲು ಜೇನು.

# 2 ಸ್ವಾತಂತ್ರ್ಯ


| | | |
|---|---|---|
| 2.1 ಸ್ವಾತಂತ್ರ್ಯದ ಹಣತೆ | - ಕೆ.ಎಸ್.ನಿಸಾರ್ ಅಹಮದ್ | 23 |
| 2.2 ನಮ್ಮ ಲೋಕದ ಗೀತೆ | - ವೈದೇಹಿ | 24 |
| 2.3 ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು | - ಬೆಸಗರಹಳ್ಳಿ ರಾಮಣ್ಣ | 29 |
| 2.4 (ಓದುಪಠ್ಯ) ನನ್ನೂರಿಗೆ ಮನುಷ್ಯರನ್ನು ಹುಟ್ಟಿಸಿ ಕಳಿಸಿ | - ಫಾತಿಮಾ ರಲಿಯಾ | 35 |

# 2. ಸ್ವಾತಂತ್ರ್ಯ

## ಆಶಯ:

ಸ್ವಾತಂತ್ರ್ಯ ಎಂದರೆ ಸಂವಿಧಾನದ ಮೂಲಾಶಯದಂತೆ ಸಮಾನ ಹಕ್ಕಿನೊಂದಿಗೆ ಬದುಕುವ ಹಕ್ಕು. ಇಲ್ಲಿ ನಾನು ಅಂದರೆ ಸಮಾಜ. ಹಾಗಾಗಿ ಸ್ವಾತಂತ್ರ್ಯ ಎಂದರೆ ಹಸಿವು ಮುಕ್ತ ನನ್ನ ಪಾಲಿಗೆ ಜನರು, ಉದ್ಯೋಗವಂತ ಯುವಜನತೆ, ಸಮಾನತೆಯಲ್ಲಿ ಬದುಕುವ ಎಲ್ಲಾ ವರ್ಗದ ಜಾತಿಯ ಜನರು, ಸಾಮಾಜಿಕವಾಗಿ ಮುಕ್ತತೆಯಿರುವ ಮಹಿಳೆ, ಆರೋಗ್ಯ ಮತ್ತು ಶಿಕ್ಷಣ ಭದ್ರತೆಯನ್ನು ಅನುಭವಿಸುತ್ತಿರುವ ಪ್ರಜೆಗಳು. ಈ ನಿಟ್ಟಿನಲ್ಲಿ ನೋಡುವುದಾದರೆ ಸ್ವಾತಂತ್ರ್ಯ ಇನ್ನೂ ನಮ್ಮ ದೇಶಕ್ಕೆ ಮರೀಚಿಕೆಯಾಗಿಯೇ ಉಳಿದಿದೆ.

ಮಹಮ್ಮದ್ ಹುಸೇನ್

ಸ್ವಾಂತತ್ರ್ಯದ ಪ್ರಾಮುಖ್ಯ ತಿಳಿದಿರುವ, ಅದನ್ನು ಹೇಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂಬ ದೂರ ದೃಷ್ಟಿಯಿರುವ ಯುವಕರು ನಮ್ಮಲ್ಲಿ ಅನೇಕರಿದ್ದಾರೆ. ಆದರೆ, ಸ್ವಾತಂತ್ರ್ಯವನ್ನು ಹೇಗೆ ದುರುಪಯೋಗ ಮಾಡಿಕೊಳ್ಳಬಹುದು ಎಂಬುದರ ಮಾದರಿ ಪ್ರಾತ್ಯಕ್ಷಿಕೆಯೂ ನಮ್ಮ ಕಣ್ಣೆದುರೇ ನಡೆಯುತ್ತಿದೆ. ಅಪಾಯವಿರುವುದು ಇಲ್ಲಿಯೇ. ಸ್ವಾತಂತ್ರ್ಯವನ್ನು ಜೋಪಾನ ಮಾಡುವ, ಸರಿಯಾದ ರೀತಿಯಲ್ಲಿ ಸ್ವಾತಂತ್ರ್ಯದ ಹೆಜ್ಜೆಗಳನ್ನಿಡುವ ಯುವಕರ ಸಂಖ್ಯೆ ಹೆಚ್ಚಲಿ.

# 2.1 ಸ್ವಾತಂತ್ರ್ಯದ ಹಣತೆ

**ಕೆ.ಎಸ್. ನಿಸಾರ್ ಅಹಮದ್**

ಸದಾ ಉರಿಯುತಿರುವ ಹಾಗೆ ಸ್ವಾತಂತ್ರ್ಯದ ಹಣತೆ
ದುಡಿಮೆ ತೈಲವೆರೆಯುತಿರಲು ಬಿಡುವಿಲ್ಲದೆ ಜನತೆ
ಎಂತು ಕುಂದಬಹುದು ನಮ್ಮ ತಾಯ್ನಾಡಿನ ಘನತೆ ?
ಸದಾ ಉರಿಯುತಿರುವ ಹಾಗೆ...

ಮುಳ್ಳಿನಿಂದ ಅರಿವೆ ಬಿಡಿಸಿದಂತೆ ಬಂತೆ ಮುಕ್ತಿ ?
ಹುಲಿಯ ಬಾಯ ಮೇವ ಕಸಿಯುವಂತೆ ಧೀರ ಶಕ್ತಿ
ಪಡೆಯಿತದನು ಜನತೆ–ಬಾಳ ಬೆಸೆಯೆ ನಾಡ ಭಕ್ತಿ.
ಸದಾ ಉರಿಯುತಿರುವ ಹಾಗೆ...

ಸ್ವಾತಂತ್ರ್ಯದ ಜೊತೆಗೆ ಬಂದು ಕೂಡಲಿಲ್ಲ ಗಳಿಕೆ.
ವ್ಯಕ್ತಿ ವ್ಯಕ್ತಿ ಬೆವರ ಹೀರಿ, ಮರವಾಗಿದೆ ಮೊಳಕೆ;
ಮೇಲೇರಿದ ಹಾಗೆ ಭದ್ರ ಪಾಯವುಂಟು ಗೃಹಕೆ.
ಸದಾ ಉರಿಯುತಿರುವ ಹಾಗೆ...

ಸಾಗಿದಂತೆ ಸಲ್ಲುತಿರಲಿ ಸಾಧನೆಯೆಡೆ ಗಮನ,
ಪ್ರಾಣವನ್ನೆ ಪಗಡೆಯಾಡಿದವರಿಗೆಮ್ಮ ನಮನ;
ತಾಯಮುಡಿಗೆ ದಿನವು ಏರುತಿರಲಿ ಹೂವು, ದವನ
ಸದಾ ಉರಿಯುತಿರುವ ಹಾಗೆ...

# 2.2 ನಮ್ಮ ಲೋಕದ ಗೀತೆ

**– ವೈದೇಹಿ**

ಪುರುಷರ ಬಗ್ಗೆ ಯೋಚಿಸುವಾಗ ಎಷ್ಟೋ ಸಲ ಮರುಕವುಂಟಾಗುತ್ತದೆ. ಬದುಕಿನ ಎಷ್ಟೋ ದಿವ್ಯ ಅನುಭವಗಳ ಮೃದುಸ್ಪರ್ಶದಿಂದ ಇವರೆಲ್ಲ ವಂಚಿತರಾಗಿದ್ದಾರೆಂದು. ಅಂತಹ ಅನುಭವಗಳನ್ನು ತಮ್ಮ ಯಾವ ಪೌರುಷದಿಂದಲೂ ಕೂಡ ಎಂದಿಗೂ ಗಳಿಸಿಕೊಳ್ಳಲಾರರಲ್ಲ!

ಈ ಸಿಟ್ಟಿಗೇ ಇರಬಹುದೇ ಇವರೆಲ್ಲ ಪ್ರಪಂಚದ ಬೀಗದ ಕೈಯನ್ನು ತಮ್ಮಲ್ಲಿಟ್ಟುಕೊಂಡು ನಮ್ಮನ್ನು ಸತಾಯಿಸುತ್ತಿರುವುದು? ಎಲ್ಲಿ ಹೋದರೂ ತಮ್ಮ ಸಾಮ್ರಾಜ್ಯ ಬಿಚ್ಚಿಕೊಂಡು ನಾವು ಉಸಿರೆತ್ತದಂತೆ ಮಾಡಿರುವುದು? ಹಾಂ, ಇದಕ್ಕಾಗಿ ನಾವು ರೊಚ್ಚಿಗೆದ್ದು ನಮಗೆ ಪ್ರಾಕೃತಿಕವಾಗಿ ದಕ್ಕಿದ ಮತ್ತು ಅವರು ಎಂದೂ ನಮ್ಮಿಂದ ಕಸಿಯಲಾರದ ಕೆಲ ಅನರ್ಘ್ಯಗಳನ್ನು ಧಿಕ್ಕರಿಸಿ ಅವರಿಗೆ ಸಮನಾಗಲು ಯತ್ನಿಸುವುದು ಎಂದಿಗೂ ಬುದ್ಧಿವಂತಿಕೆಯಲ್ಲ.

ಇದನ್ನು ಬರೆಯುವಾಗ ನನ್ನ ಮೊದಲ ಮಗು ಹುಟ್ಟಿದ ಕ್ಷಣ ನೆನಪಾಗುತ್ತದೆ. ಆ ಕ್ಷಣಕ್ಕೆ ಸಮನಾದ್ದು ಬೇರೆಯುಂಟೆ? ಖಂಡಿತವಾಗಿಯೂ ಇಲ್ಲ. ಅದು ನಡೆದದ್ದು ಮನೆಯಲ್ಲಿಯೇ. ಹೆರಿಗೆಬೇನೆ ಬಂದ ಆ ಹೊತ್ತು, ಹೆರಿಸುವವರ ಪಿಸುಪಿಸು ಮಾತು, ನನ್ನ ನೋವು ಕಂಡು ಕಣ್ಣಾಲಿ ತುಂಬಿ ತಾನೇನೂ ಮಾಡಲಾರೆನಲ್ಲ ಎಂಬ ಸಂಕಟದಿಂದೆಂಬಂತೆ ಇದ್ದ ತಾಯಿ, ಇಂತಿಷ್ಟು ಹೊತ್ತಿಗೆ ಹೆರಿಗೆ ಆಗಬಹುದೆಂದು ಭವಿಷ್ಯ ನುಡಿದ ಮಿಡ್ ವೈಫ್.

ನಾನಾಗ ಚಕಿತಳಾಗಿದ್ದೆ, ಅಷ್ಟರವರಿಗೆ ಹೊತ್ತುಕೊಂಡೆ ತಿರುಗಿದ್ದರೂ, ತಾನಿದ್ದೇನೆಂದು ಮಗು ಹೊಟ್ಟೆಯೊಳಗೆ ಒದ್ದು ಒದ್ದು ಹೇಳುತ್ತಿದ್ದರೂ ಅದು ಇನ್ನೇನು ಕೆಲವೇ ಗಂಟೆಯೊಳಗೆ ಹೊರಬರಲಿದೆ ಎಂಬ ಸುದ್ದಿ! ಮಗು ನನ್ನಿಂದ ಹೊರಬರಲಿದೆಯೇ! ರಕ್ತಮಾಂಸ ಮಿದುಳಿನ, ಕೈಬೆರಳು, ಕಾಲುಬೆರಳು, ಮಿಣಮಿಣಕಣ್ಣುಗಳ–ಉಸಿರಾಡುವ ಮಗುವನ್ನು ಈ ನಾನು ಹೆರಲಿದ್ದೇನೆಯೇ? ಸ್ವತಃ ನೋವು ಅನುಭವಿಸುತ್ತಿರುವಾಗಲೂ, ಮಗು ಹೊರಗೆ ಬರಲು ತಾನೇ ದಾರಿ ಹುಡುಕುವುದು ತಿಳಿಯುತ್ತಿರುವಾಗಲೂ ನನ್ನನ್ನು ಮುಸುಕಿದ್ದು ಉಪಮೆಯೇ ಇಲ್ಲದ ಆಶ್ಚರ್ಯ ಮತ್ತು ಆನಂದ.

ನನ್ನಲ್ಲಿ ಮೃದುತ್ವ ಮೈದುಂಬಿ ಸಂಚಾರ ಮಾಡುತ್ತಿತ್ತು. ಮಗು ಹೊರಬರಲು ಒದ್ದಾಡುತ್ತಿತ್ತು. ನನ್ನ ಇಡೀ ದೇಹವನ್ನೇ ಆ ಪುಟ್ಟ ಮಗು ಜಗ್ಗಾಡುತ್ತಿದೆ ಎಂಬಂತಹ ಅನುಭವ. ಎಂತಹ ನೋವು! ಆದರೆ ಅದು ವೇದನೆಯಾಗಿರಲಿಲ್ಲ. ಮೈ ಪೂರ್ತಿ ಬೆವೆತು ಮುದ್ದೆಯಾದರೂ ಅದು ಬೇಸಗೆಯ ಖಾಲಿ ಸೆಕೆಯಾಗಿರಲಿಲ್ಲ.

ಮಿಡ್ ವೈಫಿನ ಸಹಾಯಕಿ ಜತ್ತೂಬಾಯಿ ನನಗೆ ಗಾಳಿ ಬೀಸುವ ನೆವದಿಂದ ತನಗೇ ಬೀಸಿಕೊಳ್ಳುತ್ತಿದ್ದಳು. ನೊಣ ಎಡಗೈ ಮೇಲೆ ಬಂದು ಕುಳಿತರೆ ಬಲಗೈಯನ್ನು ಪಟ್ಟೆಂದು ಹೊಡೆದುಕೊಳ್ಳುವ ಜಾತಿ ಅವಳು. ಅವಳನ್ನು ಕಂಡರೇ ನಗೆ ಎಲ್ಲರಿಗೂ. ನೋವಲ್ಲಿಯೂ ಜತ್ತೂ, "ಬೇನೆ ಯಾರಿಗೆ? ನಂಗಾ ನಿಂಗಾ?" ಎಂದು ಕೇಳಿ ನಕ್ಕ ನೆನಪು. ಮಧ್ಯೆ ಮಧ್ಯೆ ಅವಳು ನನ್ನನ್ನು ಕಂಡು "ಅಬ್ಬ. ಎಂತದಾರೂ ಬೇಕು, ಈ ಹೆಣ್ಣು ಜನ್ಮ ಬೇಡ"– ಎನ್ನುತ್ತಿದ್ದಳು. ಆದರೆ ನಾನು ಜನ್ಮಗಳು ಇರುವುದು ಹೌದಾದರೆ ಎಲ್ಲ ಜನ್ಮಗಳಲ್ಲಿಯೂ ನಾನು ಹೆಣ್ಣೇ ಆಗಬೇಕು ಎಂದು ಪ್ರಾರ್ಥಿಸುತ್ತಿದ್ದುದು ಆಕೆಗೆ ಕೇಳುವಂತಿರಲಿಲ್ಲ.

ಮಗು ಹುಟ್ಟಿದ ತಕ್ಷಣ "ಅಯ್ಯಾ ಹೆಣ್ಣು!" ಎಂದಳು ಜತ್ತು. ಬಾಯಿ ತೇಲಿಸಿ. ಹೊರಗಿಂದ ಯಾರೋ ಹರಿವಾಣ ಹೊತ್ತು ಹಾಕಿದರು. ಹೆಣ್ಣು ಎಂದು ಅಕ್ಕಪಕ್ಕದವರಿಗೆಲ್ಲ ತಿಳಿಸುವ ಪ್ರಥಮ ಒಸಗೆಯದು. ಕೋಣೆಯ ಆಚೆಯಿಂದ ಉಲ್ಲಾಸ ಧಿಮಿಗುಡುವ ಮನೆ ಜನರ ಸ್ವರ ಕೇಳುತ್ತಿತ್ತು. ಅಪರಾತ್ರಿಯಾದರು ನಿದ್ದೆ ಮಾಡದೆ ಕಾದವರು, ಮುಂದೆ ಎಲ್ಲರಂತೆಯೇ ಆಗಲಿರುವ ಒಂದು ಹೊಸ ಮಗುವಿಗಾಗಿ! ಅಷ್ಟಾಗಿ ಇದೇ ಆ ಮನೆಯ ಮೊದಲ ಮಗುವಲ್ಲ. ಎಷ್ಟನೆಯದೋ! ಆದರೆ ಪ್ರತಿ ಮಗುವೂ ಮನೆಯ ಇಡೀ ವಾತಾವರಣದಲ್ಲೇ ಗರಿಗರಿಯಾದ ಗೆಲುವು ಮೂಡಿಸುತ್ತದೆಯಲ್ಲ! ಗೇಣುದ್ದ ಶಿಶುವಿನ ಶಕ್ತಿಯಾದರೂ ಎಂತಹದಿರಬಹುದು!

ಹೊಕ್ಕಳ ಬಳ್ಳಿ ಕತ್ತರಿಸಿಯಾಗಿತ್ತು. ಮಗು ಇನ್ನು ಸ್ವತಂತ್ರ. ಹತ್ತಿರ ತಂದು ತೋರಿಸಿದರು– ಆ ಕೆಂಪು ಗುಲಾಬಿ ಪಾದಗಳು, ಎಳೆ ಚಿಗುರು ಕಾಲ್ಬೆರಳುಗಳು, ಪರಿಪೂರ್ಣವಾಗಿ ಬೆಳೆದೂ ಎಳತಿನಲ್ಲಿ ಎಳತಾದ ಕೈಬೆರಳುಗಳು. ಅರೆರೆ! ಅಂಗಾಂಶಗಳೆಲ್ಲ ಹೀಗೆ ಎಲ್ಲಿ ಹೇಗಿರಬೇಕೋ ಹಾಗೆ ಕ್ರಮವತ್ತಾಗಿ ಮತ್ತು ಸಮರ್ಪಕವಾಗಿ ರೂಪುಗೊಂಡದ್ದು, ಬೆರಳುಗಳಾಗಿ ಸೀಳಿಕೊಂಡದ್ದು, ಕಿವಿಗಳಾಗಿ, ಕಣ್ಣಾಗಿ ರಚನೆ ಪೂರ್ತಿಗೊಂಡದ್ದು ನನ್ನೊಳಗಿರುವಾಗಲೇ!

ನನಗೆ ಅರಿವಿಲ್ಲದಂತೆ ಎಷ್ಟೆಲ್ಲ ಅದ್ಭುತಗಳು ನಡೆದು ಬಹಳ ಸಾಮಾನ್ಯ ವಿಷಯವೆಂಬಂತೆ ಪ್ರಕಟವಾಗಿವೆ! ಬೆರಳ ತುದಿಯಲ್ಲಿ ಉಗುರು ಕೂಡ ಇತ್ತು. ಮುಟ್ಟಿದರೆ ಮೆಲ್ಲ ಬಳುಕುವಂತಿತ್ತು. ಕೆಂಪು ಬಾಯಿ ಏನು ಯಾಕೆ ಎಂತಲೂ ತಿಳಿಯದೆ ಅಥವಾ ಮತ್ತೇನು ಮಾಡಲು ಬಾರದೆ ಅಳುತ್ತಿತ್ತು. ತಾನಾಗಲು ಹವಣಿಸುವ ಸ್ವಾವಲಂಬನದ ಮೂಲವಲ್ಲವೇ ಮಗುವಿನ ಈ ಅಳು ಮತ್ತು ಹಟ? ಆ ಕಣ್ಣುಗಳೋ!

ಮೆಲ್ಲ ಅದನ್ನು ಸವರಬೇಕೆಂದು ತುಂಬಾ ಆಸೆಯಾಯಿತು. ಆದರೆ ನಾ ಕಂಡ ಸಿನಿಮಾಗಳಲ್ಲಿ ಹೀಗೆ ಮಗು–ಬಾಣಂತಿ ನೋಡಿಕೊಳ್ಳುವ ದೃಶ್ಯಗಳಲ್ಲೆಲ್ಲ ಬಾಣಂತಿ ಮಗುವನ್ನು ಮೆಲ್ಲ ಸವರುತ್ತ ಮುಗುಳ್ನಗುತ್ತಿದ್ದಳು! ಅದೇ ಅಂದರೆ ಅದೇ! ಏಳಲಿದ್ದ ಕೈ ಬಿಗಿಯಾಗಿ ಎದೆಯಮೇಲೆ ಇನ್ನೊಂದು ಕೈಯೊಂದಿಗೆ ಹೆಣೆದು ಕುಳಿತಿತು. ಹಾಗೆ ಮಾಡಿ ಏನು ಸಾಧಿಸಿದೆ ಗೊತ್ತಿಲ್ಲ. ಆದರೆ ಅದನ್ನಂತೂ ಮರೆಯಲಾಗಿಲ್ಲ.

ಜತ್ತೂಬಾಯಿ ನನ್ನ ತಾಯಿಯೊಡನೆ "ಅಮ್ಮ, ಮೀಸಲು ಸಾಬೂನು ಕೊಡಿನಿಯೇ. ಹೆಣ್ಣು ಮಗು ಯಾವುದಾದರೂ ಅಗ್ಗದ್ದು ಸಾಕು"- ಎಂದು ಗಂಟಲಲ್ಲೇ ನಗುತ್ತಾ ಕೊಟ್ಟೆ ಬಾಯಲ್ಲಿ ಮಗುವಿಗೆ ಮುದ್ದು ಮಾತಾಡುತ್ತಿದ್ದಳು.

ನೋಳಿನಪ್ಪಟೆಯಾಗಿ ಜಾರುವ ಮಗು. ಸಾಬೂನಿನ ಮೂಲಕ ಪ್ರಥಮತಃ ಒಂದು ಕೃತಕಕ್ಕೆ ಎದುರಾಗುತ್ತಿತ್ತು. ಹೀಗೆ ನೋಳಿನಪ್ಪಟೆಯಿಂದ ಜಾರುವ ಕರುವನ್ನು ತಾಯಿದನ ಪ್ರೀತಿಯಿಂದ ನೆಕ್ಕಿನೆಕ್ಕಿ ಚೊಕ್ಕ ಮಾಡುವುದು ನೆನಪಾಯಿತು. ಇದರರ್ಥ ನಾನು ಅದಕ್ಕೆ ಸಿದ್ಧಳಿದ್ದೆ ಅಂತಲ್ಲ! ಬದಲು ಅದು ಪ್ರೀತಿ ಪರಾಕಾಷ್ಠೆಯ ಬಗೆಗಿನ ಅಪಾರ ಮೆಚ್ಚುಗೆ ಇರಬಹುದು, ಕೊಳಕು ಅಸಹ್ಯ ಎಲ್ಲವನ್ನೂ ಮೀರಬಲ್ಲ ಶಕ್ತಿಯಾದ ನಿಸರ್ಗ ಸಹಜವಾದ ಪ್ರೀತಿ ಎಂಬುದಕ್ಕೆ ಹೊಡೆದ ಸಲಾಮು ಇರಬಹುದು.

ಎರಡನೆಯ ಹೆರಿಗೆಯಲ್ಲಿಯಾದರೂ ಈ ಉಲ್ಲಾಸ, ಆನಂದ ಗುಲಗಂಜಿ ಕಮ್ಮಿ ಯಾದದ್ದುಂಟೆ! ಆದರೆ ಈ ದೇಶಕ್ಕೆ ನನ್ನ ತ್ರಾಣಕ್ಕೆ ಹೆಚ್ಚು ಮಕ್ಕಳು ಸಲ್ಲ!

ಬಹಳ ಬಹಳ ಹಿಂದೆ ಚಿಕ್ಕವಳಿದ್ದಾಗ ನಮ್ಮನೆಯ ಪಕ್ಕದ ಜಗಲಿಯ ಮೇಲೆ ಈಗ ಹುಟ್ಟಿದ ಮಗುವೊಂದನ್ನು ಎಸೆದು ಹೆಣ್ಣೊಬ್ಬಳು ಓಡಿಹೋಗಿದ್ದಳು. ಆಕೆ ಎಲ್ಲಿಯೂ ಸಿಗಲಿಲ್ಲ. ಕೆರೆ ಬಾವಿಯಲ್ಲಿಯೂ, ಇರುವೆ ಮುತ್ತಿ ಅಳುತ್ತಿದ್ದ ಮಗು. ಹೆಣ್ಣುಮಗು, ಗಂಡಾಗಿದ್ದರೆ ಎಸೆಯುತ್ತಿದ್ದಳೇ ಎಂದು ಮಾಮೂಲಿ ಪ್ರಶ್ನೆ ಕೇಳಬಹುದಾಗಿತ್ತು. ಆದರೆ ಅದರ ಜೀವಕ್ಕಿಂತ ಸ್ವಂತ ಜೀವ ಹೆಚ್ಚು ಮುಖ್ಯವಾಗಿದ್ದ ಆಕೆಯ ಮುಖ್ಯ ದುಃಖವಾದರೂ ಯಾವುದಿರಬಹುದು? ಪ್ರಪಂಚದ ಸರ್ವಸಾರದ ಖನಿಯನ್ನೇ ತ್ಯಜಿಸಿ ಹೋಗಬೇಕಾದರೆ? ಅವಳ ದುಃಖವನ್ನು ಮಾಮೂಲಿ ವಿಧಾನಗಳಿಂದ ಅಳೆಯುವುದೇ ತಪ್ಪೇನೋ–ನಾನು ಕಾಣದ ಆಕೆ ಇವತ್ತೂ ಕಣ್ಣೆದುರು ಬಂದು ನಿಲ್ಲುತ್ತಾಳೆ. ಮಗು ಮತ್ತು ಹೆಣ್ಣು–ಅತಿ ಕಷ್ಟ ಅನುಭವಿಸಿದವರು ಪುರುಷ ಪ್ರಪಂಚದಲ್ಲಿ.

ಎಳೆಯ ಮಗು–

ಇರುವೆ ಮುತ್ತಿದ ಮಗುವಿನ ಕುರಿತು ಕೇಳಿ ತಲ್ಲಣಿಸಿದ ಎಳೆಯ ಮಗು, ಪಕ್ಷಿಗಳಾದರೂ ಬಂದು ಕಾದಿದ್ದರೆ ಎಂದು ಉದ್ಗರಿಸಿದಾಗ ಕಲಿಯುಗದಲ್ಲಿ ಪಕ್ಷಿಗಳು ಕುಕ್ಕುತ್ತವೆ ಎಂದುದು ಕೇಳಿ ನಡುಗಿದ, ಆ ಮಗುವನ್ನು ಇರುವೆಗಳಿಂದ ಬಿಡಿಸಿ ಎತ್ತಿಕೊಂಡು ಹೋದರೇ ಇಲ್ಲವೇ ತಿಳಿಯದೇ ಚಡಪಡಿಸಿದ ಎಳೆಯ ಮಗು ಬಾಣಂತನದ ಭಾವ ಸೂಕ್ಷ್ಮದ ಸಂಚಾರದಲ್ಲಿ ಮತ್ತೆ ಭೇಟಿಯಾಗಿತ್ತು.

ಮಗು ಮಲಗುವ ಮುಂಚೆ ಇರುವೆಯುಂಟೆ ಎಂದು ಅಮೂಲಾಗ್ರ ಶೋಧಿಸುತ್ತಿದ್ದೆ.(ನಮ್ಮೂರಲ್ಲಿ ಸಾಮಾನ್ಯವಾಗಿ ತವರಿನವರು ನೀಡುವ) ಹಿತ್ತಾಳಿ ತೊಟ್ಟಿಲೊಳಗೆ ಅದನ್ನು ಮಲಗಿಸಿ, ತೂಗಲೆಂದು ಕೊಳಿಕಿಗೆ

ಕಟ್ಟಿದ ಉದ್ದ ಹಗ್ಗವನ್ನು ಮಗು ನಿದ್ರಿಸಿದ್ದರೂ ತೂಗುವ ಆಸೆಗಾಗಿಯೇ, ನಿಧಾನವಾಗಿ ಎಳೆಯುತ್ತಾ ಮಂಚದ ಮೇಲೆ ಮಲಗಿರುತ್ತಿದ್ದೆ.(ಬಾಣಂತಿಯ ಮಂಚವಾದ ಅದು ಖಾಲಿ ಇರುತ್ತಿದ್ದುದ್ದೇ ಅಪರೂಪವಿತ್ತು.) ಹೀಗೆ ಮಲಗಿದಾಗ ಇದ್ದಕ್ಕಿದ್ದಂತೆ ಮಗುವಿನ ರೆಪ್ಪೆ ತುಂಬಾ ಇರುವೆ ತುಂಬಿ ಅದು ಕಣ್ಣು ಬಿಡಲಾಗದಂತೆ ಅನಿಸಿ ಧಿಗ್ಗನೆ ಎದ್ದು ಕುಳಿತು ನೋಡಿ ಮತ್ತೆ ಮಲಗುತ್ತಿದ್ದೆ. ಶ್ರದ್ಧೆಯೆಂಬುದು ಸಂಪೂರ್ಣಗೊಳ್ಳುವ ಕಾಲವಲ್ಲವೇ ಅದು?

ಬೆಳಗಿನಜಾವ, ಅಷ್ಟೊತ್ತಿಗೇ ಎದ್ದು ತೊಟ್ಟಿಲಂಚಿಗೆ ಗೆಜ್ಜೆ ಕಾಲು ತಾಗಿಸುತ್ತಾ ತನ್ನಷ್ಟಕ್ಕೆ ಕೈಜೋಡಿಸುತ್ತಾ ಬಿಡಿಸುತ್ತಾ ಮಲಗಿದ್ದಲ್ಲೇ ನಿಮಿರಿ ಕಾಕು ಕೂಗುವ ಮಗು, ಆಗ ಮುಂಜಾವಿಗೆ ಕೂಡ ಹಸುಮಗುವಿನ ನೆತ್ತಿಯ ಪರಿಮಳ, ಸಂತೆಯ ದಿನದ ಮುಂಜಾವಂತೂ ಸಾಲಾನುಸಾಲಾಗಿ ಫೈಲುಫೈಲೆನುತ್ತ ಸಾಗುವ ಗಾಡಿಗಳ ನಾದಲೋಕ…. ಗುಬ್ಬಿಗುಬ್ಬಿ ಆಡುವ ಮಗು, ಮುಂಜಾವು, ಗಾಡಿಗಳು, ತುಂಬಿ ತುಂಬಿ ಬರುವ ಎದೆಹಾಲು....

ಈಗ–

ಗಾಡಿಗಳಿಲ್ಲದಿರಬಹುದು. ಕತ್ತಲನ್ನು ಪೂರ್ತಿ ಅವಹೇಳನ ಮಾಡದೆ ಕುರುಕುರು ಉರಿಯುತ್ತಾ ಮೂಲೆಯಲ್ಲಿ ಕೂಡುವ ಬೆಡ್ಲ್ಯಾಂಪ್ಗಳಿಲ್ಲದಿರಬಹುದು. ಮುಂಜಾವುಗಳನ್ನು ಕರೆದು ಗಾಯಗೊಳಿಸುತ್ತಾ ಓಡುವ ವಾಹನಗಳ ಕೂಗುಗಳಿರಬಹುದು. ಎದೆಹಾಲು ಒಣಗಿ ಕೃತಕಕ್ಕೆ ಕೈಚಾಚಿರಬಹುದು. ಆದರೆ ಮಗುವೆಂಬುದು ಇಂದಿಗೂ ಮಗುವೇ. ಬದಲಾಗದ್ದು. ಮಕ್ಕಳ ಋಣವನ್ನು ತಾಯಿಯಾದವಳು ಎಂದಿಗೂ ತೀರಿಸುವಂತಿಲ್ಲ.

ಈ ಎಲ್ಲದರ ಮೂಲದಲ್ಲಿ ಪುರುಷನ ಅಹಂ ಮಾತ್ರ ಇದ್ದೇ ಇದೆ. ಅದಕ್ಕೆ ಯಥಾಮತಿ ನಮಃ.

ತೀರ ಇತ್ತೀಚೆಗೆ ಒಂದು ಚಿತ್ರಕಂಡೆ. ಪರಾಗಸಂಪರ್ಕವನ್ನು ಕುರಿತ ಚಿತ್ರವದು. ಅದರಲ್ಲಿ ಒಂದು ಜಾತಿಯ ಹೂ; ದುಂಬಿಗಾಗಿ ಕಾದು ನಿಯತಕಾಲದಲ್ಲಿ ಅದು ಬರದೇ ಇದ್ದರೆ ಅದರ ಹಂಗು ತೊರೆದು ತನ್ನ ಆಂತರಿಕ ಶಕ್ತಿಯನ್ನೇ ಚಾಲನಗೊಳಿಸಿ ಪರಾಗ ಸಂಪರ್ಕ ನಡೆಸಿಕೊಂಡು ಹೊಸಹೂವಿನ ಆಗಮನವನ್ನು ಅನುಗೊಳಿಸಿಕೊಳ್ಳುವ ಹೂ! ಅಹ! ನೋಡಿ ಅಸೂಯೆಯಾಯಿತು. ಇದೇ ನಿಯಮ ನೈಸರ್ಗಿಕ ನಿಯಮವಾಗಿಯೇ ನಮಗೂ ದಕ್ಕಿದ್ದರೆ! ಪುರುಷನ ಅಹಂ ಎಷ್ಟೋ ಕಿಲುಬು ಕಳೆಯುತ್ತಿತ್ತು, ಮಿಲನದ ಮಾಧುರ್ಯ ಹೆಚ್ಚುತ್ತಿತ್ತು. ಪ್ರಾಯಃ ಆ ಹೆಂಗಸೂ ಮಗುವನ್ನು ಇರುವೆ ಮುತ್ತಲು ಬಿಟ್ಟು ಪರಾರಿಯಾಗದೆ ಬುದ್ಧಿವಂತಿಕೆಯಿಂದ ಬದುಕಬಹುದಿತ್ತು. (ಆದರೆ 'ಅಭಿಜ್ಞಾನ ಶಾಕುಂತಲಾ'ದಂತಹ ಕಾವ್ಯದ ಸ್ವರೂಪ ಮಾತ್ರ ಹಾಗೆಯೇ ಇರುತ್ತಿತ್ತೇ?)

ಪುರುಷನಿಗೆ ನಾವು ಎಂದಿಗೂ ಸಮರಲ್ಲ. ಅದಕ್ಕಿಂತ ಮುಖ್ಯವಾಗಿ ನಮ್ಮ ಸಮಕ್ಕೆ ಪುರುಷರು ಎಂದೂ ಬಂದು ನಿಲ್ಲಲಾರರು. ಎಲ್ಲಿ ಸಮಾನ ಅವಕಾಶಗಳನ್ನು ಪಡೆಯಲಾರೆವೋ ಅಲ್ಲಿ ಹೋರಾಡಿಯಾದರೂ ಒಂದಲ್ಲ

ಒಂದು ದಿನ ಸಮಾನ ಅವಕಾಶ ಗಳಿಸಿಕೊಂಡೇವು. ಆದರೆ ತಂತಾನೇ ಲಭ್ಯವಾಗುವ ನಮ್ಮದೇ ಆದ ಅನುಭವಗಳನ್ನು ಗುರುತಿಸುತ್ತಾ ಗೌರವಿಸುವುದನ್ನು ಬಿಟ್ಟು ಧಿಕ್ಕರಿಸುವುದರಲ್ಲಿ, ಹೀಯಾಳಿಸುವುದರಲ್ಲಿ ಏನು ಬಂತು? ನಾವೇಕೆ ಪುರುಷ ದನಿಯಲ್ಲಿ ಮಾತಾಡಬೇಕು? ನಾವು ನಮ್ಮ ಕಂಠದಲ್ಲಿ ಹಾಡೋಣ. ಅದು ಜೋ ರಾಗವಿರಲಿ, ಪ್ರೇಮರಾಗವಿರಲಿ, ಇನ್ಯಾವ ಬಗೆಯ ರಾಗ–ವಿರಾಗಗಳೇ ಇರಲಿ.
ನಮ್ಮದೇ ದನಿ ಅಲ್ಲಿರಲಿ.

# 2.3 ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು

**– ಬೆಸಗರಹಳ್ಳಿ ರಾಮಣ್ಣ**

ಪೋಲೀಸ್ ಠಾಣೆಯ ಮುಂದೆ ಜನ ಘೇರಾಯಿಸಿರುವುದನ್ನು ಕಂಡು ಇನ್ಸ್ಪೆಕ್ಟರ್ಗೆ ತುಂಬ ದಿಗಿಲಾಗಿ ಹೋಯಿತು. ಗಡಿಯಾರ ನೋಡಿಕೊಂಡ, ಸಂಜೆ ಐದೂವರೆ ಆಗಲು ಇನ್ನೂ ಹಲವಾರು ಕ್ಷಣಗಳಿದ್ದುವು. ಇಷ್ಟೊತ್ತಿನಲ್ಲಿ ಹೋಟೆಲ್ ರೈಡ್ ಮಾಡಿದರೆ ಸೂಳೆಯರು ಮತ್ತು ಗಿರಾಕಿಗಳು ಸಿಗುವುದು ಅಪರೂಪ! ಆದರೆ ಈ ಜನ ಏಕೆ? ಯಾವನಾದರೂ ಲಾಕಪ್ಪಿನಲ್ಲಿದ್ದವನು ಪೋಲೀಸಿನವರ ಒದೆಗೆ ನೆಲಕ್ಕೆ ಒರಗಿದನೋ! ಮುಂತಾದ ಅನಿಷ್ಟ ವಿಷಯಗಳನ್ನೇ ತಲೆಯಲ್ಲಿ ತುಂಬಿಕೊಂಡು ಠಾಣೆಯ ಬಳಿಗೆ ಬಂದಾಗ ಜನ ' ಗುಸ ಗುಸ' ಎನ್ನುತ್ತ ದಾರಿ ಮಾಡಿಕೊಟ್ಟಿತು. ಒಬ್ಬ ಪಿ.ಸಿ. ಬಂದು ಮಾಮೂಲು ಸೆಲ್ಯೂಟ್ ಹೊಡೆದು ಸೈಕಲ್ ತೆಗೆದುಕೊಂಡ. ಇನ್ಸ್ಪೆಕ್ಟರ್: ''ಯಾಕಷ್ಟು ಜನ'' ಎಂದುದಕ್ಕೆ, ಪಿ.ಸಿ. ''ಅದೇ ಸರ್ ! ಆ ಕೋತಿ ಆಡಿಸೋನ್ನ ನಮ್ಮ ದಫೇದಾರಣ್ಣ ಇಡಕೊಂಡು ಬಂದವನೆ. ಅವನಿಂದ ಆಟ ನೋಡ್ತಾ ಇದ್ದ ಜನವೆಲ್ಲ ಬಂದವೆ. ಇವಕ್ಕೇನು ಕೆಲ್ಸ ಹೇಳಿ ಮಂತ್ತೆ?'' ಎಂದವನೆ ಒಳ ನಡೆದ.

ಇನ್ಸ್ಪೆಕ್ಟರ್ ಗೆ ತುಂಬಾ ಆಶ್ಚರ್ಯವಾಯಿತು. ಈಗ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಯಲ್ಲಿದೆ. ಇಂಥ ಸಮಯದಲ್ಲಿ ಹಗಲು ಕಾಲದಲ್ಲಿ ಜನರನ್ನೇ ಅರೆಷ್ಟು ಮಾಡುವ ಪರಿಪಾಠಕ್ಕೆ ಬೆಲೆಯಿಲ್ಲ. ಏನಿದ್ದರೂ ಮಧ್ಯರಾತ್ರಿಯ ಮೇಲಿನ ಕೆಲಸ ಅದು! ಇಂಥ ಸಮಯದಲ್ಲಿ ಈ ಕೋತಿ ಆಡಿಸುವವನನ್ನು ದಫೇದಾರ ಏಕಿಡಿದ? ಏನೋ ಸಕಾರಣವಿರಬೇಕು ಎಂದುಕೊಂಡು ವೇಗವಾಗಿ ತಮ್ಮ ಆಫೀಸಿನ ಕಡೆ ನುಗ್ಗಿ, ಕನ್ನಡಿಯ ಮುಂದೆ ನಿಂತು ಮುಖ ಒರೆಸಿ, ತಲೆ ಬಾಚಿಕೊಂಡು, ಕುರ್ಚಿಯ ಮೇಲೆ ಕುಳಿತಿದ್ದುದೇ ತಡ. ದಫೇದಾರ ಮಹಾಶಯ ಕಾಣಿಸಿಕೊಂಡವನೆ ಹಲ್ಲು ಗಿಂಜಿ ಹೇಳಿದ: ''ಸಾ! ಒಂದು ಸ್ಪೆಶಲ್ ಕೇಸು ಸಾರು! ನೋಡಿ, ಒಬ್ಬ ಕೋತಿ ಆಡಿಸೋನು.........''

''ಹೂಂ! ಅದೇನು ಬೊಗಳು. ರಾಗ ಎಳೀಬೇಡ''

''ನೆಹರು ಸರ್ಕಲ್ ತಾವು ಸಾರ್! ತಾನು ಇರೋದು ತುರ್ತುಪರಿಸ್ಥಿತಿ ಅನ್ನೋದನ್ನ ತಿಳೀದೆ ಅಲ್ಕಾ ನನ್ನ ಮಗ ಏನು ಮಾಡ್ತಾಯಿದ್ದ ಸಾ....ಅದ ನೋಡೋಕೆ ಅದೇನ್ ಜನ ಸಾ....''

''ಅದೇನ್ ಬೊಗಳೋ ಅಂದ್ರೆ....''

'' ಮಹಾತ್ಮ ಗಾಂಧಿ ನಡೆಯೋದು ಹೆಂಗೆ ; ಪೋಲೀಸಿನೋರು ಜನಕ್ಕೆ ಹೊಡೆಯೋದು ಹೆಂಗೆ.....ಆಮ್ಯಾಲೆ.....''

'' ಅದ್ಕೆ ಅವ್ನ ಒದ್ದು ಎಳ್ಕೊಂಡು ಬಂದುಬುಟ್ಟ; ಕಳ್ಳ ನನ್ನ ಮಗನೆ!''

''ಅಷ್ಟೇ ಅಲ್ಲ ಸಾರ್! ನಮ್ಮ ನೆಚ್ಚಿನ ಪ್ರಧಾನಮಂತ್ರಿ ಇಂದಿರಾಗಾಂಧಿಯವರು ಭಾಷಣ ಮಾಡೋದೆಂಗೆ ಆಂತ ಕುಣಿಸುತ್ತಾ ಇದ್ದ. ನೋಡ್ತಾ ಇದ್ದೋನು ನಾನು, ಹಿಂದಿಲಿಂದ ಕತ್ತಿನ ಪಟ್ಟಿ ಹಿಡಿದು ಎಳ್ಕೊಂಡು ಬಂದು ಅವನ್ನ ಒದ್ದು, ಆ ಕೋತಿಗಳ್ ಸಮೇತ ಹಿಡಿದು ಎಸದಿವ್ನಿ! ಈ ಸೂಳೆ ಮಗನ್ನ ಮೀಸಾ ಪ್ರಕಾರ ಬುಕ್ ಮಾಡ್ಬೇಕು ಸಾರು!'' ಎಂದು ಗೋಗರೆಯುವಂತೆ ರಾಗ ಎಳೆದ.

ಇನ್ಸ್ಪೆಕ್ಟರಿಗೆ ಕೋತಿಗಳನ್ನೂ ಎಳೆದುಕೊಂಡು ಬಂದಿರುವುದನ್ನು ಕೇಳಿ ಕೇಸು ಒಳ್ಳೆಯ 'ಇಂಟ್ರಸ್ಟಿಂಗ್' ಆಗದೆ ಎಂದುಕೊಂಡು : ''ಅವನ್ನ ಕರಕೊಂಡು ಬಾ'' ಎಂದರು. ಕೋತಿ ಆಡಿಸುವವನು ಬಂದ. ಅವನ ಹಿಂದೆಯೇ ಮೂರು ಕೋತಿಗಳೂ ಬಂದವು. ಕೋತಿ ಆಡಿಸುವವನಿಗೆ ಸುಮಾರು ಇಪ್ಪತ್ತೈದರ ಪ್ರಾಯ. ಕೋತಿಗಳಲ್ಲಿ ಎರಡು ಗಂಡು, ಒಂದು ಹೆಣ್ಣು. ಎರಡು ಗಂಡುಗಳ ಪೈಕಿ ಒಂದು ಚಿಕ್ಕದ್ದು. ಯಾವ ಕೋತಿಗೂ ನಡುವಿಗೆ ಹಗ್ಗ ಹಾಕಿಲ್ಲ. ಹೆಣ್ಣು ಕೋತಿಯ ನಡುವಿಗೆ ಮಾತ್ರ ಗೆಜ್ಜೆ ಸರ ಕಟ್ಟಿದ್ದಾನೆ.

ಇನ್ಸ್ಪೆಕ್ಟರ್: ''ನಿನ್ನ ಹೆಸರೇನೋ'' ಎಂದರು.

''ಮಂಚ ಸ್ವಾಮಿ''

''ಯಾವೂರು ನಿಂದು ? ಏನಿದೆಲ್ಲ?''

''ನಾನು ಇದೇ ಊರೋನು ಸ್ವಾಮಿ. ಎಸ್.ಎಸ್.ಎಲ್.ಸಿ. ಗಂಟ ಓದಿವ್ನಿ. ಹುಡುಕ್ದೆ ಕೆಲಸ ಸಿಗಲಿಲ್ಲ. ಆಮ್ಯಾಲೆ ಈ ಕೋತಿ ಆಡ್ಸೋ ಕಸ್ಬು ಕಲ್ತುಕೊಂಡೆ.''

'' ಮೈಮುರ್ದು ದುಡ್ದು ಅನ್ನ ತಿನ್ನದೇ ಈ ಚಂಗೂಲೀ ಆಟಕ್ಕೆ ನಿಂತಿದ್ದೀ ಏನೋ ; ನಿನ್ನ ಕಂಕಳೇಲಿ ಇರೋ ಚೀಲದೇಲಿ ಏನು ಮಡಗಿದ್ದೀ ತಗೀ'' ಎಂದು ಚೀಲ ತೆಗೆದು ಕೊಡುವುದಕ್ಕೆ ಮುಂಚೆಯೇ ಚೀಲ ಕಿತ್ತುಕೊಂಡು ಪಿ.ಸಿ. ಸಾಹೇಬ ಇನ್ಸ್ಪೆಕ್ಟರ್ ಗೆ ಕೊಟ್ಟ. ಇನ್ಸ್ಪೆಕ್ಟರ್ ಸಾಹೇಬರು ಚೀಲದ ಅಂತರಾಳದಲ್ಲಿರುವ ಅಪೂರ್ವ ವಸ್ತುಗಳ ಶೋಧನೆ ಪ್ರಾರಂಭಿಸುತ್ತಿದ್ದಂತೆಯೇ ಮೂರು ಕೋತಿಗಳು ಚಂಗನೆ ಮೇಲಕ್ಕೆ ನೆಗೆದು ಟೇಬಲ್ಲಿನ ಮೇಲೆ ಸಾಲಾಗಿ, ಗಂಭೀರವಾಗಿ. ಕುಳಿತುಕೊಂಡವು. ಕೋತಿಗಳು ಚಂಗನೆ ನೆಗೆದು ಕುಳಿತು ಕೊಂಡಿದ್ದನ್ನು ಕಂಡ ಇನ್ಸ್ ಪೆಕ್ಟರಿಗೆ ತುಂಬಾ ಗಾಬರಿ ಆದರೂ, ಅವು ಕುಳಿತ ರೀತಿ ಮಾತ್ರ ತೀರ ಆಶ್ಚರ್ಯವನ್ನುಂಟುಮಾಡಿತು. ಎರಡು ಗಂಡುಗಳ ಪೈಕಿ ಒಂದು ಬಾಯಿ ಮುಚ್ಚಿಕೊಂಡಿದೆ; ಇನ್ನೊಂದು ಮರಿ, ಕಿವಿ ಮುಚ್ಚಿಕೊಂಡಿದೆ! ಇನ್ಸ್ ಪೆಕ್ಟರಿಗೆ ಸಣ್ಣದಾಗಿ ಮೈಯನ್ನು ಒಂದು ಬಗೆಯ ನೈತಿಕ ಹೆದರಿಕೆ ನಡುಗಿಸಿತು.

ಕೋತಿಗಳು ಏನನೋ ಮೇಲಕ್ಕೆ ನೋಡುತ್ತಿವೆ. ತಾವು ಕುಳಿತುಕೊಳ್ಳುವ ಕುರ್ಚಿಯ ಮೇಲೆ ಮಹಾತ್ಮ ಗಾಂಧಿ, ರಾಜೇಂದ್ರಪ್ರಸಾದ್, ನೆಹರು, ಪಟೇಲ್, ಸುಭಾಸ್, ಮುಂತಾದ ರಾಷ್ಟ್ರ ನಾಯಕರ ಭಾವಚಿತ್ರಗಳು ಧೂಳಿಡಿದು ಕುಳಿತಿವೆ. ಆ ಕಡೆಯೇ ಈ ಮೂರು ಕೋತಿಗಳೂ ದೃಷ್ಟಿ ಚೆಲ್ಲಿ ಕುಳಿತಿವೆ. ಇನ್ಸ್ಪೆಕ್ಟರ್ ಇನ್ನೂ ಸೂಕ್ಷ್ಮವಾಗಿ ಗಮನಿಸಿ ನೋಡಿದರು. ಮೂವರ ದೃಷ್ಟಿಯು ಮಹಾತ್ಮ ಗಾಂಧಿಯವರ ಭಾವಚಿತ್ರದ ಮೇಲೆಯೇ ಕೇಂದ್ರೀಕೃತವಾಗಿದೆ. ದಫೇದಾರನನ್ನು ಕರೆದು ಕೇಳಿದರು: ''ಈ ಕೋತಿಗಳನ್ನು ನೋಡ್ರಿ ಇವಕ್ಕೂ ಮಹಾತ್ಮ ಗಾಂಧಿಯವರಿಗೂ ಏನಾದರೂ ಸಂಬಂಧ ಇದೆ ಏನ್ರೀ ?''

'' ಮಹಾತ್ಮ ಗಾಂಧಿಯೋರ್ಗೆ ಏನು ! ಇಡೀ ಮನ್ಸರಿಗೂ ಈ ಕೋತಿಗಳ್ಗೂ ತಾತ ಮುತ್ತಾತನ ಸಂಬಂಧ ಅಲ್ವೆ ಸಾ!''

'' ಹೋಗಿ ಮಣ್ಣು ತಿನ್ನು! ನನ್ಮಗನೆ ಮಹಾತ್ಮ ಗಾಂಧಿಯವರ ತಾವು ಮೂರು ಕೋತಿಗಳ ಗೊಂಬೆ ಇದ್ದೊ ! ನೋಡು, ಇವು ಮೂರು ಕುಳಿತವಲ್ಲ ಆ ತರ. ಮೊದಲನೇದು ಬಾಯಿ ಮುಚ್ಚಿಕೊಂಡಿದೆ, ಯಾಕೆ ಗೊತ್ತೆ ? ಕೆಟ್ಟದ್ದನ್ನು ನುಡಿಯಬೇಡ ಎಂದು ; ಎರಡನೆಯದು ಕಣ್ಣು ಮುಚ್ಚಿಕೊಂಡಿದೆ, ಕೆಟ್ಟದ್ದನ್ನು ನೋಡಬಾರದು ಅಂತ ; ಮರಿ ಕಿವಿ ಮುಚ್ಚಿಕೊಂಡಿದೆ, ಕೆಟ್ಟದ್ದನ್ನು ಕೇಳಬಾರದು ಅಂತ. ಅದಿರಲಿ ಇವು ತಕ್ಷಣ ಈ ರೀತಿ ಕೂತ್ಕೋಬೇಕಾದ್ರೆ ಇವ್ಕೆ ಮಹಾತ್ಮ ಗಾಂಧಿಯವರ ಫೋಟೋ ಗುರುತಿಸೋದ್ಕೂ ಈ ಬಡ್ಡೀಮಗ ಕಲಿಸಿಕೊಟ್ಟವನೆ ಅಂದಂತಾಯ್ತು'' ಎಂದು ಅವನ ಚೀಲದ ಸಾಮಾನುಗಳನ್ನೆಲ್ಲಾ ಟೇಬಲ್ಲಿನ ಮೇಲೆ ಸುರಿದರು. ಒಂದು ಸಣ್ಣದಾದ ಸುಮಾರು ಎರಡು ಅಡಿ ಎತ್ತರದ ಕೋಲು, ಒಂದು ಸಣ್ಣ ಕೋಲಿಗೆ ಬಟ್ಟೆ ಸುತ್ತಿ ಕೆಳಕ್ಕೆ ನಿಲ್ಲಿಸಲು ವೃತ್ತಾಕಾರದ ಮರದ ಸಾಧನಕ್ಕೆ ಸಿಕ್ಕಿಸಿರುವ ಅಂದರೆ ಮೈಕ್ ಮತ್ತು ಅದರ ಸ್ಟ್ಯಾಂಡನ್ನು ಹೋಲುವ ಒಂದು ವಸ್ತು, ಹೆಣ್ಣು ಕೋತಿಗೆ ಲಂಗ ಸೀರೆ ಒಂದು ಪುಟಾಣಿ ಕಪ್ಪು ಕನ್ನಡಕ, ಒಂದು ಅಂಗೈ ಅಗಲದ ಮಹಾತ್ಮ ಗಾಂಧಿಯವರ ಫೋಟೋ.

'' ಅಷ್ಟೇ ಸ್ವಾಮಿ. ಇನ್ನೇನು ನಾನು ಚೀಲ್ದೇಲಿ ಚಿನ್ನದ ಗಟ್ಟಿ ಮಡ್ಗುಕೊಂಡಿದೀನಾ ?''

'' ಚಿನ್ನದ ಗಟ್ಟಿ ಮನೆ ಹಾಳಾಗಲೀ ; ಲೋ ! ಹಲ್ಕ ನನ್ನ ಮಗ್ನೆ ಬಂದಿರೋದು ಕೆಟ್ಟಕಾಲ, ತಗ್ಗಿ–ಬಗ್ಗಿ ನಡಿಬೇಕು ಕಣೋ.''

'' ನಾನೇನು ಮಾಡಿವ್ನಿ ಸಾ, ಅಂಥ ಅಪರಾಧ ?''

'' ನಿನ್ನ ಮೀಸಾ ಪ್ರಕಾರ ನಂ ದಫೇದಾರ ಹಿಡಿದವ್ನೆ. ಮೀಸಾ ಅಂದ್ರೆ ಮುಂಡೇದೆ ಮೈಂಟನೆನ್ಸ್ ಆಫ್ ಇಂಟರ್ನಲ್ ಸೆಕ್ಯೂರಿಟಿ ಆಕ್ಟ್, ಅಂದ್ರೆ ಭಾರತ ಸರ್ಕಾರದ ಆಂತರಿಕ ಭದ್ರತಾ ಶಾಸನ....''

'' ಗೊತ್ತು ಸಾ ! ಮೀಸಾ ಅನ್ನು ಹೆಸರು ಕೇಳ್ತಾ ಇದ್ದಂಗೆ ಜನ ನಡಗೋದ, ದಿವ್ಸ ನಾನು ನೋಡ್ತಾ ಇವ್ನಿ....''

'' ಅಂಗಾದ್ರೆ ನಿಂಗೆ ಮೀಸ ಗೊತ್ತದೆ ! ಗೊತ್ತಿದ್ದು ನೀನು ಈ ಅಪರಾಧಗಳನೆಲ್ಲ ಮಾಡ್ತಾ ಇದ್ದೀಯ ದೇಶದ್ರೋಹಿ ನನ್ನ ಮಗನೆ....''

''ನಾನ್ಯಾವ ಅಂತ ದ್ರೋಹದ ಕೆಲ್ಸ, ಅದೂ ದೇಶದ್ರೋಹದ ಕೆಲ್ಸ ಮಾಡಿವ್ನಿ ಸಾರ್? ಖೋಟಾನೋಟು ಮಾಡಿ ಆರು ಅಂತಸ್ತಿನ ಮನೆ, ಎಂಟು ಬಸ್ಸು, ಹನ್ನೊಂದು ಲಾರಿ, ಒಂದ್ಯೆದು ಲಕ್ಷ ರೂಪಾಯಿ ಕಾರು ತಕ್ಕೊಂಡಿವ್ನಾ? ಕಂಟ್ರಾಕ್ಟ್ ತಕ್ಕೊಂಡು ಕಟ್ಟಿದ ಒಂದೇ ವರ್ಷಕ್ಕೆ ಕಸ್ಕೋವಂತೆ ಸೇತ್ವೆ, ಮನೆ ಕಟ್ಟೀವ್ನಾ? ಕಳ್ಳಭಟ್ಟಿ ಶರಾಬ್ ಮಾಡೀವ್ನಾ? ಏನು ಹೇಳಿ, ನಾನು ದೇಶ ದ್ರೋಹದ ಕೆಲಸ ಮಾಡಿರೋದು ?''

''ಬಡ್ಡೀಮಗ್ನೆ ! ಲೋ ! ನಾಲ್ಗೆ ಬಲು ಉದ್ದ ಆಯ್ತು ನಿಂಗೆ'' ಎಂದವನೇ ದಫೆದಾರ ದಿಢೀರನೆ ಮಂಚನಿಗೆ ಕತ್ತಿನ ಮೇಲೆ ಬಲವಾಗಿ ಒಂದು ಗುದ್ದು ಕೊಟ್ಟ. ಮಂಚ 'ಹುಂ' ಎಂದವನೇ ಮುಗ್ಗರಿಸಿ, ಇನ್ಸ್ಪೆಕ್ಟರ್ ಸಾಹೇಬರ ಟೇಬಲ್ಲು ಹಿಡಿದುಕೊಂಡ. ಗಲಾಟೆ ಆದುದನ್ನು ಕೇಳಿ ಕೋತಿಗಳು 'ಗುರ್' ಎಂದು ಗಕ್ಕನೆ ತಿರುಗಿ ದಫೇದಾರನ ಕಡೆ ಚಂಗನೆ ಹಾರಿದುವು. ದಫೇದಾರ ತನ್ನ ಕೈಯಲ್ಲಿನ ಲಾಠಿಯಿಂದ "ಉಡೀ ಉಡೀ ಹಾಳಾಗೋದೋವ" ಎಂದು ಅರಚಲು ಪ್ರಾರಂಭಿಸಿದಂತೆಯೇ ಮಂಚ ಕೂಗಿಕೊಂಡ :''ರಾಮ, ಸೀತೆ, ಅಭಿಮನ್ಯು ! ಗಾಂಧಿತಾತ ಏನು ಹೇಳಿದ್ರು" ಎಂದದ್ದೇ ತಡ, ಒಂದು ಗಂಡು ಕೋತಿ ಇನ್ನೊಂದು ಗಂಡು ಕೋತಿಗೆ ಬಲವಾಗಿ ಕೆನ್ನೆಗೆ ಬಾರಿಸಿತು. ಹೊಡೆಸಿಕೊಂಡದ್ದು, ಹೊಡೆದ ಕೋತಿಗೆ ಪ್ರತೀಕಾರ ಮಾಡುವ ಬದಲು ತನ್ನ ಎಡಕೆನ್ನೆಯನ್ನು ತೋರಿಸಿತು. ಅದಕ್ಕೂ ಏಟು ಬಿತ್ತು. ಏಟಿನ ಮೇಲೆ ಏಟು ಬಿದ್ದರೂ ಪ್ರತೀಕಾರ ಎಸಗಲಿಲ್ಲ. ಬದಲು ಗಂಭೀರವಾದ ಮಹಾತ್ಮ ಗಾಂಧಿಯವರು ಬೋಧಿಸಿದ ಸತ್ಯಾಗ್ರಹವನ್ನು ಪ್ರತಿಪಾದನೆ ಮಾಡುವ ರೀತಿಯಲ್ಲಿ ಕುಳಿತುಬಿಟ್ಟಿತು. ಅದರ ಪಕ್ಕದಲ್ಲೇ ಹೆಣ್ಣುಕೋತಿ ಸತ್ಯಾಗ್ರಹ ಭಂಗಿಯಲ್ಲಿ ಕುಳಿತುಬಿಟ್ಟಿತು! ಇನ್ಸ್ಪೆಕ್ಟರಿಗೆ ಆಶ್ಚರ್ಯ ಅಷ್ಟಿಷ್ಟಲ್ಲ. ಸತ್ಯಾಗ್ರಹ! ಅದೂ ಕೋತಿಗಳಿಂದ! ಮನುಷ್ಯ ಮನುಷ್ಯನ ಮೇಲೆ ದೌರ್ಜನ್ಯ ಮಾಡಿದ್ದಕ್ಕಾಗಿ ಕೋತಿಗಳಿಂದ ಮಹಾತ್ಮನ ತತ್ವ ಪ್ರತಿಪಾದನೆ! "ಠ್ರಣ್ ಠ್ರಣ್" ಟೆಲಿಫೋನಿನ ಗಂಟೆ ಬಾರಿಸಿದುದರಿಂದ ಇನ್ಸ್ಪೆಕ್ಟರ ಆಲೋಚನೆಯ ಲಹರಿ ಕಡಿದುಹೋಯ್ತು. ಫೋನ್ ಎತ್ತಿಕೊಂಡರು. ಮಾತನಾಡುತ್ತಿರುವವರು ಸೂಪರ್ಡೆಂಟ್ ಸಾಹೇಬರು ಅವರಿಗೂ ಕೋತಿಗಳ ವಿಷಯ, ಸ್ಟೇಷನ್ನಿನ ಮುಂದೆ ಜನ ಘೇರಾಯಿಸಿರುವುದು ತಲೆ ಕೆಡಿಸಿತ್ತು. ಇನ್ಸ್ಪೆಕ್ಟರ್ ಸವಿಸ್ತಾರವಾಗಿ ಕೋತಿಗಳ ವಿಚಿತ್ರ ನಡವಳಿಕೆಗಳನ್ನು ತಿಳಿಸಿ, "ಸರ್! ಈ ಕೋತಿ ಆಡಿಸುವ ಮಂಚ, ಈ ಕೋತಿಗಳ ಮುಖಾಂತರ ಮಹಾತ್ಮ ಗಾಂಧಿಯವರು ಅಹಿಂಸೆಯ ಬಗ್ಗೆ ಜನರಿಗೆ ಬೋಧಿಸಿದ ತತ್ವಗಳನ್ನು

ಅದ್ಭುತವಾಗಿ ಪ್ರಚಾರ ಮಾಡುತ್ತಿದ್ದಾನೆ. ನನಗಂತೂ ಇವನು ಜನರನ್ನು ಶಾಂತಿ ಶಿಸ್ತುಗಳ ಕಡೆಗೆ ಕೊಂಡೊಯ್ಯುತ್ತಿರೋ ಒಳ್ಳೆಯ ದೇಶಪ್ರೇಮಿ ಅನ್ನಿಸ್ತು ಸರ್" ಎಂದರು

"ಆದ್ರೆ ಅವ್ನು ಇನ್ನು ಒಂದು ತಪ್ಪು ಮಾಡಿದ್ದಾನಲ್ರೀ"

"ಆದ್ರೂ ಮೀಸಾ ಇವನ್ಗೆ ಅನ್ವಯಿಸಬಾರದು ಸಾರ್."

"ಹಾಗಾದ್ರೆ ಒಂದು ಕೆಲ್ಸ ಮಾಡಿ, ತಕ್ಷಣವೇ ನಮ್ಮ ಫೋಟೋಗ್ರಾಫರ್ ಕರ್ಸಿ ಕೋತಿಗಳು ಮತ್ತು ಆಡಿಸೋನ ಫೋಟೋ ತೆಗ್ಸಿ. ಹಾಗೇ ಪತ್ರಿಕೆಗಳವರನ್ನ ಕರ್ಸಿ. ನಾನು ತಕ್ಷಣ ಬರ್ತೀನಿ. ಪ್ರಾಣಿಗಳ ಸ್ವಾತಂತ್ರ್ಯ ಹರಣವಾದ ಬಗ್ಗೆ ಮತ್ತು ಚಿತ್ರಹಿಂಸೆ ನೀಡಿದ ಬಗ್ಗೆ ಆ ಕೋತಿ ಆಡಿಸೋನ ಮೇಲೆ ಕಾನೂನಿನ ಕ್ರಮ ಜರುಗಿಸೋಣ. ಕೋತಿಗಳನ್ನು ಬಿಡುಗಡೆ ಮಾಡೋಣ. ನೋಡ್ರಿ ಇದು ಇಡೀ ಭಾರತದಲ್ಲೇ ಒಂದು ವಿಚಿತ್ರವಾದ ವಿಚಾರಣೆ ಆಗ್ತದೆ ಗೊತ್ತಾ. ನೋಡಿ! ಈ ಕೂಡಲೇ ಆಕಾಶವಾಣಿಗೆ ಈ ವಿಷಯವನ್ನು ಫ್ಲಾಷ್ ಮಾಡ್ಬಿಡಿ. ದೇಶದಲ್ಲಿ ಸ್ವಾತಂತ್ರ್ಯ ಅಂದ್ರೆ ಮೈ ಡಿಯರ್ ಇನ್ಸ್ಪೆಕ್ಟರ್ ಬರೀ ಮನುಷ್ಯರಿಗೆ ಮಾತ್ರವಲ್ಲ, ಪ್ರಾಣಿಗಳಿಗೂ ಇರಬೇಕ್ರಿ...ಎಸ್... ಹರಿ ಅಪ್ ಪ್ರೆಸ್ ನೋರ್ನ ಬೇಗ ಕರ್ಸಿ ನಾನು ಈಗಲೇ ಬಂದೆ." "ಎಸ್ ಸಾರ್ ಆಗಲಿ ಸಾರ್.''

○ ○ ○

ಮಾರನೆಯ ದಿನ ಪತ್ರಿಕೆಯಲ್ಲಿ ಮಂಚ ಮತ್ತು ಅವನ ಮೂರು ಕೋತಿಗಳಾದ ರಾಮ, ಸೀತೆ, ಅಭಿಮನ್ಯುರವರ ಭಾವಚಿತ್ರ ಪ್ರಮುಖವಾಗಿ ಮುಂದಿನ ಪುಟಗಳಲ್ಲಿ ಕಾಣಿಸಿಕೊಂಡಿತು. ಮಂಚನ ಮೇಲೆ ಕೋತಿಗಳನ್ನು ಹಿಡಿದು ಹಿಂಸಿಸಿದುದಕ್ಕಾಗಿ ಕಾನೂನಿನ ಕ್ರಮ ಜರುಗಿಸುವುದಾಗಿ ಸ್ಪಷ್ಟಪಡಿಸಲಾಗಿತ್ತು. ಜೊತೆಗೆ ಆಕಾಶವಾಣಿ : ''ಓರ್ವ ಕೋತಿ ಆಡಿಸುವವನನ್ನು ಬಂಧಿಸಲಾಗಿದೆ ಎಂದೂ, ಜೊತೆಗೆ ಅವನು ಪ್ರಾಣಿಗಳನ್ನು ಹಿಂಸೆ ಪಡಿಸಿ, ಅವುಗಳನ್ನು ಬಂಧಿಸಿ ಅವುಗಳ ಸ್ವಾತಂತ್ರ್ಯ ಅಪಹರಣ ಮಾಡಿದುದಕ್ಕಾಗಿ ಕಾನೂನಿನ ಕ್ರಮ ಜರುಗಿಸಲಾಗುತ್ತಿದೆ ಎಂದೂ, ಈ ಮೂಲಕ ಭಾರತದಲ್ಲಿ ಪ್ರಾಣಿಗಳ ಮೂಲಭೂತ ಹಕ್ಕುಗಳಿಗೆ ಇನ್ನು ಮುಂದೆ ಚ್ಯುತಿ ಬಾರದಂತೆ ನೋಡಿಕೊಳ್ಳಲಾಗುವುದೆಂದೂ ತಿಳಿಸುತ್ತಾ, ಇನ್ನೂ ಮುಂದುವರೆದು ಕೋತಿಗಳನ್ನು ಕಂಡರೆ ರಾಷ್ಟ್ರಪಿತ ಮಹಾತ್ಮ ಗಾಂಧಿಯವರಿಗೆ ತುಂಬಾ ಪ್ರೀತಿ ಹಾಗೂ ಗೌರವ ಭಾವವಿತ್ತೆಂದೂ, ಆದ್ದರಿಂದ ಕೋತಿಗಳಿಗೆ ಆಗುವ ಹಿಂಸೆಯನ್ನು ಮಹಾತ್ಮ ಗಾಂಧಿಯವರಿಗೆ ಆದ ಹಿಂಸೆ ಎಂದು ಪರಿಗಣಿಸಲಾಗಿದೆ" ಎಂದೂ ತಿಳಿಸಿತು.

ಪತ್ರಿಕೆಗಳು ಮತ್ತು ಆಕಾಶವಾಣಿ ಬಿತ್ತರಿಸಿದ ಸುದ್ದಿಯಂತೆ ಕೋತಿ ಆಡಿಸುವ ಮಂಚನಿಗೆ ಆರು ತಿಂಗಳುಗಳ ಕಾಲ ಕಠಿಣ ಕಾರಾಗೃಹ ವಾಸವನ್ನು ನ್ಯಾಯಾಲಯ ವಿಧಿಸಿತು. ಅಲ್ಲದೆ ಕೂಡಲೇ ಮೂರು ಕೋತಿಗಳಾದ ರಾಮ, ಸೀತೆ, ಅಭಿಮನ್ಯುಗಳನ್ನು ಬಿಡುಗಡೆ ಮಾಡುವಂತೆ ಆಜ್ಞೆ ಮಾಡಿತು. ಅದರಂತೆ ಅವುಗಳ ಬಿಡುಗಡೆಯೂ ಆಯಿತು.

ಮಂಚನನ್ನು ಸೆಂಟ್ರಲ್ ಜೈಲಿಗೆ ಹಾಕಿದರು.

ಇಪ್ಪತ್ತು ದಿನಗಳುರುಳಿದವು, ಮಾರನೆಯ ಬೆಳಗ್ಗೆ ಸುಮಾರು ಎಂಟು ಗಂಟೆಯ ಸಮಯದಲ್ಲಿ ಸೆಂಟ್ರಲ್ ಜೈಲಿನ ಮುಂಭಾಗದಲ್ಲಿ ಮೂರು ಕೋತಿಗಳು ಮಲಗಿದ್ದವು. ಸೆಂಟ್ರಿ ದೂರದಿಂದಲೇ ಕಲ್ಲು ಎಸೆದ, ಜಗ್ಗಲಿಲ್ಲ, ಆಶ್ಚರ್ಯವಾಯಿತು, ಹತ್ತಿರಕ್ಕೆ ಬಂದ, ಅವನ ಹಿಂದೆಯೇ ಜೈಲಿನಲ್ಲಿರುವ ತಮ್ಮ ಬಂಧುಗಳನ್ನು ನೋಡಲು ಬಂದಿದ್ದ ಜನರೂ ಬಂದರು, ನೋಡುತ್ತಾರೆ! ಒಂದು ಕೋತಿ ಬಾಯಿ ಮುಚ್ಚಿಕೊಂಡಿದೆ, ಇನ್ನೊಂದು ಕಣ್ಣು ಮುಚ್ಚಿಕೊಂಡಿದೆ, ಮತ್ತೊಂದು ಕಿವಿ ಮುಚ್ಚಿಕೊಂಡಿದೆ ಸದ್ದು ಮಾಡಿದರೂ ಏಳಲಿಲ್ಲ, ಸೆಂಟ್ರಿ ಒಂದೊಂದನ್ನು ಮೈಹಿಡಿದು ಅಲುಗಿಸಿದ, ಜಗ್ಗಲಿಲ್ಲ, ಕಾಕಿ ಬಟ್ಟೆ ತೊಟ್ಟಿರುವ ಬಂದೂಕ ಹೊತ್ತಿರುವ ಅವನ ದೇಹದಲ್ಲಿರುವ ತಲೆ ಎಂಬ ಅಂಗದಲ್ಲಿರುವ ಎರಡು ಕಣ್ಣು ಗಳಿಂದಲೂ ನೀರು 'ಚಿಲ್'ಎಂದಿತು.

"ಅಂತೂ! ಮುಂಡೆವ್ಕೆ ಕೊನೆಗೂ ಸ್ವಾತಂತ್ರ್ಯ ಸಿಕ್ತು ರಾಮ ರಾಮ" ಎಂದು ಆಕಾಶದ ಕಡೆ ನೋಡಿದ.

ಅವನ ಸುತ್ತಿನ ಜನ 'ಅಯ್ಯೋ' ಎಂದಿತು.

ಆದರೆ, ಈ ಕೋತಿಗಳಿಗೆ ಸ್ವಾತಂತ್ರ್ಯ ದೊರೆತ ಮೇಲೆ ದಕ್ಕಿದ 'ಸ್ವರ್ಗದ' ಸುದ್ದಿಯನ್ನು ಯಾವ ಪತ್ರಿಕೆಯೂ ಬರೆಯಲಿಲ್ಲ.

# 2.4 ಓದು ಪಠ್ಯ: ನನ್ನೂರಿಗೆ ಮನುಷ್ಯರನ್ನು ಹುಟ್ಟಿಸಿ ಕಳಿಸು

**– ಫಾತಿಮಾ ರಲಿಯಾ**

ಹೂವಿನ ಮೇಲೆ ಕೈಇಟ್ಟಾಗೆಲ್ಲಾ
ಅಚಾನಕ್ಕಾಗಿ
ಗೀರುವ ಮುಳ್ಳುಗಳು
ಈಗೀಗ ನೋವನ್ನೀಯುವುದಿಲ್ಲ

ನಿತ್ಯ ನರಕ ದರ್ಶನ ಪಡೆಯುವ
ಖಾಲಿ ಕಣ್ಣುಗಳಿಗೆ
ಮುಳ್ಳು, ಹೂವಿನ ವ್ಯತ್ಯಾಸ
ಗೊತ್ತಾಗುವುದಾದರೂ ಹೇಗೆ?

ನನ್ನೂರಿನ ಬೀದಿಗಳು ಸಂಕೋಲೆ
ತೊಡಿಸಿಕೊಂಡು ದಶಕಗಳೇ ಕಳೆಯಿತು
ಈಗಿಲ್ಲಿ ಸದ್ದುಗಳಿರುವುದು
ಧರ್ಮಗಳಿಗೆ ಮಾತ್ರ

ಕಡ್ಡಿಯಿಂದ ಬೆಂಕಿ ಮತ್ತು ದೀಪ
ಎರಡೂ ಹಚ್ಚಬಹುದು
ಎನ್ನುವುದೆಲ್ಲಾ ಹಳೆಯ
ಕ್ಲೀಷೆ

ಇಲ್ಲಿ ತುರುಸಿನ ಸ್ಪರ್ಧೆಯಿರುವುದು
ಬಡ ಅಮ್ಮಂದಿರ ಮಡಿಲು

ಬರಿದುಗೊಳಿಸುವುದರಲ್ಲಿ ಮಾತ್ರ
ಗದ್ದುಗೆಗೆ ಒಂದಾದರೂ ದಾರಿ ಬೇಡವೇ?

ಬುದ್ಧಿವಂತರು, ವಿದ್ಯಾವಂತರುಗಳೆಂಬ
ತಲೆಭಾರದ ಕಿರೀಟಗಳೆಲ್ಲಾ ಸಾಕು
ದಯವಿಟ್ಟು ನನ್ನೂರಿಗೆ
ಮನುಷ್ಯರನ್ನು ಹುಟ್ಟಿಸಿ ಕಳಿಸು ದೇವಾ

ಕನಿಷ್ಠಪಕ್ಷ,
ನೆತ್ತರಿನ ಕಮಟು, ಬಣ್ಣ
ಮೂಗು, ಕಣ್ಣೊಳಗೆ ಇಳಿಯದಂತೆ ಮಾಡು
ಉಸಿರಿರುವಷ್ಟು ಕಾಲ ತಣ್ಣಗೆ ಬದುಕುತ್ತೇನೆ

# 3 ಸೌಹಾರ್ದ


| | | |
|---|---|---|
| 3.1 ನೂಱಯ್ವರಾವಲ್ಲವೇ | - ಪಂಪ | 39 |
| 3.2 ಕುಸಿಯುತ್ತಿರುವ ಸಾಂಸ್ಕೃತಿಕ ನೆಲೆಗಳು - ರಂಜಾನ್ ದರ್ಗ | | 42 |
| 3.3 ಅಲಿ ಅನಿಲ್ | - ತ್ರಿವೇಣಿ | 51 |
| 3.4 (ಓದುಪಠ್ಯ) ಸ್ವಾಮಿ ಸಂಧಾನ | - ಬಿ.ಜಿ.ಎಲ್ ಸ್ವಾಮಿ | 62 |

# 3 ಸೌಹಾರ್ದ

**ಆಶಯ :**

ಭಾರತ ಸರ್ವಧರ್ಮ ಸಮನ್ವಯತೆಯಿಂದ ಕೂಡಿದ ರಾಷ್ಟ್ರ ವಿವಿಧತೆಯಲ್ಲಿ ಏಕತೆಯನ್ನು ಸಾರುವುದು ಇಲ್ಲಿನ ಉದ್ದೇಶ. ವೈವಿದ್ಯ ಸಂಸ್ಕೃತಿ, ವಿಭಿನ್ನ ಸಂಪ್ರದಾಯ, ವಿವಿಧ ಭಾಷೆಗಳನ್ನಾಡುವ ಜನ ಇಲ್ಲಿ ಕಾಲಾನುಕಾಲದಿಂದ ಒಂದಾಗಿ, ಒಗ್ಗಟ್ಟಿನಿಂದ ಒಟ್ಟುಗೂಡಿ, ಒಗ್ಗಟ್ಟನ್ನು ಒಡೆದು ಜಾತಿ, ಧರ್ಮದ ವಿಷ ಬೀಜ ಬಿತ್ತುವ ಪಟ್ಟಭದ್ರ ಹಿತಾಸಕ್ತಿಗಳು ಹೆಚ್ಚಾಗುತ್ತಿವೆ.

ಮನುಷ್ಯರ ಹೃದಯ ವೈಶಾಲ್ಯವೇ ಸಂಸ್ಕೃತಿಯ ಮೂಲಭೂತ ತಳಹದಿ. ಅಲ್ಲಿ ಪ್ರೀತಿ, ಕರುಣೆ, ಸಹನೆ, ಪರಧರ್ಮ ಸಹಿಷ್ಣುತೆ, ಸಮಾನತೆಗಳು ತುಂಬಿಕೊಂಡಿವೆ. ಇವೆಲ್ಲ ಇದ್ದಾಗಲೇ ನಮ್ಮ ಬದುಕು ಸಹ್ಯವಾಗುತ್ತದೆ. ಆದರೆ ಇಂದಿನ ಆಧುನೀಕರಣ, ಜಾಗತೀಕರಣ, ಉದಾರೀಕರಣಗಳು ಭಾರತೀಯರ ಬದುಕಿನ ರೀತಿ – ನೀತಿಗಳನ್ನೇ ಬದಲಿಸುತ್ತಿವೆ. ಹಣ, ಅಧಿಕಾರದ ಮೋಹ, ಸ್ವಾರ್ಥಮನೋಭಾವ ಎಲ್ಲೆಡೆ ತುಂಬಿಕೊಂಡಿದೆ. ಬಡವ–ಶ್ರೀಮಂತರ ಅಂತರ ಹೆಚ್ಚುತ್ತ ಸಾಗಿ, ಮಾನವೀಯ ಸಂಬಂಧಗಳೆಲ್ಲವೂ ವ್ಯವಹಾರಗಳಾಗಿ ಮಾರ್ಪಡುತ್ತಿವೆ. ಕೋಮುವಾದದ ಕರಾಳ ಮುಖ ಎದ್ದು ತೋರುತ್ತಿದೆ. ಮೌಲ್ಯಗಳು ಬದಲಾಗಿವೆ. ಈ ನೆಲೆಯಲ್ಲಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಪ್ರಯತ್ನಗಳಾಗಬೇಕೆಂಬುದು ಈ ಲೇಖನಗಳ ಆಶಯವಾಗಿದೆ.

# 3.1 ನೂಱಯ್ವರಾವಲ್ಲವೇ?

**– ಪಂಪ**

ವ॥ ಇತ್ತ ದುರ್ಯೋಧನಂ ಸಮಸ್ತ ಸಾಧನ ಸಹಿತನಾಗಿ ಕಾಡೊಳ್ ಬೇಡರಂತೆ ತೊೞಲ್ವ ದಾಯಿಗರ ಕಂದಿ ಕುಂದಿದ ಮೊಗಂಗಳಂ ನೋಡುವುದುಮೆನ್ನನವರಿಂ ನೋಡಿಸುವುದುಮೀಯೆರಡೆ ಸಂಸಾರ ಫಲವೆಂದು ನಾಗಪುರದಿಂ ಪೊಱಮಟ್ಟು ದುಶ್ಶ್ಯಾಸನಾದಿಗಳಪ್ಪ ನೂರ್ವರ್ ತಮ್ಮಂದಿರುಂ ಭಾನುಮತಿಯುಂ ಚಂದ್ರಮತಿಯುಮೆಂಬ ಬೇಟದರಸಿಯರುಂ ಲಕ್ಕಣಂ ಮೊದಲಾಗೆ ನೂರ್ವರ್ ಮಕ್ಕಳುಂ ಗಾಂಗೇಯ ದ್ರೋಣ ಕೃಪ ವಿದುರ ಪ್ರಭೃತಿಗಳುಮಶ್ವತ್ಥಾಮ ಕರ್ಣ ಶಲ್ಯ ಶಕುನಿ ಸೈಂಧವ ಪ್ರಮುಖ ನಾಯಕರುಂ ಬೆರಸು ಬೇಂಟೆಯ ನೆವದಿಂ ಬಂದು ದ್ವೈತವನದ ಕೆಲದ ನಂದನ ವನದೊಳ್ ಪಾಂಡವರ್ಗೆ ಸಮೀಪಮಾಗೆ ಬೀಡಂಬಿಟ್ಟು ಪಾಡಿಸುತ್ತುಂ ಪೊಗೞಿಸುತ್ತುಮಿರ್ದನನ್ನೆಗಂ ಪಗೆಯಿೞಿಯ ಬಂದರ ಮೂಗನರಿದರೆಂಬಂತನಿಬರುಂ ಬಾಯಂಬಿಟ್ಟು ನೋಡೆ ಪೂರ್ವಜನ್ಮದ ಪಗೆ ಚಿತ್ರಾಂಗದನೆಂಬ ಗಂಧರ್ವನಱುವತ್ತು ಕೋಟಿ ಗಾಂಧರ್ವ. ಬಲಂಬೆರಸು ಬಂದು ದುರ್ಯೋಧನ ದುಶ್ಶ್ಯಾಸನರಿರ್ವರುಮಂ ಕೋಡಗಗಟ್ಟುಗಟ್ಟಿ.

ಮಿಡುಕದೆ ಭೀಷ್ಮ ನೋಡುತಿರು ಕುಂಭಜ ಸುರ್ಕಿರು ಕರ್ಣ ಮಿಕ್ಕಮಾರ್ನುಡಿಯದೆ ಮೂಗುವಟ್ಟಿರು ಗುರುಪ್ರಿಯನಂದನ ಕೂಗಡಂಗದಿರ್ದೊಡೆ ಬರ್ದುಕಾವುದಿರ್ ಪೊಡರ್ದೊಡೀಗಡೆ ಕೊಂದಪೆನೆಂದು ಕೂಡೆ ಕಣ್ಗಿದೆ ಜಡಿದುಯ್ದನಾ ಖಚರನಿರ್ವರುಮಂ ಪರಮಾಣು ಮಾರ್ಗದಿಂ

ವ॥ ಅಂತುಯ್ವುದುಂ ನೆಗೞ್ತೆಯ ಬೀರರೆಲ್ಲಂ ಬಡವರ ಪಿತರರಂತೆ ಮಿಳ್ಮಿಳ ನೋಡುತ್ತಿರೆ ಮಿಕ್ಕದುಂಡರಂತೆ ತಲೆಯಂ ಬಾಗಿ ಬಿಲ್ಗಳಂ ಮುಂದಿಟ್ಟು ಬಿಲ್ಲುಂ ಬೆಱಗುಮಾಗಿರೆ ದುರ್ಯೋಧನನ ಮಹಾದೇವಿ ಭಾನುಮತಿ ಬಾಯೞಿದು ಪುಯ್ಯಲಿಡುತುಂ ಬಂದು ಧರ್ಮನಂದನನ ಕಾಲಮೇಲೆ ಕವಿದುಪಟ್ಟು –

ನೋಂತರ ಪಗೆವರನೆೞ್ತಿಱಿ
ದಂತಾಯ್ತೆಂದಿರದೆ ಪುರುಷಕಾರದ ಪೆಂಪಂ
ಚಿಂತಿಸಿ ತರಿಸಿ ಮಹೀಶನ
ನೆಂತಪ್ಪೊಡಮೆನಗೆ ಪುರುಷಭಿಕ್ಷಮನಿಕ್ಕಿಂ

ವ॥ ಎಂದು ಪುಯ್ಯಲಿಡುವ ಭಾನುಮತಿಯ ಪುಯ್ಯಲಂ ಕೇಳ್ದು ಸುಯೋಧನಂ ಬಂದ ವೃತ್ತಾಂತಮನಱಿದು

ಸುರಿಯಲ್ಬೇಡಮದರ್ಕೆ ಬಾಷ್ಪಜಳಮಂ ನಿನ್ನಾಣ್ಮನಂ ನಿನ್ನೊಳಿಂದಿರದಾಂ ಕೂಡುವೆವೆಮ್ಮೊಳಾದ ಕಲಹಕ್ಕೆಂತಾದೊಡಂ ಕೇಳ ನೂರ್ವರೆ ದಲ್ ಕೌರವರಾಮುಮಯ್ವರೆ ವಲಂ ಮತ್ತೊರ್ವರೊಳ್ ತೊಟ್ಟ ಸಂಗರ ರಂಗಕ್ಕೆ ಜಸಕ್ಕೆ ಕೂಡುವೆಡೆಯೊಳ್ ನೂಱಯ್ವರಾವಲ್ಲವೇ

ವ॥ ಎಂದು ಯುಧಿಷ್ಠಿರಂ ಪಾಟಿಯ ಪಸುಗೆಯನಱಿದು ನುಡಿದೊಡಾ ಪೂಣ್ದ ಬೆಸನಂ ಕರಮಾಸೆವಟ್ಟು ತನ್ನ ಕೆಲದೊಳಿರ್ದ ಸಾಹಸಾಭರಣನ ಮೊಗಮಂ ನೋಡಿ

ಪಿಡಿದುಯ್ದುದು ಗಂಧರ್ವರ

ಪಡೆಗಣ ನಿಮ್ಮಣ್ಣನಂ ಸುಯೋಧನನನಿದಂ

ಕಡೆಗಣಿಸಲಾಗ ನಮಗೀ

ಗಡೆ ಬೇಗಂ ಬಿಡಿಸಿ ತರ್ಪುದಾತನ ಸೆಜೆಯಂ

ವ॥ ಎಂಬುದುಂ ಮಹಾಪ್ರಸಾದಮಂತೆ ಗೆಯ್ವೆನೆಲ್ಲಿವೊಕ್ಕೊಂಡಂ ಕೊಂಡು ಬಂದಪೆನೆಂದು ಬಗೆಯದಿದಿರಂ ನೋಡುತ್ತಿರಿಮೆಂದು ತವದೊಣೆಗಳಂ ಬಿಗಿದು ಗಾಂಡೀವಮನೇಱಿಸಿ ನೀವಿ ಜೇವೊಡೆದು ಗಂಧರ್ವರು ಪೋಪ ಬಟಿಯಂ ಬೆಸಕೊಂಡು ಚಕ್ಷುಸಿಯೆಂಬ ವಿದ್ಯೆಯಿಂ ತನ್ನ ಕಣ್ಣನಭಿಮಂತ್ರಿಸಿಕೊಂಡು ಪಾಱುವ ಗಂಧರ್ವ ಬಲಮಂ ಜಲಕ್ಕನೆ ಕಂಡು –

ಕೊಳ್ ಕೊಳ್ಳೆಂದೆಚ್ಚೊಡೆ ವಿಳ

ಯೋಳ್ಕದ ತೆಱದಿಂದೆ ಮುಸುಱಿ ದಿವ್ಯಾಸ್ತ್ರಚಯಂ

ಗಳ್ ಕೊಳೆ ಗಾಂಧರ್ವ ಬಲಂ

ಗಳ್ ಕೆಡೆದುವು ಮಿಟ್ಟೆಗೊಂಡ ಚಿಟ್ಟೆಯ ತೆಱದಿಂ

ವ॥ ಅಂತಲ್ಲಿ ಪದಿನಾಲ್ಸಾಸಿರ್ವರ್ ಗಂಧರ್ವರಂ ಕೊಂದೊಡೆ ಚಿತ್ರಾಂಗದಂ ಬೆರ್ಚಿ ಕೊಳ್ ನಿನ್ನ ನಚ್ಚಿನ ಸೆಜೆಯನೆಂದು ಬಿಸುಟ್ಟೊಡೆ ನೋಯಲೀಯದೆ ನೆಲದಾಕಾಶದೆಡೆಯೊಳಂಬುಗಳಂ ತರತರದಿಂದೆಚ್ಚು ಸೋಪಾನಂ ಮಾಡಿ ದುರ್ಯೋಧನ ದುಶ್ಯಾಸನರನಿೞಿಪಿ ಕಟ್ಟುಗಳಂ

ಬಿಡದೊಡಗೊಂಡು ಬಂದು ಧರ್ಮಪುತ್ರಂಗೆ ತೋಱಿದೊಡೆ ಸಾಹಸಾಭರಣನ ಸಾಹಸಮನಳವಲ್ಲದೆ ಪೊಗಟ್ಟು ತೊಡೆಯನೇಱಿಸಿಕೊಂಡು ಬಾಯೊಳ್ ತಂಬುಲಂಗೊಟ್ಟಂ ಪಾಂಚಾಲರಾಜ ತನೂಜೆ ಪಗೆವರ ಕಟ್ಟುವಟ್ಟಿರ್ದೇಳಿದಿಕ್ಕೆಗೆ ಸಂತಸಂಬಟ್ಟು ಸೈರಿಸಲಾಱದಿಂತೆಂದಳ್ –

ಎಮ್ಮಂ ಪಿಡಿದೆೞೆವಂದಿನ

ನಿಮ್ಮದಟುಗಳೀಗಳೆತ್ತ ವೋದುವೊ ಪಿಡಿವ

ಟ್ಟಮ್ಮ ಬಟಿಲ್ದಿರೆ ಕಂಡಿರೆ

ನಿಮ್ಮಳವಂ ನಿಮಗಮೀಗಳೀಯೆಡರಾಯ್ತೇ

ವ॥ ಎಂದು ಸಾಯೆ ಸರಸಂ ನುಡಿದು ಕಟ್ಟಿದ ಕಟ್ಟುಗಳಂ ತಾನೆ ಬಿಟ್ಟುಕಳೆದು ಭಾನುಮತಿಗೆ ನಿನ್ನಾಣ್ಮನುಮಂ ನಿನ್ನ ಮಯ್ದುನನುಮಂ ನೀನೊಪ್ಪುಗೊಳ್ಳೆಂಬುದುಂ ದುರ್ಯೋಧನಂ ದಾಡೆಗಳೆದ ಕುಳಿಕನಂತೆಯುಂ ಕೋಡುಡಿದ ಮದಹಸ್ತಿಯಂತೆಯುಂ ನಖಮುಡಿದ ಸಿಂಹದಂತೆಯುಂ ಗಳಿತಗರ್ವನಾಗಿ ಪಾಂಡವರ ಮೊಗಮಂ ನೋಡಲ್ ನಾಣ್ಚಿ ಮದಗಜಪುರಕ್ಕೆ ಪೋಗಿ ಜೂದಿನೊಳ್ ಗೆಲ್ದ ನೆಲನಂ ನಯಜ್ಞನಾಗಿ ತನ್ನೊಳ್ ಪತ್ತಿಸಿ ದುಶ್ಯಾಸನನಂ ಯುವರಾಜನಂ ಮಾಡಿ ನಿರ್ವ್ಯಾಜಮರಸುಗೆಯ್ಯುತ್ತುಮಿರ್ದನ್.

# 3.2 ಕುಸಿಯುತ್ತಿರುವ ಸಾಂಸ್ಕೃತಿಕ ನೆಲೆಗಳು

**–ರಂಜಾನ್ ದರ್ಗಾ**

ನಾನು ೨೭ ವರ್ಷಗಳ ಹಿಂದೆ ನನ್ನ ಊರು ವಿಜಾಪುರ ಬಿಟ್ಟವನು. ಶಿಕ್ಷಣಕ್ಕಾಗಿ ಹೊಟ್ಟೆಪಾಡಿಗಾಗಿ ಹೀಗೆ ಬಂಧು ಬಳಗದಿಂದ ಮತ್ತು ಹುಟ್ಟಿ ಬೆಳೆದ ವಾತಾವರಣದಿಂದ ದೂರ ಉಳಿಯುವುದು ಬಹುಪಾಲು ಜನರಿಗೆ ಅನಿವಾರ್ಯವಾಗಿದೆ. ಹಾಗೆಯೇ ಹೊಸ ಸಂಬಂಧಗಳು ಸೃಷ್ಟಿಯಾಗುವುದು ಸಹಜವಾಗಿದೆ. ಬುಂದೇಲ ಖಂಡದ ಕಲಾವಿದನೊಬ್ಬ ಬಹಳ ವರ್ಷಗಳ ಹಿಂದೆ ನನಗೆ ಹೇಳಿದ ಮಾತು ಇನ್ನೂ ಹಸಿರಾಗಿದೆ. ಅಲ್ಲಿನ ಜನ ಬರಗಾಲದಲ್ಲಿ ಗುಳೆ ಹೋಗುವಾಗ ಬೆಳೆವ ಭೂಮಿಯಲ್ಲಿ ಧಾನ್ಯ ಚೆಲ್ಲುತ್ತ ಹೋಗುತ್ತಾರೆ. ಮಳೆ ಬಂದಾಗ ಈ ಭೂಮಿ ಬೆಳೆದು, ಇಲ್ಲೇ ಉಳಿದವರ ಹಸಿವು ಇಂಗಿಸಲಿ ಎಂದು ಹೆಣ್ಣುಮಕ್ಕಳು ಗಂಡನ ಮನೆಗೆ ಹೋಗುವಾಗ ಹೀಗೆ ಮಾಡುತ್ತಾರೆ; ತಮ್ಮ ತವರೂರು ಹಸಿರಾಗಿರಲೆಂದು, ಸಂಸ್ಕೃತಿಯು ರೂಪತಾಳುವ ಸಂದರ್ಭಗಳಿವು. ಸಂಸ್ಕೃತಿ ಎಂಬುದು ಜನ ಸಮುದಾಯದ ಮನಸ್ಸುಗಳನ್ನು ಪೋಣಿಸುವಂಥ ದಾರ. ಈ ದಾರದ ಎಳೆಗಳು ಅಂತಃಕರಣದಿಂದ ಸೃಷ್ಟಿಯಾಗಿರುತ್ತವೆ. ಹೀಗೆ ಸಂಸ್ಕೃತಿಯು ಭೂಮಿಯ ಮೇಲೆ ಒಂದಾಗಿ, ಸಹ್ಯವಾಗಿ ಬದುಕಲು ಬೇಕಾದ ವಾತಾವರಣವನ್ನು ಸೃಷ್ಟಿಸುತ್ತದೆ. ಈ ವಾತಾವರಣ ಕಲುಷಿತಗೊಂಡಷ್ಟೂ ಬದುಕು ಅಸಹ್ಯವಾಗುತ್ತ ಹೋಗುತ್ತದೆ. ಮನುಷ್ಯನಿಗಿಂತ ಅವನ ಕೈಯಲ್ಲಿನ ನೀಲಿ ನೋಟು ದೊಡ್ಡದಾಗುತ್ತದೆ. ಲಕ್ಷಾಂತರ ಜನರ ಮಧ್ಯೆ ಮನುಷ್ಯ ಏಕಾಕಿ ಆಗುತ್ತ ಹೋಗುತ್ತಾನೆ.

ಮನುಷ್ಯನ ಸಾಂಸ್ಕೃತಿಕ ನೆಲೆಗಳು ಎಷ್ಟು ಗಟ್ಟಿಯಾಗಿವೆ ಎಂದರೆ ಅವು ಮನುಷ್ಯನನ್ನು ಕುಸಿದು ಬೀಳಲು ಬಿಡುವುದಿಲ್ಲ. ಆದರೆ ಕುಸಿದು ಬೀಳುವುದೇ ಮನುಷ್ಯನ ಗುರಿಯಾದರೆ ಯಾವ ಸಂಸ್ಕೃತಿಯಿಂದಲೂ ಅವನನ್ನು ರಕ್ಷಿಸಲು ಸಾಧ್ಯವಿಲ್ಲ. 'ಗರ್ವಸೇ ಕಹೋ ಹಂ ಹಿಂದೂ ಹೈ' ಅಥವಾ 'ಗರ್ವಸೇ ಕಹೋ ಹಂ ಮುಸ್ಲಿಂ ಹೈ' ಎಂದು ಹೇಳುವವರಿಗೆ ಯಾವ ಸಂಸ್ಕೃತಿಯೂ ರಕ್ಷಿಸಲು ಸಾಧ್ಯವಿಲ್ಲ. ಈ ಸತ್ಯದ ಅರಿವಿನೊಂದಿಗೆ ಮನುಷ್ಯನ ಸಾಂಸ್ಕೃತಿಕ ಸಂಬಂಧಗಳನ್ನು ಅರಿತುಕೊಳ್ಳಬೇಕೆ ಹೊರತು ಅದನ್ನು ಯಾವುದೇ ಧರ್ಮ ಅಥವಾ ಜನಾಂಗದ ಬಾಲಂಗೋಚಿಯಾಗಿ ಮಾಡುವುದರ ಮೂಲಕ ಅಲ್ಲ. ಯಾವುದೇ ಧರ್ಮ ಮತ್ತು ಜನಾಂಗ ತನ್ನ ಸಾಂಸ್ಕೃತಿಕ ಸತ್ವದಿಂದಾಗಿ ದೊಡ್ಡದಾಗಿರುತ್ತದೆ ಹೊರತಾಗಿ ಬೇರಾವುದರಿಂದಲೂ ಅಲ್ಲ. ಬಸವಣ್ಣನವರು ಸಂಸ್ಕೃತಿಯನ್ನು ದಯೆಯ ರೂಪದಲ್ಲಿ ಕಂಡರು. ಗಾಂಧೀಜಿಯವರು ಸಹಬಾಳ್ವೆಯ ರೂಪದಲ್ಲಿ ಕಂಡರು. ಹೀಗೆ ಸೃಷ್ಟಿಯಾದ ಸಂಸ್ಕೃತಿಯ ಒತ್ತಡಗಳು ಎಷ್ಟು ಬಲವಾಗಿರುತ್ತವೆ ಎಂದರೆ ಅವು ಮನುಷ್ಯ ಅಧಃಪತನ ಹೊಂದುವುದನ್ನು ತಡೆಯುತ್ತವೆ.

೧೯೯೩ರ ಏಪ್ರಿಲ್ ೧ರಂದು ಭಟ್ಕಳದಲ್ಲಿ ಪ್ರಾರಂಭವಾದ ಕೋಮು ಗಲಭೆ ಒಂದಿಲ್ಲೊಂದು ರೀತಿಯಲ್ಲಿ ವರ್ಷದುದ್ದಕ್ಕೂ ಮುಂದುವರೆಯಿತು. ಅಂದು ಶ್ರೀರಾಮನವಮಿ ಆ ನಿಮಿತ್ತ ಭಟ್ಕಳದ ಪ್ರಸಿದ್ಧ ಹನುಮಂತ ದೇವರ ರಥಯಾತ್ರೆ. ಅಂದು ಸಂಜೆ ರಥಯಾತ್ರೆ ಮುಗಿದು ಇನ್ನೇನು ಮಂದಿರ ತಲುಪುವ ಸಂದರ್ಭದಲ್ಲಿ ರಥದ ಮೇಲೆ ಮೂರು ಕಲ್ಲುಗಳು ಬಿದ್ದವು ಎಂಬ ವದಂತಿ ಎಲ್ಲೆಡೆ ಹರಡಿತು. ಅಂದೇ ರಾತ್ರಿ ಮುಸ್ಲಿಂರ ಮೇಲೆ ಹಲ್ಲೆಗಳು ಪ್ರಾರಂಭವಾದವು. ಪ್ರತಿ ಹಲ್ಲೆಗಳು ನಡೆದವು. ಇಡೀ ಭಟ್ಕಳ ಪಟ್ಟಣ ಮತ್ತು ಸುತ್ತಮುತ್ತಲಿನ ಗ್ರಾಮಗಳು ದುಷ್ಕರ್ಮಿಗಳ ಆಡುಂಬೊಲಗಳಾದವು. ಭಟ್ಕಳ ಪಕ್ಕದಲ್ಲಿರುವ ನಸ್ತಾರ ಗ್ರಾಮದ ಒಂದು ಘಟನೆ ಹೀಗಿದೆ.

ಸಮುದ್ರ ತೀರದ ಸುಂದರ ಗ್ರಾಮ ನಸ್ತಾರದಲ್ಲಿ ಮುಖ್ಯವಾಗಿ ಮೀನುಗಾರರು ವಾಸಿಸುತ್ತಿದ್ದಾರೆ. ಅವುಗಳಲ್ಲಿ ಕೆಲವು ಶ್ರೀಮಂತ ಮುಸ್ಲಿಂ ಕುಟುಂಬಗಳೂ ಇವೆ. ಗಲಭೆಯ ಸಂದರ್ಭದಲ್ಲಿ ಮಧ್ಯರಾತ್ರಿಯ ವೇಳೆ ಇಂಥ ಒಂದು ಮುಸ್ಲಿಂ ಮನೆಗೆ ಬೆಂಕಿಹಚ್ಚಲು ಅದೇ ಗ್ರಾಮದ ಮೀನುಗಾರ ಯುವಕರ ಗುಂಪೊಂದು ಬಂದಿದೆ. ಮನೆಯಲ್ಲಿ ಮನೆಯೊಡೆಯನ ತಾಯಿ, ಹೆಂಡತಿ ಮತ್ತು ಮಗಳು ಇದ್ದಾರೆ. ದುಡಿಯುವುದಕ್ಕಾಗಿ ಮನೆಯೊಡೆಯ ಕೊಲ್ಲಿ ರಾಷ್ಟ್ರವೊಂದಕ್ಕೆ ಹೋಗಿದ್ದಾನೆ. ಪುಂಡರು ಮನೆಯ ಮುಂದಿನ ಭಾಗಕ್ಕೆ ಬೆಂಕಿ ಹಚ್ಚುವಾಗ ಎಚ್ಚರಗೊಂಡ ಮನೆಯೊಡತಿ ಅಷ್ಟೆಲ್ಲ ಗದ್ದಲದ ಮಧ್ಯೆ ಬಕೆಟ್ ನಿಂದ ಬೆಂಕಿಯ ಮೇಲೆ ನೀರು ಸುರಿಯತೊಡಗಿದಳು. ಆ ಬೆಂಕಿಯ ಬೆಳಕಿನಲ್ಲಿ ಕಾಣುತ್ತಿದ್ದವರೆಲ್ಲರೂ ಅವಳಿಗೆ ಪರಿಚಿತರೇ ಅದೇ ಗ್ರಾಮದವರು. ಆದರೆ ಆ ಬೆಳಕಿನಲ್ಲಿ ಒಬ್ಬ ಯುವಕನ ಮುಖ ಕಂಡು ಅವಳು ಸುಸ್ತಾದಳು. ಬೆಂಕಿ ನಂದಿಸುವ ಉತ್ಸಾಹ ಕುಗ್ಗತೊಡಗಿತು. ಏಕೆಂದರೆ ಆತ ಅವಳ ಮಗನಾಗಿದ್ದ! ಮಗನೆಂದರೆ ಮಗನ ಹಾಗೇ ಮಗುವಾಗಿನಿಂದಲೂ ಮನೆಯಲ್ಲೇ ಬೆಳೆದ ಹುಡುಗ. ಅವಳ ತೊಡೆಯ ಮೇಲೆ, ಅವಳ ಅಪ್ಪುಗೆಯಲ್ಲೇ ಅವಳ ಮುದ್ದಾಟದಲ್ಲೇ ಬೆಳೆದ ಪಕ್ಕದ ಮನೆಯ ಮೀನುಗಾರರ ಹುಡುಗ!. ಅವಳು ಸುಸ್ತಾಗಿ ಬೆಂಕಿಯ ಮೇಲೆ ನೀರು ಸುರಿಸುತ್ತಲೇ ಇದ್ದಳು. ರೋಷಾವೇಷದ ಗುಂಪಿನಲ್ಲಿ ಕೂಗಾಟ ನಡದೇ ಇತ್ತು. ಆಕೆ ಬೆಂಕಿಯ ಮೇಲೆ ನೀರು ಸುರಿಯುವಾಗ ಗುಂಪಿನಿಂದ ಒಬ್ಬಾತ ಬಂದು ಅವಳ ಕೈ ಹಿಡಿದಾಗ ಗುಂಪಿನೊಳಗಿದ್ದ ಅವಳ ಮಗ ಆವೇಶದಿಂದ ಆ ಕೈಹಿಡಿದವನ ಕೊರಳಪಟ್ಟಿ ಹಿಡಿದು ಎರಡು ಬಿಗಿದ. ಆಗ ಕೈಹಿಡಿದವ ದಂಗಾದ. ಕೈಬಿಟ್ಟು ನಿಂತ. ಇಡೀ ಗುಂಪು ಸ್ತಬ್ಧವಾಯಿತು. ನಂತರ ಅವರೆಲ್ಲಾ ಅಲ್ಲಿಂದ ತೆರಳಿದರು. ಘಟನೆ ನಡೆದ ಕೆಲದಿನಗಳ ನಂತರ ನಸ್ತಾರ ಗ್ರಾಮಕ್ಕೆ ಭೇಟಿ ನೀಡಿದ ಪತ್ರಕರ್ತರು ಆ ಮಹಿಳೆಯನ್ನು ವಿಚಾರಿಸಿದಾಗ ತಿಳಿದುಬಂದ ಸತ್ಯವಿದು. ನಾವೆಲ್ಲ ಕೇಳಿದೆವು. "ಆ ಗುಂಪಿನಲ್ಲಿದ್ದವರನ್ನು ಗುರುತಿಸಬಲ್ಲಿರಾ"? ಎಂದು. ಆಕೆ ಹೇಳಿದಳು. "ಆ ಹುಹಡುಗರೆಲ್ಲಾ ಇಲ್ಲೇ ಓಡಾಡುವವರು, ನಮ್ಮ ಹಿತ್ತಲಿನ ಬಾವಿಯಿಂದ ಸಿಹಿ ನೀರನ್ನು ಒಯ್ಯುವವರು" ಎಂದು. ಆದರೂ ಆ ಮಹಿಳೆ ಯಾರ ಮೇಲೂ ಪೋಲಿಸರಿಗೆ ದೂರು ಕೊಡಲಿಲ್ಲ. ಇದೆಲ್ಲಾ ದಿನಾ ಆಗುವಂಥದ್ದಲ್ಲ; ಕೂಡಿ ಬದುಕುವುದೇ ದೈನಂದಿನ ಸತ್ಯ ಎಂಬ ನಿರ್ಧಾರ ಆ ಮಹಿಳೆಯದಾಗಿತ್ತು.

ಕೂಡಿ ಬದುಕುವ ದೈನಂದಿನ ಸತ್ಯದ ಸತ್ವದಿಂದಲೇ ಸಂಸ್ಕೃತಿಯ ಸೃಷ್ಟಿಯಾಗುತ್ತದೆ. ನಾನು ಚಿಕ್ಕವನಿದ್ದಾಗ ಹೆಣ್ಣುಮಕ್ಕಳ ಮಧ್ಯೆ ಒಂದು ನಡವಳಿಕೆಯಿತ್ತು. ನನ್ನ ಗಲ್ಲಿಯ ಹೆಣ್ಣು ಮಕ್ಕಳ ಬಗ್ಗೆ ಹೇಳಬೇಕೆಂದರೆ ಅವರೆಲ್ಲಾ ಸಾಮಾನ್ಯವಾಗಿ ಬಡಕುಟುಂಬದವರೇ. ಅವರಿಗೆಲ್ಲಾ ವರ್ಷಕ್ಕೆ ಒಂದು ಜೊತೆ ಇಳಕಲ್ ಸೀರೆ ಖರೀದಿಸುವುದೇ ಸಂಭ್ರಮ. ಒಂದು ಜೊತೆ ಸೀರೆ ಕೊಳ್ಳುವುದಕ್ಕಾಗಿ ಅವರು ಅನೇಕ ತಿಂಗಳುಗಳವರೆಗೆ ಲೆಕ್ಕಹಾಕಬೇಕಾಗಿತ್ತು. ಹಣ ಕೂಡಿಸಬೇಕಿತ್ತು. ನನ್ನ ತಾಯಿಯೂ ಅಷ್ಟೇ ದಿಂಡಿ ಹಾಕಲೂ ಸಾಧ್ಯವಿಲ್ಲದಷ್ಟು ಸೀರೆಗಳು ಹರಿದಾಗ ಹೊಸ ಸೀರೆ ಖರೀದಿಸಲು ಬಯಸುತ್ತಿದ್ದಳು. ಅಂತೂ ನನ್ನ ತಂದೆ ಹಣ ಕೂಡಿಸಿ ಕೊಡುತ್ತಿದ್ದರು. ಹೊಸ ಸೀರೆ ತಂದಮೇಲೆ ನನ್ನ ತಾಯಿಗೆ ಆ ಸೀರಿಗಳನ್ನು ಉಡಲು ಕನಿಷ್ಟ ಒಂದು ತಿಂಗಳಾದರೂ ಬೇಕಾಗುತ್ತಿತ್ತು. ತಾನು ಉಡುವ ಮೊದಲು ತನಗೆ ಬೇಕಾದ ಹೆಣ್ಣುಮಕ್ಕಳೆಲ್ಲಾ ಉಡಬೇಕೆಂಬುದೇ ಅವಳ ಆಶಯವಾಗಿತ್ತು. ಆ ಎರಡು ಸೀರೆಗಳನ್ನು ಪ್ರತಿದಿನ ಇಬ್ಬರು ಹೆಣ್ಣುಮಕ್ಕಳು ಉಡುತ್ತಿದ್ದರು. ಮರುದಿನ ಒಗೆದು ಒಣಗಿಸಿ ಕೊಡುತ್ತಿದ್ದರು. ಮತ್ತೆ ಅವು ಇನ್ನಿಬ್ಬರು ಹೆಣ್ಣುಮಕ್ಕಳ ಕಡೆಗೆ ಹೋಗುತ್ತಿದ್ದವು. ಹೀಗೆ ಸವಾರಿ ಮುಗಿದ ಮೇಲೆ ಮನೆಗೆ ಬರುತ್ತಿದ್ದವು. ಬೇಕಾದವರೆಲ್ಲ ಉಟ್ಟು ಸಂತೋಷಪಟ್ಟ ಮೇಲೆ ನನ್ನ ತಾಯಿ ಆ ಸೀರೆಗಳನ್ನು ಉಡುತ್ತಿದ್ದಳು. ಹೀಗೆ ಬೇರೆಯವರಿಗೆ ಉಡಿಸಿ ಉಣಿಸಿ ಸಂತೋಷಪಡುವ ಸಂಸ್ಕೃತಿ ನಮ್ಮದು–ಜನಸಾಮಾನ್ಯರದು.

ನಮ್ಮ ಜನ ಊಟದ ಸಮಯದಲ್ಲಿ ಭೇಟಿಯಾದಾಗ ಪರಸ್ಪರ ಊಟದ ಬಗ್ಗೆ ವಿಚಾರಿಸುತ್ತಾರೆ. ಒಬ್ಬರು "ಊಟ ಆಯಿತಾ" ಎಂದು ಕೇಳಿದರೆ ಇನ್ನೊಬ್ಬರು "ಆಯ್ತು ನಿಮ್ಮದು ಆಯ್ತಾ" ಎನ್ನುತ್ತಾರೆ. ಸಮಾಜದಲ್ಲಿ ಯಾರೂ ಉಪಾಸವಿರಬಾರದು ಎಂಬುದು ನಮ್ಮ ಸಂಸ್ಕೃತಿಯ ಮುಖ್ಯ ಲಕ್ಷಣಗಳಲ್ಲೊಂದಾಗಿದೆ. ಕೆಲವೇ ದಶಕಗಳ ಹಿಂದೆ ಮನುಷ್ಯ ಎಷ್ಟೊಂದು ಸಾಮಾಜಿಕನಾಗಿದ್ದ. ಈಗ ನೋಡಿ ಹೇಗಾಗಿದ್ದಾನೆ! ಆತ ಸಾಮಾಜಿಕವಾಗಿ ಮರಣ ಶಯ್ಯೆಯಲ್ಲಿದ್ದಾನೆ. ಅಲಿಯಾಬಾದ ಗ್ರಾಮದ ತಳವಾರ ರಾಮಪ್ಪ ನೆನಪಾಗುತ್ತಾನೆ. ನಾನು ಬಾಲ್ಯದಲ್ಲಿ ನನ್ನ ತಾಯಿಯ ತವರೂರಾದ ಆ ಹಳ್ಳಿಯಲ್ಲಿ ನನ್ನ ಅಜ್ಜಿಯ ಜೊತೆ ಇದ್ದವನು. ಅವಳು ಕೂಲಿ ಕೆಲಸಕ್ಕೆ ಹೋಗುವಾಗ ಅವಳ ಜೊತೆ ಹೋಗುತ್ತಿದ್ದೆ. ಒಂದು ಸಲ ಸೇಂಗಾ ಸುಗ್ಗಿಯಲ್ಲಿ ಸೇಂಗಾ ಆರಿಸುವ ಕೂಲಿ ಕೆಲಸಕ್ಕೆ ಹೋದೆವು.. ಎಲ್ಲ ಕೂಲಿ ಹೆಣ್ಣುಮಕ್ಕಳು ಸಾಲಾಗಿ ಸೇಂಗಾ ಆರಿಸುತ್ತಿದ್ದರು. ಅಜ್ಜಿ ಸೇಂಗಾದ ಗಿಡಗಳನ್ನು ಕೀಳುತ್ತ ಅವುಗಳ ಬೇರಿಗೆ ಅಂಟಿಕೊಂಡಿರುವ ಸೇಂಗಾ ಬಿಡಿಸುತ್ತಾ ಒಂದು ಡಬ್ಬದಲ್ಲಿ ತುಂಬಿಕೊಳ್ಳುವುದು. ಅದು ತುಂಬಿದ ಮೇಲೆ ಒಂದು ಕಡೆ ಹಾಕುವುದು....ಹೀಗೆ ಏಳು ಬಾರಿ ಒಂದು ಕಡೆ ಹಾಕಿದ ಮೇಲೆ ಎಂಟನೆಯದನ್ನು ಪಕ್ಕದ ಜಾಗದಲ್ಲಿ ಹಾಕುವುದು.

ಸಂಜೆಯಾಗುವುದರೊಳಗೆ ಈ ರೀತಿ ಪ್ರತಿಯೊಬ್ಬರೂ ಎರಡು ಶೇಂಗಾ ರಾಶಿಯನ್ನು ಹಾಕುತ್ತಿದ್ದರು. ದೊಟ್ಟ ಪಾಲು ಹೊಲದೊಡೆಯನಿಗೆ ಹೋದರೆ ಸಣ್ಣಪಾಲನ್ನು ಕೂಲಿಕಾರರು ತೆಗೆದುಕೊಳ್ಳುತ್ತಿದ್ದರು. ನಾನು ನನ್ನ

ಅಜ್ಜಿಯ ಜೊತೆ ಚಿಕ್ಕ ಡಬ್ಬದಲ್ಲಿ ಸೇಂಗಾ ಸಂಗ್ರಹಿಸಿ ದೊಡ್ಡ ಮತ್ತು ಸಣ್ಣ ಗುಂಪನ್ನು ಮಾಡುತ್ತಿದ್ದೆ. ನನ್ನ ದೊಡ್ಡ ಗುಂಪೇ ಸಣ್ಣದಾಗಿರುವುದರಿಂದ ನನ್ನ ಪಾಲಿನ ಗುಂಪು ಅತಿ ಸಣ್ಣದಾಗಿರುತ್ತಿತ್ತು. ನನ್ನ ಅಜ್ಜಿಯ ಪಕ್ಕದಲ್ಲಿದ್ದ ಹೆಣ್ಣುಮಗಳು ಪ್ರಾಮಾಣಿಕವಾಗಿ ರಾಶಿ ಹಾಕುತ್ತಿರಲಿಲ್ಲ. ನಾಲ್ಕೈದು ಡಬ್ಬ ಸೇಂಗಾ ಹೊಲದೊಡೆಯನ ರಾಶಿಗೆ ಸುರಿದ ಕೂಡಲೆ ನಂತರ ಸಂಗ್ರಹಿಸಿದ್ದನ್ನು ತನ್ನ ರಾಶಿಗೆ ಹಾಕಿಕೊಳ್ಳುತ್ತಿದ್ದಳು. ನನ್ನ ಅಜ್ಜಿಗೆ ಇವೆಲ್ಲಾ ಹಿಡಿಸಲಿಲ್ಲ. ಆಕೆ ಸಮೀಪದ ಮರದ ನೆರಳಿನಲ್ಲಿ ಕುಳಿತು ಚುಟ್ಟಾ ಸೇದುತ್ತಿದ್ದ ಹೊಲದೊಡೆಯ ತಳವಾರ ರಾಮಣ್ಣನಿಗೆ ಹೇಳಲು ಹೊರಟಳು. ನಾನೂ ಹಿಂಬಾಲಿಸಿದೆ. ಈ ಅನ್ಯಾಯವನ್ನು ಕೇಳಿಯೂ ತಳವಾರ ರಾಮಪ್ಪ ಶಾಂತಚಿತ್ತನಾಗಿ ನನ್ನ ಅಜ್ಜಿಗೆ ಹೇಳಿದ ''ಅವಳು ಹಾಗೆ ಮಾಡುತ್ತಿರುವುದನ್ನು ನಾನಿಲ್ಲಿ ಗಮನಿಸುತ್ತಲೇ ಇದ್ದೇನೆ. ಅವಳ ಗಂಡ ಸತ್ತಿದ್ದಾನೆ. ಬಹಳ ಕಷ್ಟಪಟ್ಟು ನಾಲ್ಕು ಮಕ್ಕಳನ್ನು ಸಾಕುತ್ತಿದ್ದಾಳೆ. ಅವಳ ಮನಸ್ಸು ನೋಯಿಸುವುದು ಬೇಡ. ಅವಳು ತನಗೆ ತಿಳಿದಂತೆ ಮಾಡಲಿ. ನೀನು ತಿಳಿದು ತಿಳಿಯದಂತಿರು'' ಎಂದ. ನನ್ನ ಅಜ್ಜಿ ಮೌನವಾಗಿ ಹಿಂದಿರುಗಿದಳು.

ತಳವಾರ ರಾಮು ಮನುಷ್ಯನ ಸಂವೇದನಾಶೀಲತೆಯ ಪ್ರತೀಕವಾಗಿದ್ದಾನೆ. ಬೇರೆ ಜೀವಿಗಳ ಬಗ್ಗೆ ಕಾಳಜಿಯಿದ್ದಾಗ ಮಾತ್ರ ಸಂವೇದನಾಶೀಲತೆಯ ಸೆಲೆ ಉಕ್ಕುವುದು. ಕಳೆದ ದಶಕಗಳಿಂದ ಆಗುತ್ತಿರುವ ವಿಕೃತ ಸಾಮಾಜಿಕ ಬದಲಾವಣೆ ಮನುಷ್ಯನ ಕೋಮಲ ಭಾವನೆಗಳನ್ನು ಹೊಸಕಿ ಹಾಕುತ್ತಿದೆ. ಸರಂಜಾಮಿ ಯುಗದಲ್ಲಿ ಕ್ರೌರ್ಯವು ಪ್ರಬಲವಾಗಿದ್ದರೂ ಸ್ವಾಭಿಮಾನವು ಸ್ಥಾಯಿಯಾಗಿತ್ತು. ಆ ಸ್ವಾಭಿಮಾನ ಸಾಮಾಜಿಕ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಹಾಯಕವಾಗುತ್ತಿತ್ತು. ಶೂರನಾದವನ ಮೇಲೆ ತನ್ನ ಸಮಾಜವನ್ನು ರಕ್ಷಿಸುವ ಜವಾಬ್ದಾರಿ ಇರುತ್ತಿತ್ತು. ಶ್ರೀಮಂತನ ಮೇಲೆ ಸಮಾಜ ಸೇವೆಯ ನೈತಿಕ ಜವಾಬ್ದಾರಿ ಇರುತ್ತಿತ್ತು. ಕಾಯಕ ನಿಷ್ಠೆಯ ಮತ್ತು ಪ್ರಾಮಾಣಿಕ ಬಡವರಿಗೆ ಸಮಾಜದಲ್ಲಿ ಮರ್ಯಾದೆ ಇತ್ತು. ಒಬ್ಬರು ಇನ್ನೊಬ್ಬರಿಗೆ ಸಹಕಾರಿಯಾಗುವುದು ನೈತಿಕ ಜವಾಬ್ದಾರಿ ಎಂಬಂತೆ ಸಹಜವಾಗಿತ್ತು. ಮನುಷ್ಯನ ಕೈಯಲ್ಲಿ ಹಣದ ಚಲಾವಣೆ ಜಾಸ್ತಿಯಾದಷ್ಟು ಆತ ಸಾಮಾಜಿವಾಗಿ ಅತಂತ್ರನಾಗುತ್ತಿದ್ದಾನೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಡವರಿಗೆ ಹೆಚ್ಚಿನ ಅವಕಾಶಗಳು ಲಭ್ಯವಾದವು. ಬಡವರು ಶಿಕ್ಷಣ ಕಲಿತು ಮುಂದೆ ಬರಲು ಸ್ವಲ್ಪ ಮಟ್ಟಿಗಾದರೂ ಸಾಧ್ಯವಾಯಿತು. ಇದೆಲ್ಲಾ ಭಾರತದಲ್ಲಿ ಕೇವಲ ೫೦ ವರ್ಷಗಳಲ್ಲಾದ ಭಾರಿ ಬದಲಾವಣೆ. ಅದಕ್ಕೂ ಮುಂಚೆ ಪ್ರತಿಯೊಬ್ಬ ವ್ಯಕ್ತಿ ತನ್ನ ಜಾತಿ ಮತ್ತು ಪರಂಪರಾಗತ ಕಾಯಕದ ಚೌಕಟ್ಟಿನಲ್ಲೇ ಬದುಕುವ ಪರಿಸ್ಥಿತಿ ಇತ್ತು. ಶೇಕಡ ೯೦ರಷ್ಟು ಭಾರತೀಯರು ಕಳೆದ ೫೦೦೦ ವರ್ಷಗಳಿಂದ ಒಂದೇ ತೆರನಾದ ಬದುಕನ್ನು ಅನುಭವಿಸಿದವರು. ಅದು ಅವರಿಗೆ ಜನ್ಮದತ್ತವಾಗಿ ಬಂದಿತ್ತು. ಕಳೆದ ೫೦ ವರ್ಷಗಳಲ್ಲಿ ಸಾಕಷ್ಟು ಬದಲಾವಣೆ ಕಂಡು ಬಂದಿದೆ. ಆದರೆ ಬದುಕು ನೆಮ್ಮದಿಯನ್ನು ಕಳೆದುಕೊಳ್ಳುತ್ತಿದೆ. ಪ್ರೀತಿ ವಿಶ್ವಾಸ, ಭದ್ರತೆ, ಆರೋಗ್ಯ, ಶಿಕ್ಷಣ, ಗೆಳೆತನ ಮಾನವ ಸಂಬಂಧಗಳು ಕಾಳಜಿಗಳು,

ಅಭಿವೃದ್ಧಿ ಹೀಗೆ ಎಲ್ಲವೂ ಕರೆನ್ಸಿಯ ಮೂಲಕವೇ ನಡೆಯುತ್ತಿವೆ!. ಈ ಕ್ಷಣದಲ್ಲಿ ಬಡವರ ಸ್ವಾಭಿಮಾನದ ಪ್ರತೀಕವಾಗಿ ನನಗೆ ಗೌರವ್ವ ಅಜ್ಜಿ ನೆನಪಾಗುತ್ತಿದ್ದಾಳೆ. ಆ ಅಜ್ಜಿ ನನ್ನ ಅಜ್ಜಿ ಮತ್ತು ಇತರೆ ಹೆಣ್ಣು ಮಕ್ಕಳು ಬೇರೆಯವರ ತೋಟವೊಂದರಲ್ಲಿ ಕಸ ತೆಗೆಯಲು ಹೋಗುತ್ತಿದ್ದರು. ನಾನು ಅಜ್ಜಿಯ ಕೂಡ ಹೋಗುತ್ತಿದ್ದೆ. ಸೂರ್ಯ ಮೂಡುವ ವೇಳೆ ಬುತ್ತಿಯನ್ನು ತಲೆಯ ಮೇಲಿಟ್ಟು , ಅದರ ಮೇಲೆ ಕಸ(ಕಳೆ) ತೆಗೆಯಲು ಬಳಸುವ ಕುರ್ಪಿಯನ್ನಿಟ್ಟುಕೊಂಡು ತೋಟದ ಕಡೆಗೆ ಧಾವಿಸುವ ದೃಶ್ಯ ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಹೀಗೆ ತೋಟಕ್ಕೆ ಕಳೆ ತೆಗೆಯಲು ಹೋದ ಹೆಂಗಸರು ಸಂಜೆ ಕೆಲಸ ಮುಗಿಸಿ ಮರಳುವ ವೇಳೆ ಆ ತೋಟದಲ್ಲಿನ ಕಾಯಿಪಲ್ಲೆಗಳನ್ನು ಸ್ವಲ್ಪ ಪ್ರಮಾಣದಲ್ಲಿ ತೆಗೆದುಕೊಂಡು ಹೋಗಬಹುದಿತ್ತು. ಅದೊಂದು ವಾಡಿಕೆಯಾಗಿತ್ತು. ತೋಟದ ಮಾಲೀಕ ಅದನ್ನು ಸಹಿಸಿಕೊಂಡು ಇರುತ್ತಿದ್ದ. ಹೆಂಗಸರು ತಮಗೆ ಬೇಕೆನಿಸಿದ್ದ ಕಾಯಿಪಲ್ಲೆ ತೆಗೆದುಕೊಳ್ಳುತ್ತಿದ್ದರು. ಹಾಗೆ ತೆಗೆದುಕೊಳ್ಳುವಾಗ ಸ್ವಲ್ಪ ಹೆಚ್ಚಿಗೆ ತೆಗೆದುಕೊಂಡರೆ ಮಾಲೀಕ ಏನಂದಾನು ಎಂಬ ಪ್ರಜ್ಞೆ ಕಾಡುತ್ತಿತ್ತು. ಆದರೆ ಗೌರವ್ವ ಅಜ್ಜಿ, ಈ ಅಳುಕಿನಿಂದ ಮುಕ್ತವಾಗಿದ್ದಳು. ಏಕೆಂದರೆ ಅವಳು ಯಾವುದೇ ತೆರನಾದ ಕಾಯಿಪಲ್ಲೆಯನ್ನು ಮುಟ್ಟುತ್ತಿರಲಿಲ್ಲ ಕೂಡ. ಅವಳು ಬಡವರೊಳಗಿನ ಬಡವಿ. ಆದರೆ ಆಕೆಯ ಸ್ವಾಭಿಮಾನಕ್ಕೆ ಎಲ್ಲರೂ ಒಳಗಿನಿಂದಲೇ ನಮಿಸುತ್ತಿದ್ದರು. ಅವಳಿಗೆ ಒಂದು ಮಾತು ಹೇಳುವಾಗಲೂ ಎಚ್ಚರಿಕೆ ವಹಿಸುತ್ತಿದ್ದರು.

ಎಲ್ಲ ಹೆಂಗಳೆಯರು ಕಾಯಿಪಲ್ಲೆ ತೆಗೆದುಕೊಂಡರೆ ಆಕೆ ಗೋಳಿಪಲ್ಲೆ ತೆಗೆದುಕೊಳ್ಳುತ್ತಿದ್ದಳು. ಆ ಗೋಳಿಪಲ್ಲೆ ಏನು ಗೊತ್ತೇ? ಅದು ಕಳೆಯ ಒಂದು ಭಾಗವಾಗಿತ್ತು ! ಆದರೇ ಅದು ನಿಜಕ್ಕೂ ಶಕ್ತಿವರ್ಧಕ ಪಲ್ಲೆ ಆಗಿತ್ತು. ರೈತರು ಅದನ್ನು ಬೇರ್ಪಡಿಸಿ ಹಸುವಿಗೆ ಹಾಕಿದರೆ ಹಸು ಹೆಚ್ಚು ಹಾಲು ಕೊಡುವುದು. ಆ ಪಲ್ಲೆಯನ್ನು ತೆಗೆದುಕೊಳ್ಳಲು ಯಾರ ಅನುಮತಿಯೂ ಬೇಕಿರಲಿಲ್ಲ. ಅಂತೆಯೇ ಗೌರಜ್ಜಿ ಅದನ್ನು ತೆಗೆದುಕೊಳ್ಳುತ್ತಿದ್ದಳು. ಮಧ್ಯಾಹ್ನ ಎಲ್ಲರೂ ಬಾವಿಕಟ್ಟೆಯ ನೀರು ತುಂಬಿದ ಹೌದಿನ ಬಳಿ ಗಿಡದ ನೆರಳಿನಲ್ಲಿ ಬುತ್ತಿ ಬಿಚ್ಚಿದಾಗ ಅವಳು ಹೌದಿನ ಇನ್ನೊಂದು ಬದಿಗೆ ಕುಳಿತು ಬುತ್ತಿ ಬಿಚ್ಚುತ್ತಿದ್ದಳು. ಕಾರಣವಿಷ್ಟೇ ಎಲ್ಲರೂ ಬುತ್ತಿ ಬಿಚ್ಚಿದಾಗ ತಮ್ಮ ಒಣಗಿ(ಕಾಯಿಪಲ್ಲೆಯಿಂದ ಮಾಡಿದ ಪದಾರ್ಥ) ಹಂಚಿಕೊಳ್ಳುತ್ತಿದ್ದರು. ಗೌರಜ್ಜಿಯ ಪಲ್ಲೆ ಬರಿ ಗೋಳಿಪಲ್ಲೆಯಾಗಿದ್ದರಿಂದ ಅದು ಬಾರ್ಟರ್ ಸಿಸ್ಟಮ್ಗೆ ತಕ್ಕುದಲ್ಲವೆಂದು ಅವಳ ಭಾವನೆ. ಉತ್ತಮ ಒಣಗಿಗೆ ಗೋಳಿಪಲ್ಲೆಯಿಂದ ಮಾಡಿದ ಒಣಗಿಯನ್ನು ಕೊಡುವುದೆಂತು? ಇಂಥ ಸನ್ನಿವೇಶದಲ್ಲೀ ಅವಳನ್ನು ಉಳಿದ ಬಡಕೂಲಿ ಹೆಂಗಸರು ಜೊತೆ ಊಟಕ್ಕೆ ಕರೆಯುವ ಧೈರ್ಯ ಮಾಡುತ್ತಿರಲಿಲ್ಲ. ನಂತರ ಎಲ್ಲ ಮಾಮೂಲು. ಅವಳ ಗಾಂಭೀರ್ಯ, ಸ್ವಾಭಿಮಾನ ಹಾಗೂ ಕರ್ತವ್ಯ ನಿಷ್ಠೆ ನನಗೆ ಆದರ್ಶಗಳಾಗಿ, ಮೌಲ್ಯಗಳಾಗಿ ಇಂದಿಗೂ ಕಾಡುತ್ತಿವೆ. ಬಡವರ ಘನತೆಯನ್ನು ಹರಾಜು ಹಾಕುತ್ತಿರುವ ಇಂದಿನ ವ್ಯಾಪಾರಿ ಯುಗದಲ್ಲಿ ಜನಸಂಸ್ಕೃತಿ ಎಂಥ ಒತ್ತಡಗಳಿಗೆ ಸಿಲುಕಿದೆ ಎಂಬುದನ್ನು ಚಿಂತಿಸುವ ಕ್ಷಣಗಳಿವು.

ವಿಜಾಪುರದ ಸಂಕ್ರಮಣ ಸೊಲ್ಲಾಪುರದ ಸಂಕ್ರಮಣದಷ್ಟೇ ಪ್ರಸಿದ್ಧ. ಸಿದ್ಧರಾಮನ ಜಾತ್ರೆ ಇರುವುದು. ನಾನು ಚಿಕ್ಕವನಿದ್ದಾಗ ಈ ಜಾತ್ರೆ ಒಂದು ತಿಂಗಳವರೆಗೆ ನಡೆಯುತ್ತಿತ್ತು. ಗಾಂಧಿ ಚೌಕದಿಂದ ಬಿ.ಎಲ್.ಡಿ.ಇ. ಸಂಸ್ಥೆಯ ಆವರಣದವರೆಗೆ ಸುಮಾರು ಮೂರು ಕಿಲೋಮೀಟರ್ ಉದ್ದಕ್ಕೂ ಇರುವ ರಸ್ತೆಯ ಇಕ್ಕೆಲಗಳಲ್ಲಿ ಜಾತ್ರೆಯ ಅಂಗಡಿಗಳು ತಲೆ ಎತ್ತುತ್ತಿದ್ದವು. ಬೆಂಡು ಬತ್ತಾಸಿನ ಅಂಗಡಿಗಳು, ಸೇಂಗಾ, ಚುರುಮುರಿ ಅಂಗಡಿಗಳು, ಹೋಟೆಲ್ಗಳು, ಫ್ಯಾನ್ಸಿ ಸ್ಟೋರ್ಸ್, ಹೂ, ಹಣ್ಣು , ತೆಂಗಿನಕಾಯಿ, ಅರಿಶಿಣ–ಕುಂಕುಮ ಮತ್ತು ಅಗರಬತ್ತಿ ಅಂಗಡಿಗಳು, ಆಟದ ಸಾಮಾನುಗಳು, ಅಡುಗೆ ಮನೆ ಸಾಮಾನುಗಳು ಮುಂತಾದ ತರಹೆವಾರಿ ಅಂಗಡಿಗಳು, ಕುಸರಳ್ಳಿನ ಅಂಗಡಿಗಳು, ಸಣ್ಣ ಸರ್ಕಸ್ ಮತ್ತು ಇಂದ್ರಜಾಲದ ಟೆಂಟುಗಳು ಒಂದೇ ಎರಡೇ ಜನಜಾತ್ರೆ. ಎಲ್ಲಿ ನೋಡಿದಲ್ಲಿ ಜನ, ಇದರ ಜೊತೆಗೇ ತಿಂಗಳುಗಟ್ಟಲೆ ನಡೆಯುವ ದನಗಳ ಜಾತ್ರೆ, ಕಬ್ಬು ತಿನ್ನುತ್ತಾ ದನಗಳ ಜಾತ್ರೆ ನೋಡುವುದೇ ಒಂದು ಖುಷಿ. ದೊಡ್ಡ ಮೈದಾನದಲ್ಲಿ ನಡೆಯುವ ಈ ದನದ ಜಾತ್ರೆಯಲ್ಲಿ ಸಾವಿರಗಟ್ಟಲೆ ಎತ್ತಿನ ಜೋಡಿಗಳು ಮಾರಾಟಕ್ಕೆ ಲಭ್ಯವಾಗುತ್ತಿದ್ದವು. ಈ ಜೋಡಿಎತ್ತುಗಳು ಮತ್ತು ಹೋರಿಗಳು ಬರಿ ಮಾರಾಟದ ವಸ್ತುಗಳಂತಲ್ಲ. ಕೊಳ್ಳುವವರು, ಮಾಲೀಕ ಅವುಗಳನ್ನು ಹೇಗೆ ನೋಡಿಕೊಂಡಿದ್ದಾನೆ ಎಂಬುದನ್ನು ಗಮನಿಸುತ್ತಿದ್ದರು. ಅವು ಮಾರಾಟ ಮಾಡುವ ರೈತನ ಆತ್ಮ ಗೌರವದ ಪ್ರತೀಕವಾಗಿರುತ್ತಿದ್ದವು. 'ಗಿ' ಆಕಾರದಲ್ಲಿದ್ದು ಸ್ವಲ್ಪ ಮುಂದೆ ಬಾಗಿದ ಕೋಡುಗಳುಳ್ಳವು, ಎತ್ತರ ಮಿಣಿಯವು, ಉದ್ದನೆಯ ಗಂಗೆದೊಗಲಿನವು. ಎಲ್ಲ ಸರಿಯಿದ್ದೂ ಕಸಬರಿಗೆ ಸುಳಿಯವು, ಇರಕಳು, ಸಂಭಾವಿತ ಮತ್ತು ಬುಸುಗುಟ್ಟುವ ಎತ್ತುಗಳು ಹೀಗೇ ನೋಡುತ್ತ ಸಾಗುತ್ತಿದ್ದೆವು. ಮಧ್ಯೆ ಬಣ್ಣದ ಪರದೆಗಳಿಂದ ಮತ್ತು ಬೇಗಡೆ ಹಾಳಿಗಳಿಂದ ಆಲಂಕೃತವಾದ ಮನಮೋಹಕ ತಾತ್ಕಾಲಿಕ ಹೋಟೆಲ್‌ಗಳು, ರುಚಿಕರವಾದ ಮಿರ್ಚಿ ಭಜಿ, ಪುಠಾಣಿ ಚಟ್ನಿ, ಪೂರಿ ಬಾಜಿ, ಬಿಸಿಬಿಸಿ ಕೆ.ಟಿ (ಸ್ಪೆಷಲ್ಚಹಾ) ಚಹಾದ ಅಂಗಡಿಯಲ್ಲಿ ಸಿಗುವ ಎಲ್ಲ ತಿನ್ನುವ ಖಾರ ಪದಾರ್ಥಗಳನ್ನು ಚೂಡಾದಲ್ಲಿ ಹಾಕುವುದರ ಮೂಲಕ ಸಿದ್ಧವಾಗುವ 'ಸಂಗೀತ' ಜೋರಾಗಿ ಇದ್ದರೂ ಕಿವಿಗೆ ಇಂಪಾಗಿ ಕೇಳುವ ಹಿಂದಿ ಸಿನಿಮಾ ಹಾಡುಗಳು 'ತಕದೀರ ಕಾ ಫಸಾನಾ', 'ಏ ಮಾಲಿಕ್ ತೇರೆ ಬಂದೇ ಹಂ', 'ಜಿಸ್ ದೇಶಮೆ ಗಂಗಾ ಬಹತೀ ಹೈ',

ಜಿಂದಗಿ ಕ್ಯಾ ಹೈ ಮನ್ ಕೆ ದರಿಯಾ ಹೈ', ಮೇರೆ ಮನ ಡೋಲೆ', 'ಜೋ ವಾದ ಕಿಯಾ ತೋ ನಿಭಾನಾ ಪಡೇಗಾ', ಪ್ಯಾರ್ ಕಿಯಾ ತೋ ಡರನಾ ಕ್ಯಾ' ಇಂಥ ಕರ್ಣ ಮಧುರ ಹಾಡುಗಳನ್ನು ಎಲ್ಲೆಂದರಲ್ಲಿ ನೂರಾರು ಲೌಡ್ ಸ್ಪೀಕರ್‌ಗಳೂ ಬಿತ್ತರಿಸುತ್ತಿದ್ದವು. ಇಂಥ ತಾತ್ಕಾಲಿಕ ಹೋಟೆಲ್‌ಗಳಲ್ಲಿ ದುಡಿಯುವ ಸಹಸ್ರಾರು ಮಂದಿ ಹುಡುಗರು, ಯುವಕರು ಮತ್ತು ಮಧ್ಯ ವಯಸ್ಕರು ಸೋತು ಸುಣ್ಣವಾಗಿರುತ್ತಿದ್ದರು. ನೆನಪಿನಂಗಳದಲ್ಲಿ ಅವರ ಮುಖಗಳು ಇನ್ನೂ ಕಾಣಿಸುತ್ತಿವೆ. ದುಃಖಗೊಳಿಸುತ್ತಲೇ ಇವೆ.

ಈ ಜಾತ್ರೆಯಲ್ಲಿ ಬಡಿಗೆಗಳನ್ನು ಕೊಳ್ಳುವುದೊಂದು ವಿಶೇಷ. ಹಿಡಿಯಲು ಅನುಕೂಲವಾಗುವಷ್ಟು ದಪ್ಪನೆಯ ಬೆತ್ತದ ಬಡಿಗೆಗಳಿಗೆ ಕೇರಿನ ರಸದಿಂದ ಡಿಸೈನ್ ಮಾಡಿ ಸಿಂಗರಿಸುತ್ತಿದ್ದರು. ಈ ಜಾತ್ರೆಯಲ್ಲಿ ಮನೆಗೆ ಮತ್ತು ಒಕ್ಕಲತನಕ್ಕೆ ಬೇಕಾದ ಎಲ್ಲ ವಸ್ತುಗಳು ಕೂಡ ಸಿಗುತ್ತಿದ್ದವು. ಕೃಷಿ ಉಪಕರಣಗಳು, ನೀರಾವರಿ ಪಂಪ್ಸೆಟ್‌ಗಳು, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ಉತ್ತಮ ತಳಿಯ ಬೀಜಗಳು ಹೀಗೆ ಎಲ್ಲವನ್ನೂ ಉತ್ಪಾದಿಸುವ ಕಂಪನಿಗಳು ವಸ್ತುಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದವು. ಶಫರ್ಡ್ ಹಾಲ್ (ಶಿವಾನುಭಮಂಟಪ)ನಲ್ಲಿ ಕೃಷಿ ಉತ್ಪನ್ನಗಳ ಪ್ರದರ್ಶನ ನಡೆಯುತ್ತಿತ್ತು. ಹಿಂದೆಂದೂ ನೋಡದಂಥ ದಪ್ಪ ದಪ್ಪ ಕುಂಬಳಕಾಯಿ, ಪಪ್ಪಾಯಿ, ಜೋಳದ ತೆನೆ, ಹಳ್ಳಿಗಳ ಮಾಡೆಲ್, ಹೊಸ ನೀರಾವರಿ ವ್ಯವಸ್ಥೆಯ ಮಾದರಿ, ಅರಣ್ಯ ಮತ್ತು ವನ್ಯ ಜೀವಿಗಳ ಪ್ರತಿಸೃಷ್ಟಿ ಮುಂತಾದವು ಮೋಹಕ ಜಗತ್ತನ್ನು ಸೃಷ್ಟಿಸುತ್ತಿದ್ದವು. ಅಪರಾಧಗಳ ಬಗ್ಗೆ ಮಾಹಿತಿ ಒದಗಿಸುವ ಪೋಲೀಸ್ ಮಳಿಗೆಗಳಿರುತ್ತಿದ್ದವು. ಕುಸ್ತಿಗಳು ಪ್ರತಿದಿನ ನಡೆಯುತ್ತಿದ್ದವು. ಕೊನೆಯ ದಿನ ಬೆಳ್ಳಿಬಂಗಾರದ ಕಡಗ ಗೆಲ್ಲುವ ಕುಸ್ತಿಗಳಾದ ಜಂಗಿ ನಿಕಾಲಿ ಕುಸ್ತಿಗಳನ್ನು ನೋಡಲು ಹತ್ತಾರು ಸಹಸ್ರ ಜನ ಮದ್ದು ಸುಡುವ ಕಣಿವೆಯಲ್ಲಿ ಸೇರುತ್ತಿದ್ದರು. ಹೊರ್ತಿ ಒಡ್ಡನಂಥ ಪೈಲ್ವಾನ್ ಅಖಾಡಕ್ಕೆ ಬರುವುದನ್ನು ನೋಡುವುದೇ ಒಂದು ಸಂಭ್ರಮ. ಹಲಗೆ ಬಾರಿಸುತ್ತ ಕೊಂಬು ಊದುತ್ತ ಕೆಂಪು ಬಟ್ಟೆಯನ್ನು ಹಾರಿಸುತ್ತ ಆ ಕಡುಗಪ್ಪು ಸುಂದರಾಂಗನನ್ನು ಕರೆತಂದಾಗ ಜನ ಮುಗಿಲು ಮುಟ್ಟುವ ಹಾಗೆ ಹರ್ಷೋದ್ಗಾರ ತೆಗೆದದ್ದು ಇನ್ನೂ ನೆನಪಿದೆ. ಆತನ ಗತ್ತು ಗಾಂಭೀರ್ಯ, ಸಡ್ಡು ಹೊಡೆದು 'ಸಮೂಹ ಸನ್ನಿ' ಹಿಡಿಸುವ ಚಾಕಚಕ್ಯತೆ ಎಲ್ಲವೂ ನೆನಪಿವೆ. ಇಂಥ ಅನೇಕ ಪೈಲವಾನರು ವಿಜಾಪುರದ ನಗರದೇವತೆ ಸಿದ್ದರಾಮೇಶ್ವರನ ಜಾತ್ರೆಯಲ್ಲಿ ತಮ್ಮ ಅದೃಷ್ಟ ಖುಲಾಯಿಸುವ ಸಂದರ್ಭಕ್ಕೆ ಕಾಯುತ್ತಿದ್ದರು. ಜಾತ್ರೆಯ ಕೊನೆಯ ದಿನ ಮದ್ದು ಸುಡುವ ಕಾರ್ಯಕ್ರಮವಿರುತ್ತಿತ್ತು. ಆ ರಾತ್ರಿ ಲಕ್ಷಾಂತರ ರೂಪಾಯಿ ಮೌಲ್ಯದ ಬಾಣ ಬಿರುಸುಗಳನ್ನು ಸುಡುವರು. ಕತ್ತಲೆಯಲ್ಲಿ ಬಣ್ಣ ಬಣ್ಣಗಳಿಂದ ಕೂಡಿದ ಕನಸಿನ ಲೋಕ ಸೃಷ್ಟಿಯಾಗುವುದನ್ನು ನಾ ನೋಡಿದ್ದು ಅಲ್ಲಿಯೇ.

ಜಾತ್ರೆಯ ಸಂದರ್ಭದಲ್ಲಿ ಹತ್ತಾರು ದಿನಗಳ ಕಾಲ ಸಿದ್ದೇಶ್ವರ ಗುಡಿಯ ಮುಂದೆ ಎಸ್.ಎಸ್. ಹೈಸ್ಕೂಲಿನ ಆಟದ ಮೈದಾನದಲ್ಲಿ ಇತರೆ ಆಯಕಟ್ಟಿನ ಸ್ಥಳಗಳಲ್ಲಿ ಸಣ್ಣಾಟ-ದೊಡ್ಡಾಟ, ಬೈಲಾಟಗಳು ಪ್ರತಿದಿನ ನಡೆಯುತ್ತಿದ್ದವು. ಶ್ರೀ ಕೃಷ್ಣಪಾರಿಜಾತದ ಶ್ರೀಕೃಷ್ಣ ಪಾತ್ರದಾರಿ ಜಮಖಂಡಿ ಅಪ್ಪಾಲಾಲನನ್ನು ನೋಡಲು ಹತ್ತಾರು ಸಹಸ್ರ ಜನ ಮುಗಿಬೀಳುತ್ತಿದ್ದರು. ಅಪ್ಪಲಾಲ ಸಾಹೇಬರು ಶ್ರೀಕೃಷ್ಣನ ಅವತಾರವಿರಬಹುದೇ ಎನ್ನುವಷ್ಟರ ಮಟ್ಟಿಗೆ ಆ ಪಾತ್ರದ ಜೊತೆ ಅವರ ತಾದಾತ್ಮ್ಯ ಇತ್ತು. ಆ ಧ್ವನಿ, ಆ ಗಾಂಭೀರ್ಯ, ಆ ನಟನಾ ಕೌಶಲ ಈಗೆಲ್ಲ ಕನಸಿನ ಮಾತು, ಜಮಖಂಡಿ ಕಡೆಯ ಮದರಖಂಡಿ ಗ್ರಾಮದವರ 'ಹೇಮರೆಡ್ಡಿ ಮಲ್ಲಮ್ಮ' ನಾಟಕ ಎಷ್ಟು ಪ್ರಸಿದ್ಧವಾಗಿತ್ತೆಂದರೆ ಜನ ಅದಕ್ಕೆ 'ಮರದಖಂಡಿ ಮಲ್ಲಮ್ಮ' ಎಂದೇ ಕರೆಯುತ್ತಿದ್ದರು. ಆ ನಾಟಕದಲ್ಲಿ

ಪ್ರತ್ಯಕ್ಷವಾಗುವ ಶಿವನ ಕೊರಳಲ್ಲಿ ಜೀವಂತ ನಾಗರಹಾವು ಇರುತ್ತಿತ್ತು. ಅದು ಅವನ ತಲೆಯ ಮೇಲೆ ಹೆಡೆ ತೆಗೆದು ಆಡುತ್ತಿತ್ತು!

ಹೆಣ್ಣು ಹೆಚ್ಚೋ ಗಂಡು ಹೆಚ್ಚೋ ಎನ್ನುವ ಪರದೇಶಿ ನಾಗೇಶಿ ದಪ್ಪಿನಾಟ ರಾತ್ರಿ ಇಡೀ ನಡೆಯುತ್ತಿತ್ತು. ಹೆಣ್ಣಿನ ಪರವಾಗಿ ಹೆಣ್ಣು ವಾದಿಸುತ್ತಾ ಹಾಡುವ ರೀತಿ, ಆ ಧೈರ್ಯ, ಸ್ಥೈರ್ಯ, ಹಟ ಮತ್ತು ಏಕಾಗ್ರತೆಯಲ್ಲಿ ಸ್ತ್ರೀವಾದವನ್ನು ಕೇಳುವುದೇ ಒಂದು ಸುಖ. ಸಂಕ್ರಮಣದ ನಂದಿಕೋಲುಗಳು, ಅವುಗಳ ಮಧ್ಯೆ ಇನ್ನೂ ಎತ್ತರವಾದ, ಭಾರವಾದ ಮತ್ತು ಸುಂದರವಾದ ನಾಗನಂದಿಕೋಲು, ಅವುಗಳನ್ನು ಹೊತ್ತವರು, ಬೆಂಬಲವಾಗಿ ಸುತ್ತ ಇದ್ದವರು, ಧೋತ್ರ, ರುಮಾಲು, ಮತ್ತು ಬಾರಾಬಂಧಿ ಧರಿಸಿ ಚಳ್ಳಂ ಬಾರಿಸುತ್ತ ತಾಳಕ್ಕೆ ಸರಿಯಾಗಿ ಕುಣಿಯುವರು. ಎಲ್ಲರೂ ನನ್ನೊಳಗೆ ಇದ್ದಾರೆ. ವಿಜಾಪುರ ಬಿಟ್ಟ ನಂತರ ಅನೇಕ ವರ್ಷಗಳವರೆಗೆ ನಾನು ಸಂಕ್ರಮಣದ ವೇಳೆ ವಿಜಾಪುರಕ್ಕೆ ಹೋಗುವ ಪರಿಪಾಠವಿಟ್ಟುಕೊಂಡಿದ್ದೆ. ಆಗ ನನ್ನ ಬಾಲ್ಯ ಸ್ನೇಹಿತರನೇಕರು ಸಿಗುತ್ತಿದ್ದರು. ಸಂಕ್ರಮಣದಲ್ಲಿ ಕುಸರೆಳ್ಳು ಕೊಡುವುದು ಮತ್ತು ಆ ಸಂದರ್ಭದಲ್ಲಿ ಕುಸರೆಳ್ಳಿನ ಚಿಕ್ಕ ಪ್ಯಾಕೆಟ್‌ನಿಂದ ಕೂಡಿದ ಸಂಕ್ರಮಣ ಶುಭಾಶಯ ಪತ್ರಗಳನ್ನು ಪೋಸ್ಟ್ ಮಾಡುವುದು ಸಂತಸದ ವಿಷಯಗಳಾಗಿದ್ದವು. ಶಾಲೆ, ಹೈಸ್ಕೂಲುಗಳಲ್ಲಿದ್ದಾಗ ಯಾವುದೇ ಕೆಟ್ಟ ಗಳಿಗೆಯಲ್ಲಿ ಕೆಲವು ಗೆಳೆಯರ ಜೊತೆ ಟೂ(ಮಾತು) ಬಿಡುತ್ತಿದ್ದೆವು. ಆಮೇಲೆ ಮಾತನಾಡುವ ತೀವ್ರತೆ ಬಹಳಷ್ಟಿದ್ದರೂ ಅಭಿಮಾನದ ಕಾಟದಿಂದಾಗಿ ದಾರಿ ಸುಗಮವಾಗುತ್ತಿರಲಿಲ್ಲ. ಆದರೆ ನಮಗೆ ವರ್ಷದಲ್ಲಿ ಎರಡು ದಿನಗಳು ತುಂಬ ಖುಷಿ ಕೊಡುತ್ತಿದ್ದವು. ಅಂದು ನಮಗಾಗಿ ಸ್ವರ್ಗದ ಸುಖದ ಬಾಗಿಲುಗಳು ತೆರೆದಿರುತ್ತಿದ್ದವು. ಒಂದು ಸಂಕ್ರಮಣದಲ್ಲಿ ಕುಸರೆಳ್ಳು ಹಂಚುವ ದಿನ 'ನಾವು ನೀವೂ ಎಳ್ಳು ಬೆಲ್ಲದ್ಹಾಂಗ ಇರೂನ್ರಿ' ಎನ್ನುತ್ತಾ ಕುಸುರೆಳ್ಳು ಹಂಚುತ್ತಿದ್ದೆವು. ಇನ್ನೊಂದು ದಸರಾದಲ್ಲಿ ಬನ್ನಿ ಮುಡಿಯುವ ದಿನ. ಬನ್ನಿ ಪತ್ರೆಗಳನ್ನು ಒಯ್ದು ನಾವೂ ನೀವು ಬಂಗಾರದ್ಹಾಂಗ ಇರೂನ್ರಿ ಎಂದು ಕೊಡುತ್ತಿದ್ದವು. ಈ ಎರಡೂ ಸಂದರ್ಭದಲ್ಲಿ ಮಾತು ಬಿಟ್ಟ ಗೆಳೆಯರ ಜೊತೆ ಮಾತನಾಡುವ ಕ್ಷಣಗಳು ಸೃಷ್ಟಿಯಾಗುತ್ತಿದ್ದವು. ವರ್ಷಗಟ್ಟಲೆ ಮುಖ ತಿರುಗಿಸಿಕೊಂಡಿರುತ್ತಿದ್ದ ಹಿರಿಯರು ಕೂಡ ಈ ಸಂದರ್ಭದಲ್ಲಿ ಮಾತನಾಡುತ್ತಿದ್ದರು. ಹೀಗೆ ಒಂದು ಜಾತ್ರೆ ಎನ್ನುವುದು ಮನುಷ್ಯನ ಆನಂದ, ಸ್ವಾತಂತ್ರ್ಯ, ಹೊಸದನ್ನು ಕಲಿಯುವುದು, ಕಲೆ ಸಾಹಿತ್ಯಪ್ರಜ್ಞೆ ಬೆಳೆಸುವುದು, ಸಂಬಂಧಗಳನ್ನು ಕುದುರಿಸುವುದು ಹೊಸ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಬಗ್ಗೆ ತಿಳುವಳಿಕೆ ಪಡೆಯುವುದು, ಮಾರುವುದು, ಕೊಳ್ಳುವುದು, ಅನುಭವವನ್ನು ವಿಸ್ತರಿಸಿಕೊಳ್ಳುವುದು ನಡೆಯುತ್ತಿತ್ತು. ಸಹಸ್ರಾರು ಕುಟುಂಬಗಳು ಒಂದು ಜಾತ್ರೆಯಿಂದ ಇನ್ನೊಂದು ಜಾತ್ರೆಗೆ ವಸ್ತುಗಳನ್ನು ಮಾರಾಟಕ್ಕೆ ಒಯ್ಯುತ್ತ ಜೀವಮಾನ ಕಳೆಯುತ್ತಿದ್ದವು. ಆ ನೋವು ಆ ಸುಖ ಎಲ್ಲವೂ ಬದುಕಾಗಿತ್ತು. ಜಾತ್ರೆಯಲ್ಲಿ ತೆಗೆಸಿಕೊಂಡ ಸವಾ(೧.೨೫) ರೂಪಾಯಿ ಫೋಟೋ ಮಾತ್ರ ಜೊತೆಯಲ್ಲಿ ಉಳಿಯುತ್ತಿತ್ತು. ಕಾರು, ಸ್ಕೂಟರ್, ದಿಲೀಪ ಕುಮಾರ್,

ವೈಜಯಂತಿಮಾಲಾ, ಜಾನಿವಾಕರ್ ಮುಂತಾದ ವಸ್ತು ಮತ್ತು ನಾಯಕ–ನಾಯಕಿಯರ ಕಟ್‌ಔಟ್‌ಗಳ ಜೊತೆ ಫೋಟೋ ತೆಗೆದುಕೊಂಡು ಜನ ಮನೆಯಲ್ಲಿ ಹಚ್ಚುತ್ತಿದ್ದರು. ಒಂದು ಗಂಟೆಯಲ್ಲಿ ಈ ಫೋಟೋ ಸಿಗುತ್ತಿತ್ತು ಕಲರ್ ಬೇಕೆಂದರೆ ಬಣ್ಣ ಕುಂಚದೊಂದಿಗೆ 'ಆರ್ಟಿಸ್ಟ್' ರೆಡಿ ಇರುತ್ತಿದ್ದ.

ಜಾತ್ರೆ ಎಂಬುದು ಸಂಪ್ರದಾಯ, ಪರಂಪರೆ, ವ್ಯವಹಾರ ಜ್ಞಾನ, ಕಲಾಜ್ಞಾನಗಳಿಂದ ಕೂಡಿದ ನೆನಪಿನ ಆಗರ. ಜನಸಾಮಾನ್ಯರ ವಿಶ್ವವಿದ್ಯಾಲಯ, ಬದುಕಿನ ಆಸರೆ, ಮಾನವನ ಸಾಂಸ್ಕೃತಿಕ ಸಂಬಂಧಗಳ ಬೆನ್ನೆಲುಬು. ಆದರೆ ಕಳೆದ ಒಂದು ದಶಕದಲ್ಲಿ ಮನುಷ್ಯನ ಈ  ಅನುಭವಕ್ಕೆ, ಪ್ರತಿಭೆಗೆ ಮತ್ತು ನಿಷ್ಠೆಗೆ ಜಾಗತೀಕರಣದ ಮಾರುಕಟ್ಟೆಯಲ್ಲಿ ಕವಡಿ ಕಿಮ್ಮತ್ತೂ ಸಿಗುತ್ತಿಲ್ಲ.

ಇಂಥ ಒಂದು ಸುವ್ಯವಸ್ಥಿತವಾದ ಜಾತ್ರೆಗೆ ಸಹಸ್ರಾರು ಜನ ಬುದ್ಧಿವಂತರ ಅವಶ್ಯಕತೆ ಇರುತ್ತಿತ್ತು. ಅಲ್ಲಿ ಎತ್ತುಗಳಿಗೆ, ಓರಿಗಳಿಗೆ ಬಹುಮಾನ ನೀಡುವಾಗ ಸ್ವಜನ ಪಕ್ಷಪಾತವಿರುತ್ತಿರಲಿಲ್ಲ. ನಾಲ್ಕು ಜನ ಏನಂದಾರು ಎಂಬ ಪ್ರಜ್ಞೆಗಿಂತಲೂ ಹೆಚ್ಚಾಗಿ ಯೋಗ್ಯತೆ ಇರುವುದನ್ನು ಆಯ್ಕೆ ಮಾಡಬೇಕೆಂಬ ಭಾವನೆ ಇರುತ್ತಿತ್ತು. ಜನ ಎಷ್ಟು ಕುಶಾಗ್ರಮತಿಗಳೆಂದರೆ ದನಗಳ ಜಾತ್ರೆಯಲ್ಲಿ ಸುತ್ತಾಡಿದ ನಂತರ ಈ ಜೋಡಿಗೆ ಮೊದಲ ಬಹುಮಾನ. ಈ ಜೋಡಿಗೆ ಎರಡನೇ ಬಹುಮಾನ ಮುಂತಾಗಿ ನಿರ್ಧರಿಸಿಯೇ ಬಿಡುತ್ತಿದ್ದರು. ಹೀಗೆ ಲಕ್ಷಾಂತರ ಜನರ ಜೀವನಾಡಿಯಾಗಿದ್ದ ಸಂಕ್ರಮಣದಲ್ಲಿ ಒಂದು ಸಲ ವಿಜಾಪುರಕ್ಕೆ ಧಾವಿಸುವಾಗ ಏನಾಯಿತೆಂದರೆ, ಅಂದು ರಾತ್ರಿ ೮ ಗಂಟೆಗೆ ಬಸ್ ನಿಲ್ದಾಣದಿಂದ ಟಾಂಗಾದಲ್ಲಿ ಕುಳಿತು ಮನೆಯ ಕಡೆಗೆ ಹೊರಟೆ. ದಾರಿಯಲ್ಲಿ ನಂದಿಕೋಲು ಕಂಡವು. ಜೊತೆಗೆ ಹತ್ತಾರು ಜನ ಇದ್ದರು. ಜನರ ಉತ್ಸಾಹವೇಕೆ ಕುಂದಿದೆ. ಯಾವುದೇ ಹುರುಪು ಕಾಣುತ್ತಿಲ್ಲವಲ್ಲಾ ಎಂದು ಮನಸ್ಸು ಅಳುಕಿತು. ನನ್ನ ಬಾಲ್ಯವನ್ನು ಮರಳಿ ತರುತ್ತಿದ್ದ ಈ ಜಾತ್ರೆಯ ಬಗ್ಗೆ ನಾನು ಎಷ್ಟೊಂದು ಹಚ್ಚಿಕೊಂಡಿದ್ದೇನೆಂದರೆ ನನ್ನ ಕಾಮ್ರೇಡ್‌ಗಳು ನನ್ನ ಈ ಭಾವನಾತ್ಮಕ ಸಂಬಂಧದ ಬಗ್ಗೆ ನಗುವ ಹಾಗಾಗಿತ್ತು.

ನಮ್ಮ ಉತ್ಪಾದನಾ ವ್ಯವಸ್ಥೆ, ಉತ್ಪಾದನಾ ಸಾಧನಗಳು ಉತ್ಪಾದನಾ ಪದ್ಧತಿ ಮತ್ತು ಮಾರುಕಟ್ಟೆ ಪದ್ಧತಿ ಬದಲಾದಂತೆಲ್ಲ ನಮ್ಮ ಸಾಂಸ್ಕೃತಿಕ ನೆಲೆಗಳು ನಮಗರಿಯದಂತೆಯೆ ಸೂಕ್ಷ್ಮವಾಗಿ ಬದಲಾಗುತ್ತ ಹೋಗುತ್ತವೆ. ಒಂದು ಸಾಂಸ್ಕೃತಿಕ ಪರಿಸರದಲ್ಲಿ ಅತಿ ಮುಖ್ಯವಾದವನು ಬದಲಾದ ಪರಿಸ್ಥಿತಿಯಲ್ಲಿ ನಿರುಪಯುಕ್ತವಾಗಿ ಕಾಣುತ್ತಾನೆ. ಸಾಮ್ರಾಜ್ಯಶಾಹಿ ಸಂಸ್ಕೃತಿಯ ಮುಂದೆ ತೃತೀಯ ಜಗತ್ತಿನ ಸಂಸ್ಕೃತಿಗಳು ನೀರಿನಿಂದ ಹೊರಬಿದ್ದ ಮೀನುಗಳ ಹಾಗೆ  ಬಾಯಿ ಬಿಡುತ್ತಿವೆ!

# 3.3 ಅಲಿ ಅನಿಲ್

**– ತ್ರಿವೇಣಿ**

ಕಲ್ಕತ್ತಗೆ ಹೊರಟಿದ್ದ ಆಪ್ತ ಗೆಳೆಯ ಅಲಿಯನ್ನು ಬೀಳ್ಕೊಡಲು ಅನಿಲ ಸ್ಟೇಷನಿಗೆ ಬಂದಿದ್ದ, ರೈಲು ಕರಾಚಿ ಸ್ಟೇಷನನ್ನು ಬಿಟ್ಟು ಹೊರಡಲು ಇನ್ನೂ ಹತ್ತು ನಿಮಿಷಗಳಿದ್ದವು. ಅನಿಲನ ಮುಖ ಪೆಚ್ಚಾಗಿತ್ತು. ಅಲಿ ಅವನನ್ನು ಸಮಾಧಾನಪಡಿಸುತ್ತಾ ಹೇಳಿದ.

"ಭಾಯಿ, ರಜ ಸಿಕ್ಕಲಿಲ್ಲವೆಂದು ಬೇಜಾರು ಮಾಡಿಕೊಳ್ಳಬೇಡ. ಇನ್ನೊಂದು ಬಾರಿ ಇಬ್ಬರೂ ಕೂಡಿಯೇ ನಿಮ್ಮೂರಿಗೆ ಹೋಗೋಣ".

ಮಂಕು ಕವಿದ ಮುಖದಲ್ಲಿ ನಗೆ ತುಂಬುತ್ತಾ ಅನಿಲ್ ಹೇಳಿದ "ಹಾಗೆ ಆಗಲಿ, ನನ್ನ ತಮ್ಮ ಸುನೀಲನನ್ನು ಗುರುತಿಸಬಲ್ಲೆಯಷ್ಟೆ. ಆಲ್ಬಂನಲ್ಲಿ ಅವನ ಫೋಟೋ ತೋರಿಸಿದ್ದೇನೆ. "ಸುನೀಲನಿಗೆ ಕ್ರಿಕೆಟ್ ಬ್ಯಾಟ್ ಕೊಡಲು ಮರೆಯಬೇಡ. ಕ್ರಿಕೆಟ್ ಅಂದರೆ ಅವನಿಗೆ ಹುಚ್ಚು. ದಾದಾಗೆ ದಂತದ ಹಿಡಿಯ ಕೋಲು.... ಎಲ್ಲಿಟ್ಟಿದ್ದೀಯಾ.... ಓ ಸರಿ ಅಲ್ಲಿದೆ.... ರೈಲಿನಲ್ಲೇ ಮರೆತೀಯ".

ಅಲಿ ಅನಿಲನ ಕಳವಳವನ್ನು ನೋಡಿ ನಗುತ್ತಾ,

"ನಾನು ಯಾವುದನ್ನೂ ಮರೆತಿಲ್ಲ ದೋಸ್ತ್. ಬೇಕಾದರೆ ಹೇಳ್ತೀನಿ ಕೇಳು. ನಿನ್ನ ಶೀಲಾಗೆ ಕರಾಚಿ ಸಿಲ್ಕಿನ ಸೀರೆ, ಮುತ್ತಿನ ಉಂಗುರ, ಮಾಗೆ ನಿನ್ನ ಫೋಟೋ, ದಾದಾಗೆ ಕೋಲು... ಇಷ್ಟೇ ತಾನೇ..."

ಅನಿಲನಿಗೆ ಸಮಾಧಾನವಾಯಿತು.

ಗಾರ್ಡಿನ ಸಿಳ್ಳೆ ಕೇಳಿಸಿತು. ಅನಿಲ್ ಗೆಳೆಯನ ಕೈಯನ್ನು ಸ್ವಲ್ಪ ಒತ್ತಿ "ಹೋಗಿ ಬರ್ತೀಯಾ? ನಮ್ಮ ಮನೆಯಲ್ಲಿ ಯಾವುದಕ್ಕೂ ಸಂಕೊಚಪಟ್ಟುಕೊಳ್ಳಬೇಡ. ಸುನೀಲ್ ಸ್ಟೇಷನ್ನಿಗೆ ಬಂದಿರುತ್ತಾನೆ"ಎನ್ನುತ್ತ ಹಿಂದೆ ಸರಿದು ನಿಂತ. ಗಾಡಿ ಹೊರಟಿತು.

ಅಲಿ, ಅನಿಲ್ ಹಿಂದೂ, ಮುಸ್ಲಿಮರಾದರೂ ಅವರ ಗೆಳೆತನ ಪವಿತ್ರವಾಗಿತ್ತು. ಅವರ ಪರಿಚಯವಾದುದು ಒಂದು ವಿಚಿತ್ರ ರುದ್ರ ಸನ್ನಿವೇಶದಲ್ಲಿ, ಆಫೀಸಿನ ಕೆಲಸ ಮುಗಿಸಿಕೊಂಡು ಅನಿಲ ಮನೆಗೆ ಹೊರಟಿದ್ದ, ಅವನು ಆಫೀಸು ಬಿಡುವುದಕ್ಕೆ ಅರ್ಧ ಗಂಟೆ ಮುಂಚೆಯೇ ಅವನು ಹೋಗಬೇಕಾಗಿದ್ದ ದಾರಿಯಲ್ಲಿ ಕೋಮು ಗಲಭೆ ಪ್ರಾರಂಭವಾಗಿತ್ತು. ಅದನ್ನು ತಿಳಿಯದೆ ಹೊರಟಿದ್ದ ಅನಿಲನನ್ನು ನೋಡಿ ಪುಂಡರ ಗುಂಪೊಂದು ಗಲಭೆ

ಮಾಡುತ್ತಾ ಅಟ್ಟಿಸಿಕೊಂಡು ಬಂತು. ಪ್ರಾಣಭಯದಿಂದ ಅನಿಲ ಹತ್ತಿರದಲ್ಲಿ ಸಿಕ್ಕಿದ ಮನೆಯೊಂದಕ್ಕೆ ನುಗ್ಗಿ ತಾನೇ ಬಾಗಿಲು ಹಾಕಿಕೊಂಡ. ಅವನ ದುರಾದೃಷ್ಟಕ್ಕೆ ಅದು ಮುಸ್ಲಿಮರ ಮನೆಯಾಗಿತ್ತು. ಪುಂಡರು ಬಾಗಿಲಿಗೆ ಬಂದು ನಿಂತು ಗಲಾಟೆ ಮಾಡತೊಡಗಿದರು.

ಮುಂಬಾಗಿಲಿನಲ್ಲಾಗುತ್ತಿರುವ ಗಲಭೆ ಕೇಳಿ ಒಳಗಿನಿಂದ ತರುಣನೊಬ್ಬ ಈಚಗೆ ಬಂದು, ಬೆದರಿದ ಹಕ್ಕಿಯಂತೆ ಗೋಡೆಯ ಮೂಲೆಯಲ್ಲಿ ಹುದಿಗಿಕೊಂಡಿದ್ದ ಅನಿಲನನ್ನು ದೃಷ್ಟಿಸಿ ನೋಡಿದ.

"ಯಾರು ನೀವು?"

ಅನಿಲ ಮಾತನಾಡಲಿಲ್ಲ, ಮನೆಯಾತ ಮುಸ್ಲಿಮನಾಗಿರುವುದನ್ನು ನೋಡಿ ತನ್ನ ಬದುಕು ಕೊನೆಗಾಣುತ್ತಿದೆಯೆಂದು ಅವನಿಗೆ ಭಾಸವಾಯಿತು. ಹೆದರಿಕೆಯಿಂದ ಬಾಗಿಲನ್ನು ನೋಡಿ, ದೈನ್ಯದಿಂದ ಪ್ರಶ್ನಿಸಿದವನ ಕಡೆ ಕಣ್ಣು ತಿರುಗಿಸಿದ. ಮನೆಯಾತ ಮಾತನಾಡದೆ ಮುಂಬಾಗಿಲಿಗೆ ಹೋಗಿ ಬಾಗಿಲನ್ನು ತೆಗೆದ. ಒಳಗೆ ನುಗ್ಗಲು ಪ್ರಯತ್ನಿಸುತ್ತಿದ್ದ ಪುಂಡರು ಸ್ವಜಾತೀಯನನ್ನು ನೋಡಿ ತಟಸ್ಥರಾದರು.

"ಯಾರು ಬೇಕಾಗಿತ್ತು?" ಮನೆಯವನು ಕೋಪದಿಂದಲೇ ಪ್ರಶ್ನಿಸಿದ.

"ಕಾಫರನೊಬ್ಬ ಇಲ್ಲಿ ಬಂದು ಸೇರಿದ್ದಾನೆ. ಅವನನ್ನು ಬಿಟ್ಟುಕೊಡಬೇಕು".

"ಅವನು ಕಾಫರನಲ್ಲ. ನನ್ನ ಸಹೋದರ".

ಪುಂಡರು ಕ್ಷಮೆ ಬೇಡಿ ತೆರಳಿದರು. ಅಲಿ ಬಾಗಿಲು ಮುಚ್ಚಿ ಹಿಂತಿರುಗಿ ಬಂದಾಗ ಅನಿಲನ ಕಣ್ಣುಗಳು ತೇವಗೊಂಡಿದ್ದವು.

"ಭಾಯಿ, ಇನ್ನು ಹೆದರಿಕೆಯಿಲ್ಲ. ಕೆಲಸವಿಲ್ಲದ ಜನ ಜಾತಿಯ ಹೆಸರಿನಲ್ಲಿ ದೊಂಬಿ ಎಬ್ಬಿಸಿ ವ್ಯರ್ಥವಾಗಿ ರಕ್ತಪಾತ ಮಾಡುತ್ತಾರೆ".

ಅನಿಲ ಅಲಿಯ ಕೈಗಳನ್ನು ಬಿಗಿಯಾಗಿ ಹಿಡಿದು ಹೇಳಿದ.

"ನೀವು ನಿಜವಾಗಿಯೂ ನನ್ನ ಸೋದರ, ನಿಮ್ಮ ಹೆಸರೇನು?"

"ಷೇಕ್ ಅಲಿ, ತಮ್ಮ ಹೆಸರು?"

"ಅನಿಲ್ ಚಟರ್ಜಿ".

"ಇನ್ನು ಮೇಲೆ ನಾವಿಬ್ಬರೂ ಸ್ನೇಹಿತರಾಗಿರೋಣಾ" ಎನ್ನುತ್ತಾ ಅಲಿ ಕೈ ಮುಂದೆ ಮಾಡಿದ. ಅನಿಲ ಅವನ ಕೈಯನ್ನು ಬಿಗಿಯಾಗಿ ಹಿಡಿದ.

ಅಲಿಯ ಹೃದಯವೈಶಾಲ್ಯತೆಯನ್ನೂ, ಅವನು ಮಾಡಿದ ಉಪಕಾರವನ್ನೂ ವರ್ಣಿಸಿ ಅನಿಲ ತನ್ನ ಮನೆಯವರಿಗೆ ಕಾಗದ ಬರೆದಿದ್ದ. ಅನಿಲನ ಮನೆಯವರು ತನ್ನ ಮಗನ ಪ್ರಾಣ ಉಳಿಸಿದವನನ್ನು ಕೃತಜ್ಞತೆಯಿಂದ ಸ್ಮರಿಸಿ, ಅವನನ್ನು ಕಲ್ಕತ್ತೆಗೆ ಬರಲು ಆಹ್ವಾನಿಸಿದ್ದರು.

ಎರಡು ದಿವಸದ ನಂತರ ಅಲಿ ಕಲ್ಕತ್ತೆಯನ್ನು ತಲುಪಿದ. ಸುತ್ತಲೂ ಕಣ್ಣು ಹೊರಳಿಸಿ ದೂರದಲ್ಲಿ ತನ್ನನ್ನು ಹುಡುಕುವ ಪ್ರಯತ್ನದಲ್ಲಿದ್ದ ಸುನೀಲನನ್ನು ಗುರುತಿಸಿದ. ಅನಿಲನದೇ ಮುಖ, ಅದೇ ಎತ್ತರ. ಅನಿಲನೇ ತನ್ನನ್ನು ಎದುರುಗೊಳ್ಳಲು ಕಲ್ಕತ್ತೆಗೆ ಬಂದಿರುವಂತೆ ಭಾಸವಾಯಿತು. ತಾನೇ ಅವನೆಡೆಗೆ ಹೋಗಿ ಸುನೀಲನ ಭುಜದ ಮೇಲೆ ಕೈಯಿರಿಸಿ 'ಸುನೀಲ್ ಭಾಯಿ' ಎಂದ. ಸುನೀಲ ಹಿಂತಿರುಗಿ ನೋಡಿದ. ಪ್ರಯತ್ನಪೂರ್ವಕವಾದ ನಗೆಯೊಂದು ಅವನ ಮುಖದ ಮೇಲೆ ಹಾದುಹೋಯಿತು.

"ಅನಿಲ ಬರಲಿಲ್ಲವೆಂದು ಬೇಸರವೇ?" ಅಲಿ ಪ್ರಶ್ನಿಸಿದ.

ಸುನೀಲ ಪದಗಳನ್ನು ಹೃದಯದಿಂದ ಹುಡುಕಿ ತೆಗೆಯುವನಂತೆ ಹೇಳಿದ,

"ಹಾಗೇನಿಲ್ಲ…ಮನೆಗೆ ಹೋಗೋಣವೇ?"

ಮನೆ ಸೇರಿದಾಗ ಅನಿಲನ ತಾಯಿ ಬೀನಾಚಟರ್ಜಿ ಮುಂಬಾಗಿಲಿನಲ್ಲಿ ನಿಂತಿದ್ದರು. ಆಕೆ ವಯಸ್ಸಾದ ಹೆಂಗಸು; ಮುಖದಲ್ಲಾಗಲೇ ಒಂದೆರಡು ಸುಕ್ಕುಗಳು ಕಾಣಿಸಿಕೊಂಡಿದ್ದವು.

"ನೀವು ಬಂದದ್ದು ಬಹಳ ಸಂತೋಷ. ಒಳಗೆ ಬನ್ನಿ".

ಆಕೆ ಬಲವಂತದಿಂದ ಆ ಮಾತುಗಳನ್ನು ಹೊರಗೆಡವಿದರೆಂಬುದು ಅಲಿಗೆ ಚೆನ್ನಾಗಿ ವ್ಯಕ್ತವಾಯಿತು. ಸ್ಟೇಷನ್ನಿನಲ್ಲಿ ಸುನೀಲನ ಮುಖಭಾವ ನೋಡಿದಾಗಲೇ ಅಲಿಯ ಉತ್ಸಾಹಕ್ಕೆ ತಣ್ಣೀರೆರಚಿದಂತಾಗಿತ್ತು. ಬೀನಾ ಚಟರ್ಜಿಯ ಸ್ವಾಗತ ತೋರಿಕೆಯ ಸ್ವಾಗತದಂತಿತ್ತು. ಹಾಗಾದರೆ ತನ್ನ ಆಗಮನ ಅವರಿಗೆ ಇಷ್ಟವಿರಲಿಲ್ಲವೇ? ಅಲಿಗೆ ವಿಚಿತ್ರ ಸ್ಥಳಕ್ಕೆ ಕಾಲಿಟ್ಟಂತೆ ಭಾಸವಾಯಿತು. ಕುರುಡ ಹೊಸ ಸ್ಥಳಕ್ಕೆ ಬಂದಂತಾಗಿತ್ತು ಅವನ ಸ್ಥಿತಿ, ತಾನಿಲ್ಲಿಗೆ ಬರಬಾರದಿತ್ತು ಎನ್ನಿಸಿತು ಅಲಿಗೆ. ತಾನು ಪ್ರವೇಶಿಸಿದೊಡನೆ ಮನೆಯವರೆಲ್ಲ ಮುಖವಾಡಗಳನ್ನು ಧರಿಸಿ ಒಂದು ನಾಟಕವಾಡಲು ಸಿದ್ಧರಾಗಿರುವಂತೆ ತೋರಿತು. 'ಹಿಂದೂಗಳು ಒಳ್ಳೆಯ ನಟರಲ್ಲ' ಎಂದು ಅಲಿ ವಿಮರ್ಶಿಸಿದ.

ಬೀನಾಚಟರ್ಜಿ ಕುರ್ಚಿಯ ಮೇಲೆ ಕುLಈತದ್ದ ಗಂಡನ ಕಡೆ ತಿರುಗಿದ ಕೂಡಲೇ ಶೂನ್ಯದೃಷ್ಟಿಯಿಂದ ಎತ್ತಲೋ ನೋಡುತ್ತಿದ್ದ ದಾದಾ ನಾಟಕದಲ್ಲಿ ತನ್ನ ಮಾತುಗಳನ್ನು ಮರೆತು ಹಿಂದಿನಿಂದ ಹೇಳಿಸಿಕೊಳ್ಳುವವನಂತೆ, "ಬನ್ನಿ, ಬಹಳ ಸಂತೋಷ" ಎಂದರು. ಅವ್ಯಕ್ತ ಶಕ್ತಿಯೊಂದು ದಾದನ ಕೈಗಳನ್ನು ಮುಂದಕ್ಕೆ ತಳ್ಳಿತು. ಮುದುಕನ ಕೈಗಳನ್ನು ಅಲಿ ಹಿಡಿದು ಕುಲುಕಿದ. ತನ್ನ ಪಾತ್ರ ನಿರ್ವಹಣೆ ಮುಗಿದ ಕೂಡಲೇ ಪಾತ್ರಧಾರಿ ವೇಷ ಕಳಚುವಂತೆ, ದಾದ ಅಷ್ಟು ಮಾತನಾಡಿದವರೇ ಪುನಃ ಶೂನ್ಯರಾಗಿ ನೋಡತೊಡಗಿದರು.

'ದಾದಾಗೆ ನನ್ನ ಕಂಡರೆ ಅಷ್ಟೇನೂ ವಿಶ್ವಾಸವಿಲ್ಲ' ಅಲಿ ಮನಸ್ಸಿನಲ್ಲೇ ಹೇಳಿಕೊಂಡ, ತಾನು ಮುಸ್ಲೀಮನಾದುದರಿಂದ ಅವರಿಗೆಲ್ಲ ತನ್ನ ಬರುವಿಕೆ ಹಿಡಿಸಲಿಲ್ಲವೇನೋ ಎಂದೆನಿಸಿತು ಅಲಿಗೆ.

"ಸುನೀಲ್ ಭಾಯಿ, ಅನಿಲ ನಿಮಗೆಲ್ಲ ಸಾಮಾನುಗಳನ್ನು ಕಳುಹಿಸಿದ್ದಾನೆ" ಎನ್ನುತ್ತಾ ಅಲಿ ಪೆಟ್ಟಿಗೆ ಬಿಚ್ಚಿದ. ಕ್ರಿಕೆಟ್ ಬ್ಯಾಟನ್ನು ಹೊರಗೆ ತೆಗೆದ ಸುನೀಲನಿಗೆ ಕೊಟ್ಟು,

"ನಿಮಗೆ ಕ್ರಿಕೆಟ್ ಹುಚ್ಚು ಎಂದು ಅನಿಲ ಹೇಳಿದ. ನೀವು ಚೆನ್ನಾಗಿ ಆಟವನ್ನು ಅಭ್ಯಾಸ ಮಾಡಬೇಕಂತೆ" ಎಂದ.

ಸುನೀಲನ ಹಣೆಯ ಮೇಲೆ ಬೆವರಿನ ಹನಿಗಳು ಕಾಣಿಸಿಕೊಂಡವು. ಕೆಳತುಟಿಯನ್ನು ಕಚ್ಚಿ ಹೇಳಿದ,

"ನೀವು ಬ್ಯಾಟು ತರುವ ಶ್ರಮ ವಹಿಸಿದ್ದಕ್ಕೆ ನನ್ನ ವಂದನೆಗಳು".

"ದಾದಾ ನಿಮ್ಮ ಸಂಜೆಯ ಸಂಚಾರಕ್ಕೆ ದಂತದ ಹಿಡಿಯ ಬೆತ್ತ".

ನಿದ್ದೆ ಮಾಡುತ್ತಿರುವವನನ್ನು ಹೊಡೆದೆಬ್ಬಿಸಿದರೆ ಬೆಚ್ಚಿ ಏಳುವಂತೆ ದಾದ ಬೆಚ್ಚಿದರು. ನಡುಗುತ್ತಿದ್ದ ತಮ್ಮ ಕೈಗಳನ್ನು ನೀಡಿ ಬೆತ್ತವನ್ನು ತೆಗೆದುಕೊಂಡರು ಹೃದಯಕ್ಕೆ ಒತ್ತಿಕೊಂಡರು.

"ಮಾ, ಅನಿಲ ಅವನ ಈಚಿನ ಭಾವಚಿತ್ರ ನಿಮಗೆ ಕಳುಹಿಸಿದ್ದಾನೆ".

ಬೀನಾಚಟರ್ಜಿಯ ಮುಖದಲ್ಲಿ ಯಾವ ಬದಲಾವಣೆಯೂ ಕಂಡು ಬರಲಿಲ್ಲ. "ಬಹಳ ಸಂತೋಷ" ಎಂದು ಚಿತ್ರದ ಕಡೆಗೆ ಕೈಚಾಚಿದರು. ಧ್ವನಿ ಏರು ತಗ್ಗಿಲ್ಲದೆ ನೀರಸವಾಗಿತ್ತು. ಸುಖ ದುಃಖದ ಸೋಂಕು ಸಹಿತ ಇರಲಿಲ್ಲ.

"ಭಾಭಿ ಎಲ್ಲಿ?"

"ಬಹೂ" ಅಧಿಕಾರವಾಣಿಯಿಂದ ಬೀನಾ ಸೊಸೆಯನ್ನು ಕೂಗಿದರು. ಶೀಲಾ ತಲೆಯ ಮೇಲೆ ಸೆರಗು ಹೊದ್ದು ಬಂದಳು. ಅಲಿಯ ಕೈಗಳಿಂದ ಸಿಲ್ಕಿನ ಸೀರೆಯನ್ನೂ ಮುತ್ತಿನ ಉಂಗುರವನ್ನೂ ಮಾತಿಲ್ಲದೆ ತೆಗೆದುಕೊಂಡು ಸರಸರನೆ ಒಳಗೆ ಹೋದಳು. ಅಲಿಗೆ ಅವಳ ವರ್ತನೆ ಆಶ್ಚರ್ಯವನ್ನುಂಟು ಮಾಡಿತು.

ಅನಿಲನನ್ನು ತಾನೂ ಮನೆಯವರಂತೆ 'ಅನಿಲ' ಎಂದು ಸಂಬೋಧಿಸುತ್ತಿರುವುದು ಅಸಮಾಧಾನವನ್ನುಂಟು ಮಾಡಿರಬೇಕೆಂದು ಅಲಿ ಊಹಿಸಿ,

"ಅನಿಲ್ ಚಟರ್ಜಿಗೆ ರಜ ಸಿಕ್ಕಲಿಲ್ಲ. ಇಲ್ಲದಿದ್ದರೆ ನಾವಿಬ್ಬರೂ ಒಟ್ಟಿಗೇ ಬರಬೇಕಾಗಿತ್ತು" ಎಂದ.

ಬೀನಾ ಅಲಿಯ ಕಣ್ಣು ತಪ್ಪಿಸಿ ಸುತ್ತಮುತ್ತ ನೋಡುತ್ತಾ,

"ಹೌದು... ಇನ್ನು ಊಟಕ್ಕೆ ಏಳುವಿರಾ?" ಎಂದು ಹೇಳಿ ಒಳಕ್ಕೆ ಹೋದರು. ತಾಯಿ, ತಂದೆ ಒಳಕ್ಕೆ ಹೋದೊಡನೆ ಸುನೀಲ ಅಲಿಯ ತೋಳಿನೊಳಕ್ಕೆ ಕೈಹಾಕಿ ಹೇಳಿದ.

"ನೀವು ಬಂದದ್ದು ನಮಗೆ ಬಹಳ ಸಂತೋಷ".

ಅಲಿ ನಸುನಕ್ಕ.

"ಸುನೀಲ್ ಅನಿಲನೂ ಬಂದಿದ್ದರೆ ಚೆನ್ನಾಗಿತ್ತು. ಎಂತಹ ಗೆಳೆಯ! ಅವನ ಗೆಳೆತನಕ್ಕಾಗಿ ನಾನು ಏನು ಮಾಡಲೂ ಸಿದ್ಧ. ಅನಿಲನಂತಹ ಜನ ಬಹಳ ಅಪರೂಪ".

ಸುನೀಲನ ಮುಖದಲ್ಲಿ ಎಂತಹದೋ ಭಾವ ಮಂಜುಗಡ್ಡೆಯಂತೆ ಹೆಪ್ಪುಗಟ್ಟಿತು. ಕ್ಷಣಹೊತ್ತು ಬಿಟ್ಟು ಅವನು ಹೇಳಿದ,

"ಒಳ್ಳೆಯವರಿಗೆ ಎಲ್ಲರೂ ಒಳ್ಳೆಯವರಂತೆ ಕಾಣಿಸುತ್ತಾರೆ".

ಅಲಿ ಪೆಚ್ಚಾದ. ತಾನು ಅನಿಲನನ್ನು ಅಷ್ಟು ಹೊಗಳಬಾರದಿತ್ತು ಎನಿಸಿತು. ಸುನೀಲನಿಗೆ ಮತ್ಸರವುಂಟಾಗಿರಬಹುದೆಂದು ಬಗೆದು ಓರೆಗಣ್ಣಿನಿಂದ ಅವನ ಮುಖ ನೋಡಿದ. ಸುನೀಲನ ಮುಖದಲ್ಲಿ ತೀವ್ರ ನೋವಿತ್ತು.

ಮಾತಿಲ್ಲದೆ ಸಾಗುತ್ತಿದ್ದ ಊಟ ಅಲಿಗೆ ಬೇಸರವನ್ನುಂಟುಮಾಡಿತು. ಆಗಾಗ್ಗೆ ಮುರಿದು ನೆಲಕ್ಕೆ ಬೀಳುತ್ತಿದ್ದ ಸಂಭಾಷಣೆಯನ್ನು ಮೇಲಕ್ಕೆತ್ತಲು ಅಲಿಯನ್ನು ಬಿಟ್ಟು ಮತ್ತಾರು ಪ್ರಯತ್ನಿಸಲಿಲ್ಲ. ಎಲ್ಲೆಲ್ಲು ಹರಡಿದ್ದ ಮೌನ,

ಗಂಭೀರ ವಾತಾವರಣ ಅಲಿಯ ಮನಸ್ಸಿಗೆ ಕಿರುಕುಳ ಕೊಟ್ಟಿತು. ಕೊನೆಗೆ ಏನು ಮಾಡಲೂ ತೋಚದೆ ಅಲಿ ತನ್ನ ಮನೆಯವರ ವಿಚಾರ ಮಾತನಾಡತೊಡಗಿದ. ಎಲ್ಲರೂ ಸ್ವಲ್ಪ ಉತ್ಸಾಹ ತೋರಿದಂತೆ ಕಂಡುಬಂತು.

"ನೀವು ನಮ್ಮ ಮನೆಯವರ ಆತಿಥ್ಯ ಸ್ವೀಕರಿಸಬೇಕು" ಎಂದು ಹೇಳಿ ಅಲಿ ಮುಗಿಸಿದಾಗ ಬೀನಾ ನಸುನಕ್ಕರು.

ರೂಮಿಗೆ ಹಿಂತಿರುಗಿದಾಗ ಅಲಿಯ ಮನಸ್ಸು ಭಾರವಾಗಿತ್ತು. ಅನಿಲನ ಮನೆಯವರ ನಡವಳಿಕೆ ಅವನಿಗೆ ಬಿಡಿಸಲಾರದ ಸಮಸ್ಯೆಯಾಗಿತ್ತು.

"ಎಷ್ಟಾಗಲಿ ನಾನು ಮುಸ್ಲಿಂ, ನನ್ನ ಸಾಮೀಪ್ಯವನ್ನು ಇವರು ಸಹಿಸುವುದಿಲ್ಲ ಎಂದು ತೋರುತ್ತದೆ. ಜಾತಿಬೇಧ ತೋರುವುದರಲ್ಲಿ ಹಿಂದೂಗಳದು ಎತ್ತಿದ ಕೈ" ಎಂದುಕೊಂಡ. ಮನೆಯವರೆಲ್ಲರೂ ತನ್ನನ್ನು ಮೋಸಗೊಳಿಸಲು ಆಟ ಹೂಡಿದ್ದಾರೆ ಎಂಬ ಸಂಗತಿ ಅಲಿಗೆ ಖಚಿತವಾಯಿತು. ಅವರಿಗೆ ಅಷ್ಟು ಇಷ್ಟವಿಲ್ಲದ್ದಿದ್ದ ಮೇಲೆ ಹೊರಟುಹೋಗಲೇ ಎಂದು ಯೋಚಿಸಿದ. ಆದರೆ ಅನಿಲ ತಪ್ಪು ತಿಳಿದುಕೊಳ್ಳಬಹುದೆಂಬ ಸಂಶಯ ತಲೆದೋರಿ ಅನಿಲನಿಗಾಗಿ ಅವನ ಮನೆಯಲ್ಲಿರಬೇಕೆಂದುಕೊಂಡ.

ಅನಿಲ ತನ್ನೊಡನೆ ಗೆಳೆತನ ಬೆಳೆಸಿದುದೇ ಅವರಿಗೆ ಅಸಮಾಧಾನವನ್ನು ಉಂಟುಮಾಡಿದ್ದ ಹಾಗಿತ್ತು. ಅನಿಲ ವಿಚಾರ ಬಂದೊಡನೆ ಎಲ್ಲರ ಮುಖದಲ್ಲೂ ಕರಿ ನೆರಳಾಡುತ್ತಿತ್ತು. ಅವರ ಮುಖ ಮೋಡ ಮುಸುಕಿದಂತಾಗುಗಿತ್ತು. ಅವರ ವರ್ತನೆ ಅಲಿಯ ಅಭಿಮಾನವನ್ನು ನೋಯಿಸಿದರೂ ಒಂದು ವಿಷಯದಲ್ಲಿ ಮಾತ್ರ ಅಲಿಗೆ ಯಾವ ಅನುಮಾನವೂ ಇರಲಿಲ್ಲ. ಅವನ ಬಗ್ಗೆ ಅನಿಲನ ಮನೆಯವರಿಗೆ ಯಾವ ಅಭಿಪ್ರಾಯವಿದ್ದರೂ, ಅವನು ತಮ್ಮೊಡನೆ ಇರುವಷ್ಟು ದಿನ ಸುಖವಾಗಿ; ಸಂತೋಷವಾಗಿ ಕಾಲ ಕಳೆಯಬೇಕೆಂಬುದೇ ಅವರ ಹೆಬ್ಬಯಕೆಯಾಗಿತ್ತು.

ಒಂದು ದಿನ ಅಲಿ ಸುನೀಲ ನೊಡನೆ ಪಾರ್ಕಿನ ಹುಲ್ಲಿನ ಮೇಲೆ ಕುಳಿತು ಮಾತನಾಡುತ್ತಾ,

''ಸುನೀಲ್, ಅನಿಲನ ಕಾಗದ ಬಂದಿರಬಹುದು, ಅವನ ಗೆಳೆತನ ಸಿಕ್ಕಿದ್ದು ನನ್ನ ಪುಣ್ಯ. ಅವನೂ ಇಲ್ಲಿಗೆ ಬಂದಿದ್ದರೆ ನಾವೆಲ್ಲಾ ಇನ್ನೂ ಹೆಚ್ಚು ಸಂತೋಷವಾಗಿ ಕಾಲ ಕಳೆಯಬಹುದಾಗಿತ್ತು'' ಎಂದು,

ಅಲಿಯ ಮಾತು ಕೇಳುತ್ತಾ ಹುಲ್ಲಿನಲ್ಲಿ ಮುಖ ಮುಚ್ಚಿಕೊಂಡು ಮಲಗಿದ್ದ. ಸುನೀಲ ತಲೆಯೆತ್ತದೆ,

'' ಹೌದು. ನೀವು ಹೇಳುವುದು ನಿಜ'' ಎಂದ.

''ನಿಮ್ಮಣ್ಣ ಸಾವಿರದಲ್ಲಿ ಒಬ್ಬ''.

''ನನಗದು ಗೊತ್ತಿಲ್ಲವೇ? ನಾನೂ, ನನ್ನ ಇಬ್ಬರು ಅಣ್ಣಂದಿರೂ ಬಹಳ ವಿಶ್ವಾಸದಿಂದ ಇದ್ದೆವು. ದೊಡ್ಡಣ್ಣ ಕಮಲ್, ಅನಿಲ್, ನಾನು. ಈಗ ನಾವು.... ನಮ್ಮ ಪೈಕಿ....'' ಸುನೀಲನ ಗಂಟಲನ್ನು ಒತ್ತಿ ಹಿಡಿದಂತಾಯಿತು, ಮಾತು ಪೂರ್ತಿಯಾಗಲಿಲ್ಲ. ಅಲಿ ಮುಂದೆ ಮಾತನಾಡಬಹುದಾದ್ದನ್ನು ತಾನೇ ಊಹಿಸಿದ. ಕಮಲ್ ಕಾಶ್ಮೀರದ ಯುದ್ಧದಲ್ಲಿ ಮಡಿದಿದ್ದ. ಅನಿಲ ಕರಾಚಿಯಲ್ಲಿ ತನ್ನ ಸಂಸಾರದಿಂದ ದೂರ ಇದ್ದಾನೆ''.

''ಅನಿಲನಿಗೆ ಯಾವಾಗಲು ನಿಮ್ಮ ಯೋಚನೆ, ನಿಮ್ಮ ಫೋಟೋಗಳನ್ನೆಲ್ಲಾ ಆಲ್ಬಂನಲ್ಲಿಟ್ಟುಕೊಂಡಿದ್ದಾನೆ''.

ಸುನೀಲ ಬಿಕ್ಕಿ ಹೇಳಿದ,

''ನನಗೂ ಅದು ಗೊತ್ತು. ನಾವಿಬ್ಬರೂ ಯಾವಾಗಲೂ ಬಹಳ ಅನ್ಯೋನ್ಯವಾಗಿಯೇ ಇದ್ದೆವು''.

ಸುನೀಲನ ದೇಹ ಕಂಪಿಸುತ್ತಿತ್ತು. ಮುಖ ಮುತ್ತೂ ಹುಲಿನಲ್ಲಿ ಹುದುಗಿದಂತೆ ತೋರಿತು.

ಶುಕ್ರವಾರ ಸಂಜೆ ಎಲ್ಲರೂ ಕಾಳಿಯ ದೇವಸ್ಥಾನಕ್ಕೆ ಹೋದರು. ಅತಿಥಿಯ ಸತ್ಕಾರ ಶೀಲಳ ಪಾಲಿಗೆ ಬಿತ್ತು. ಅಲಿ ಶೀಲಳೊಡನೆ ವಿನೋದ ಮಾಡುತ್ತಾ ಹೇಳಿದ.

''ಭಾಬಿ, ಅನಿಲನನ್ನು ಬಹಳ ದಿನ ಬಿಟ್ಟಿರಬೇಡಿ, ಬೇಗ ಕರಾಚಿಗೆ ಬಂದು ಬಿಡಿ. ಅವನಿಗೆ ಯಾವಾಗಲೂ ನಿಮ್ಮದೇ ಧ್ಯಾನ. ಅವನು ಕಳುಹಿಸಿರುವ ಸೀರೆ, ಉಂಗುರ ಒಪ್ಪಿತೇ?''

ಶೀಲ ತಲೆಯ ಮೇಲಿದ್ದ ಸೆರಗನ್ನು ಹಣೆಯವರೆಗೆ ಎಳೆದುಕೊಂಡು ಹೇಳಿದಳು ''ಹೂಂ, ಬಹಳ ಚೆನ್ನಾಗಿದೆ''.

''ಭಾಭಿ, ನನ್ನದೊಂದು ಸಮಸ್ಯೆಯನ್ನು ನಿಮ್ಮ ಮುಂದಿಡುತ್ತೇನೆ, ನಿಮ್ಮ ಉತ್ತರ ನನಗೆ ಬೇಕು''.

ಶೀಲ ತನ್ನ ದೊಡ್ಡ ಕಣ್ಣುಗಳನ್ನು ಅರ್ಧ ತೆಗೆದು ''ಏನದು?'' ಎಂದಳು. ''ಸತ್ಯವಾಗಿ ಹೇಳಿ ಭಾಭಿ, ನಾನು ಮುಸ್ಲಿಮನಾದುದರಿಂದ ನನ್ನ ಬರುವಿಕೆ ನಿಮಗೆ ಇಷ್ಟವಾಯಿತೋ? ಇಲ್ಲವೋ? ಎಂದು ಅನುಮಾನ ಬರುತ್ತಿದೆ. ಅಥವಾ ನಾನೇನಾದರೂ ತಪ್ಪು ಮಾಡಿರುವೆನೆ? ನಿಮ್ಮ ವರ್ತನೆ, ಮಾತುಕತೆ ಸಹಜವಾಗಿಲ್ಲ. ನಾಟಕದಂತೆ....''

ಶೀಲಾ ಆತುರದಿಂದ ಹೇಳಿದಳು.

''ನೀವು ಖಂಡಿತ ಹಾಗೆ ಭಾವಿಸಬಾರದು. ಇದು ಮಾ, ದಾದಾಗೆ ತಿಳಿದರೆ ವ್ಯಥೆಪಡುತ್ತಾರೆ''.

''ಹಾಗಾದರೆ ಕಾರಣ ಏನು? ನಮ್ಮ ಜಾತಿಯನ್ನು ಕಂಡರೆ ಅವರಿಗೆ ತಿರಸ್ಕಾರವೇ?''

''ಛೇ, ಅವರಿಗೆ ಜಾತಿ ಭೇದವಿಲ್ಲ''.

''ಆದರೂ ಅವರಿಗೆ ನನ್ನನ್ನು ಕಂಡರೆ ಇಷ್ಟವಿರುವ ಹಾಗೆ ತೋರಲಿಲ್ಲ. ಹಾಗಾದರೆ ನಾನು ಅವರ ವರ್ತನೆಯನ್ನು ಏನೆಂದು ತಿಳಿಯಲಿ?''

''ಸಧ್ಯಕ್ಕೆ ಏನು ತಿಳಿಯಬೇಡಿ. ಸ್ವಲ್ಪ ದಿನ ತಡೆದರೆ ನಿಮಗೇ ಎಲ್ಲವೂ ಅರ್ಥವಾಗುತ್ತದೆ''.

ಶೀಲಾಳ ಮುಖದ ವೇದನೆಯನ್ನು ಗಮನಿಸಿದರೆ ಅಲಿ ಮುಂದೆ ಅವಳನ್ನು ಪ್ರಶ್ನಿಸಲು ಇಷ್ಟಪಡಲಿಲ್ಲ.

''ಹೇಗಾದರೂ ಇರಲಿ. ಅವರೆಲ್ಲ ನನ್ನನ್ನು ಸಂತೋಷಪಡಿಸಲು ಪ್ರಯತ್ನಿಸಿದ್ದಾರೆ. ಅದನ್ನು ಮಾತ್ರ ನಾನು ಮರೆಯುವುದಿಲ್ಲ''.

ಶೀಲ ಸಂತೋಷದಿಂದ,

''ನೀವು ಹೇಳುವುದು ನಿಜವೇ? ಮಾ, ದಾದ ನಿಮ್ಮ ಮಾತನ್ನು ಕೇಳಿದರೆ ಎಷ್ಟೋ ಸಮಾಧಾನಪಟ್ಟುಕೊಳ್ಳುತ್ತಾರೆ'' ಎಂದಳು.

ಎದುರಿಗೆ ಕುಳಿತ ಬಂಗಾಲಿ ಹುಡುಗಿಯ ಮಾತನ್ನು ಕೇಳುತ್ತಿದ್ದ ಅಲ್ಲಿ ಶೀಲಾಳನ್ನು ತನ್ನ ಹುಡುಗಿ ರೋಷನ್ ಜೊತೆ ಹೋಲಿಸಿ ನೋಡಿದ. ಇಬ್ಬರಿಗೂ ಬಹಳ ವ್ಯತ್ಯಾಸವಿತ್ತು. ನಸು ಕಪ್ಪು ಬಣ್ಣದ ದೊಡ್ಡ ಕಣ್ಣುಗಳು ಸ್ವಲ್ಪ ನೀಳವಾದ ಮುಖದ ಶೀಲಳಲ್ಲಿ ಲಾವಣ್ಯ ಅಡಗಿತ್ತು. ಶೀಲ ಯಾವಾಗಲೂ ಮೌನವಾಗಿರುತ್ತಿದ್ದಳು. ರೋಷನ್ ಮಾತಿನ ಮಲ್ಲಿ. ಆದರೂ ಶೀಲ, ರೋಷನ್ ಒಳ್ಳೆಯ ಗೆಳತಿಯರಾಗಬಹುದು. ತಾನು ಅನಿಲ್ ಇರುವಂತೆ – ಎನಿಸಿತು ಅಲಿಗೆ, ಪಾಪ ರೋಷನ್ ತನಗಾಗಿ ಕಾಯುತ್ತಿರುವಂತೆ ಶೀಲ ಅನಿಲನ ಆಗಮನಕ್ಕಾಗಿ ಹಾತೊರೆಯುತ್ತಿರಬಹುದು.

''ಈಗ ನಿಮಗೆ ನನ್ನ ಬದಲು ಅನಿಲ್ ಇಲ್ಲಿದ್ದರೆ ಚೆನ್ನಾಗಿತ್ತು ಎನಿಸಬಹುದಲ್ಲವೇ?''
ಬಾಯಿಯಿಂದ ಮಾತು ಹೊರಬಿದ್ದ ತಕ್ಷಣ ಅಲ್ಲಿಗೆ ತಾನು ಹಾಗೆ ಮಾತನಾಡಬಾರದಿತ್ತು ಎನಿಸಿತು. ಶೀಲ ನಸು ಬೆಚ್ಚಿದಳು. ಅವಳ ಕೃಷ್ಣವರ್ಣದ ಉಜ್ವಲವಾದ ಕಣ್ಣುಗಳು ಅಲಿಯನ್ನು ದಿಟ್ಟಿಸಿದವು. ಅಲ್ಲಿಗೆ ದಿಗ್ಭ್ರಮೆಯಾಯಿತು.

ಗಂಭೀರ ಸನ್ನಿವೇಶವನ್ನು ಮರೆಸುವ ಸಲುವಾಗಿ ಜೇಬಿನಿಂದ ರೋಷನಳ ಭಾವಚಿತ್ರ ತೆಗೆದು ಶೀಲಳಿಗೆ ಕೊಟ್ಟು ಹೇಳಿದ,

''ಇವಳು ನನ್ನ ಬೇಗಂ ರೋಷನ್, ನೀವಿಬ್ಬರೂ ಗೆಳತಿಯರಾಗಬೇಕೆಂದು ನನ್ನ ಅಭಿಲಾಷೆ''.

ಅಲಿ ಶೀಲಳ ಅಭಿಪ್ರಾಯ ತಿಳಿಯಲು ತವಕಿಸಿದ. ಶೀಲ ಮೌನವಾಗಿ ರೋಷನಳ ಚಿತ್ರ ನೋಡಿದಳು. ಮುಸ್ಲಿಮರ ಉಡಿಗೆಯಲ್ಲಿದ್ದ ಲಕ್ಷಣವಾದ ಹುಡುಗಿಯೊಬ್ಬಳು ಶೀಲಳ ಕಡೆ ಮುಗುಳ್ನಗೆ ಬೀರುತ್ತಿದ್ದಳು. ಶೀಲ ಒಂದು ಗಳಿಗೆ ಚಿತ್ರದ ಕಡೆ ನೋಡಿ, ಅದನ್ನು ರಕ್ಷಿಸುವಂತೆ ತನ್ನ ಕೈಗಳಲ್ಲಿ ಬಿಗಿಯಾಗಿ ಹಿಡಿದು, ಸ್ವಲ್ಪ ಬಾಗಿ ಹಗುರವಾಗಿ ಮುತ್ತಿಟ್ಟು,

''ತಂಗಿ ದೇವರು ನಿನ್ನನ್ನಾದರೂ ಸುಖವಾಗಿಟ್ಟಿರಲಿ'' ಎಂದಳು.

ಅಲಿಗೆ ಅವಳ ವರ್ತನೆ ಆಶ್ಚರ್ಯಕರವಾಗಿಯೂ, ಅತಿ ಸುಂದರವಾಗಿಯೂ ತೋರಿತು.

''ರೋಷನ್ ಗೆ ನಿಮ್ಮ ಹಾರೈಕೆ ತಿಳಿಸುತ್ತೇನೆ. ಅವಳೂ ನಿಮಗೆ ಇದೇ ಶುಭಾಶಯವನ್ನು ಕೋರುತ್ತಾಳೆಂದು ನನ್ನ ನಂಬಿಕೆ'' ಎಂದ.

ಅಲಿ ಕರಾಚಿಗೆ ಹೊರಡುವ ದಿನ ಬಂತು. ಸ್ಟೇಷನ್ನಿಗೆ ಹೊರಡಲು ಎಲ್ಲಾ ಸಿದ್ಧತೆಗಳೂ ನಡೆದಿದ್ದವು. ಮಾ, ದಾದ, ಸುನೀಲ, ಅಲಿಯೊಡನೆ ಕುಳಿತಿದ್ದರು. ಅಲಿ ವಿನೋದವಾಗಿ ಹೇಳಿದ.

''ಮಾ, ಅನಿಲನಿಗೆ ಸಂದೇಶ, ರಸಗುಲ್ಲ ಕಳುಹಿಸುವುದಲ್ಲವೇ''.

ಸುನೀಲ ತಾಯಿಯ ಕಡೆ ನೋಡಿದ. ಬೀನಾ ಮಾತನಾಡಲಿಲ್ಲ.

ಅಲಿ ಎದ್ದು ನಿಂತು ಎಲ್ಲರಿಗೂ ಕೈ ಮುಗಿಯುತ್ತಾ,

''ಇನ್ನೆರಡು ದಿನಕ್ಕೆ ನಾನು ಅನಿಲನ ಜೊತೆ ಇರುತ್ತೇನೆ. ಇಲ್ಲಿ ನಾನು ಕಳೆದ ಪ್ರತಿಯೊಂದು ನಿಮಿಷವನ್ನೂ ಅವನಿಗೆ ವಿವರಿಸಿ ಹೇಳುತ್ತೇನೆ'' ಎಂದ.

ಅಲಿಯ ಮಾತು ಮುಗಿಯುವುದೇ ತಡ ದಾದ ತಟ್ಟನೆ ಎದ್ದು ನಿಂತು ಕುರ್ಚಿಯೊಂದನ್ನು ಎಡವಿ, ತೂರಾಡುತ್ತಾ ಆಚೆಗೆ ಹೋಗಿಬಿಟ್ಟರು. ಸುನೀಲ ' ಅಮ್ಮಾ' ಎಂದು ದೈನ್ಯದಿಂದ ಕೂಗಿದ. ಬೀನಾಚಟರ್ಜಿ ತಾವು ಕುಳಿತಿದ್ದ ಕುರ್ಚಿಯನ್ನು ಹಿಂದಕ್ಕೆ ತಳ್ಳಿ ಮುಂದೆ ಬಂದು ಅಲಿಯ ತೋಳಿನ ಮೇಲೆ ಕೈಯಿಟ್ಟು ಮೃದುವಾಗಿ ಹೇಳಿದರು.

''ಇಲ್ಲ ಮಗು, ನೀನು ಇನ್ನು ಅನಿಲನನ್ನು ನೋಡಲಾರೆ. ಅವನು ಸತ್ತು ಒಂದು ವಾರವಾಯಿತು''.

''ಸತ್ತು ಹೋದ! ಅನಿಲ್! ಇಲ್ಲ ಸುಳ್ಳು'' ಅಲಿ ಉದ್ವೇಗದಿಂದ ಕೂಗಿಕೊಂಡ.

''ಹೌದು ಮಗು'' ಬೀನಳ ದನಿ ಕುಗ್ಗಿತ್ತು. ಇಷ್ಟು ದಿನ ತಡೆದಿದ್ದ ಕಂಬನಿ ಕೆನ್ನೆಯ ಮೇಲೆ ಹನಿಹನಿಯಾಗಿ ಉರುಳುತ್ತಿತ್ತು.

''ಸುನೀಲ್, ಮಾ ಹೇಳುವುದು ನಿಜವೇ? ಅಲ್ಲವೆಂದು ಹೇಳು ಸುನೀಲ್''.

''ಹೌದು ಭಾಯಿ, ನೀವು ಇಲ್ಲಿಗೆ ಹೊರಟು ಬಂದ ದಿನವೇ ಕರಾಚಿಯಲ್ಲಿ ಕೋಮುವಾದ ಗಲಭೆ ಪ್ರಾರಂಭವಾಗಿ ಅನಿಲ ಚಾಕುವಿನಿಂದ ಇರಿಯಲ್ಪಟ್ಟ''.

'' ಅನಿರೀಕ್ಷಿತವಾದ ನಂಬಲಸಾಧ್ಯವಾದ ತನ್ನ ಪ್ರಿಯ ಗೆಳೆಯನ ಸಾವನ್ನು ಕೇಳಿ ಅಲಿ ಕುರ್ಚಿಯಲ್ಲಿ ಕುಸಿದು ಬಿದ್ದು ಮುಖವನ್ನು ಕೈಗಳಿಂದ ಮುಚ್ಚಿಕೊಂಡ. ಸುನೀಲ ಮುಂದಕ್ಕೆ ಬಂದು ಅವನ ಕೊರಳಿನ ಸುತ್ತ ಕೈ ಹಾಕಿ ಹೇಳಿದ.

''ಸ್ವಲ್ಪ ಸೈರಿಸಿಕೊಳ್ಳಿ ಭಾಯಿ, ಸಹನೆ ತಂದುಕೊಳ್ಳಿ''.

''ಈ ಸುದ್ದಿ ನಿಮಗೆ ಯಾವಾಗ ಬಂತು?''

‘‘ನೀವು ಬರುವ ಹಿಂದಿನ ದಿನವೇ ತಂತಿ ಬಂತು. ಅನಿಲನ ಆಫೀಸಿನವರು ವಿವರಗಳನ್ನು ಆಮೇಲೆ ಕಳುಹಿಸಿದರು’’.

ಅಲಿಗೆ ದುಃಖ ಉಮ್ಮಳಿಸಿ ಬಂತು.

‘‘ಇಷ್ಟಾದರೂ ನೀವು ನನ್ನನ್ನು ಇಲ್ಲಿಗೆ ಬರಮಾಡಿಕೊಂಡಿರಿ. ಅನಿಲನ ಬಗ್ಗೆ ನಾನಾಡುತ್ತಿದ್ದ ಪ್ರತಿಯೊಂದು ವಾಕ್ಯವೂ ಸೂಜಿಯ ಮೊನೆಯಂತೆ ನಿಮ್ಮ ಹೃದಯವನ್ನು ಚುಚ್ಚುತ್ತಿದ್ದರೂ ನೀವು ಮೌನವಾಗಿಯೇ ಎಲ್ಲವನ್ನೂ ಸಹಿಸಿದಿರಿ. ಅಯ್ಯೋ ದೇವರೇ! ನಿಮ್ಮ ಕ್ಷಮೆ ಬೇಡಲೂ ನನಗೆ ಬಾಯಿಲ್ಲ’’.

ಅನಿಲನ ಮಾತು ಬಂದಾಗ ಇತರರು ತಾಳುತ್ತಿದ್ದ ಮೌನ ಅಲಿಗೆ ಈಗ ಅರ್ಥವಾಗುತ್ತಿತ್ತು. ತಾನು ಅವರ ವರ್ತನೆಗೆ ಎಂತಹ ಅರ್ಥವನ್ನು ಕಲ್ಪಿಸಿದ್ದ!

ಬೀನಾ ಮೆಲ್ಲಗೆ ನುಡಿದಳು.

‘‘ಮಗು ಕ್ಷಮಿಸುವುದಕ್ಕೇನಿದೆ? ನನ್ನ ಮಗುವನ್ನು ನೀನು ಹೊಗಳುವುದನ್ನು ಕೇಳಲು ಹೆತ್ತ ಕರುಳು ಹಂಬಲಿಸುತ್ತಿತ್ತು. ಆದರೆ ನಾವು ಎಲ್ಲಿ ನಿನ್ನೆದುರಿಗೆ ಸಹನೆ ಕಳೆದುಕೊಂಡು ದುಃಖ ಪ್ರದರ್ಶಿಸಿಬಿಡುತ್ತೇವೆಯೋ ಎಂದು ಭಯವಾಗುತ್ತಿತ್ತು’’.

‘‘ಮಾ, ನಾನು ಅನಿಲನ ಸುದ್ದಿ ಎತ್ತಿದಾಗ ನೀವು ನನ್ನನ್ನು ತಡೆಯಬಹುದಾಗಿತ್ತು. ಮೌನವಾಗಿ ಯಾತನೆಯನ್ನನುಭವಿಸುವ ಅಗತ್ಯವೇನಿತ್ತು. ನನ್ನಲ್ಲಿ ನಿಮಗೆ ನಂಬಿಕೆ ಸಾಲದಾಯಿತೆ? ನಾನೂ ಅನಿಲನನ್ನು ಪ್ರೀತಿಸುತ್ತಿದ್ದೆ. ಈ ವಿಚಾರ ನನಗೆ ತಿಳಿದಿದ್ದರೆ ನಾನಿಲ್ಲಿ ಒಂದು ಗಳಿಗೆಯೂ ಇರುತ್ತಿರಲಿಲ್ಲ’’.

‘‘ಗೊತ್ತು ಮಗು ಅದರಿಂದಲೇ ಅನಿಲನ ಮರಣದ ಸುದ್ದಿಯನ್ನು ನಿನ್ನಿಂದ ಮರೆಸಲು ಯತ್ನಿಸಿದ್ದು, ನಮ್ಮ ಮಗನ ಕೊನೆಯ ಆಸೆಯನ್ನು ಪೂರೈಸಲು ಪ್ರಯತ್ನಿಸಿದೆವು. ಆದರೆ ಸಾಕಷ್ಟು ಯಶಸ್ವಿಯಾಗಲಿಲ್ಲ. ನಮ್ಮ ವರ್ತನೆಯಲ್ಲಿದ್ದ ಅಸಹಜತೆಯನ್ನು ನೀನು ಬಂದ ದಿನವೇ ಕಂಡುಕೊಂಡೆ’’.

‘‘ನನ್ನನ್ನು ಸಂತೋಷವಾಗಿರಿಸಲು ಪ್ರಯತ್ನಿಸುತ್ತಿದ್ದ ಗಳಿಗೆಯಲ್ಲೇ ನೀವು.....’’

ಅಲಿ ಮಾತು ಪೂರ್ಣಮಾಡಲಿಲ್ಲ. ಹಿಂದಿನ ದೃಶ್ಯಗಳೆಲ್ಲ ಅವನ ಕಣ್ಣು ಮುಂದೆ ಹಾಯ್ದು ಹೋದವು. ದಾದನ ವಿಚಿತ್ರ ನಡವಳಿಕೆ, ಸುನೀಲ ಹುಲ್ಲಿನಲ್ಲಿ ಮುಖ ಮರೆಸಿದ್ದು, ಶೀಲ ರೋಷನಳಿಗೆ ಹಾರೈಸಿದ್ದು ಎಲ್ಲವೂ ಈಗ ಅವನಿಗೆ ಅರ್ಥವಾಯಿತು.

‘‘ನಿಮ್ಮ ಮಗ ನಮ್ಮ ಜಾತಿಯವರಿಂದ ಕೊಲ್ಲಲ್ಪಟ್ಟಾಗಲೂ ನೀವು ನನ್ನನ್ನು ಅತಿಥಿಯನ್ನಾಗಿ ಸ್ವೀಕರಿಸಿದಿರಿ. ನನ್ನ ದೇಶದಲ್ಲಿ ಇದು ಸಾಧ್ಯವಾಗುತ್ತಿರಲಿಲ್ಲ. ನೀವು ಹಾಗೇಕೆ ಮಾಡಿದಿರಿ? ನಾನು ಅನಿಲನ ಸ್ನೇಹಿತನೆಂದು ನನಗೆ ಸ್ವಾಗತವಿತ್ತಿರಾ?" ಅಲಿಯ ಕಣ್ಣಿನಲ್ಲಿ ಕಂಬನಿಯಿತ್ತು.

ಬೀನಾ ಉತ್ತರ ಹೇಳಿದರು.

"ನಿಮ್ಮ ಗೆಳೆತನಕ್ಕಾಗಿ ಮಾತ್ರ ನಾವು ನಿನ್ನನ್ನು ಸ್ವಾಗತಿಸಲಿಲ್ಲ. ಇದು ಎರಡು ಜನಾಂಗದ, ಎರಡು ದೇಶದ ಪ್ರಶ್ನೆ. ಹಿಂದೂ ಜನಾಂಗ ಮುಸ್ಲಿಮರನ್ನು ಹೇಗೆ ಆದರಿಸುತ್ತಾರೆ ಎಂಬುದನ್ನು ತೋರಿಸುವ ಸಲುವಾಗಿ ಸ್ವಾಗತಿಸಿದೆವು. ಒಂದೇ ಮನೆಯಲ್ಲಿದ್ದ ಸೋದರರು ಬೇರೆಯಾದರೂ ತಮ್ಮ ಅಣ್ಣನ ಮನೆಗೆ ಬಂದಾಗ ಆದರಿಸಬೇಕಷ್ಟೆ. ಅಷ್ಟು ದೂರದಿಂದ ನೀನು ನಿನ್ನ ಅಣ್ಣನ ಮನೆಗೆ ಬಂದಿರುವಾಗ ನಾವು ನಿನ್ನನ್ನು ಎದುರುಗೊಳ್ಳಬೇಡವೆ?"

# 3.4 ಓದುಪಥ್ಯ : ಸ್ವಾಮಿ ಸಂಧಾನ

**– ಬಿ.ಜಿ.ಎಲ್.ಸ್ವಾಮಿ**

ಒಂದು ದಿನ ಕ್ಲಾಸಿಗೆ ಪಾಠ ಹೇಳುತ್ತಿದ್ದಾಗ ಹತ್ತಾರು ಜನ ಗಂಡಸರೂ, ಹೆಂಗಸರೂ, ಆವೇಶದಿಂದ ಮಾತನಾಡುತ್ತಾ ಕೈಸಾಲೆಯಲ್ಲಿ ಹಾದುಹೋದರು. ಕೆಲವು ನಿಮಿಷಗಳೊಳಗಾಗಿ ಆಳು ಬಂದು ''ನಿಮ್ಮನ್ನು ನೋಡಲು ಬಂದಿದ್ದಾರೆ, ರೂಮಿನಲ್ಲಿ ಕುಳಿತುಕೊಂಡಿದ್ದಾರೆ'' ಎಂದ. '' ಕ್ಲಾಸು ಮುಗಿಸಿಕೊಂಡು ಬರುತ್ತೇನೆ'' ಎಂದು ಹೇಳಿಕಳುಹಿಸಿದೆ.

ರೂಮಿಗೆ ಹೋಗುವುದಕ್ಕೆ ಮುಂಚೆ ಈ ಆಗಂತುಕರು ಯಾರಿರಬಹುದು ಎಂದು ಕುತೂಹಲ. ದೂರದಲ್ಲಿ ನಿಂತು ಕಿಟಕಿಯ ಸಂದಿನಿಂದ ನೋಡಿದೆ. ಇಬ್ಬರೂ ಮುದಿ 'ಮಡಿ' 'ಪಾಟಿ'ಗಳು. ಒಬ್ಬಾಕೆ ಮುದಿ ಮುತ್ತೈದೆ, ಮೂವರು ಮುದಿ ಗಂಡಸರು, ನಡುವಯಸ್ಸಿನ ಗಂಡಸರು ಮೂವರು, ಅದೇ ವಯಸ್ಸಿನ ಹೆಂಗಸರಿಬ್ಬರು, ಎರಡು ಮೂರು ವರ್ಷದ ಮಕ್ಕಳು ನಾಲ್ಕು. ಎತ್ತರದ ದನಿಯಲ್ಲಿ ಒಟ್ಟಿಗೆ ಮಾತನಾಡುತ್ತಲೇ ಇದ್ದರು, ಮಾತು ಏನು, ಸಂದರ್ಭ ಏನು ಎಂಬುದು ತಿಳಿಯಲಿಲ್ಲ. ಇವರಲ್ಲಿ ಯಾರಾದರೂ ನನಗೆ ಪರಿಚಿತರೆ ಎಂದು ತಲೆ ಕೆರೆದುಕೊಂಡೆ. ಜ್ಞಾಪಕ ಬರಲಿಲ್ಲ.

ರೂಮಿನೊಳಗೆ ಹೋಗಿ ನನ್ನ ಕುರ್ಚಿಯ ಬಳಿ ನಿಂತುಕೊಂಡಾಗಲೂ ಮಾತಿನ ಗದ್ದಲದಲ್ಲಿಯೇ ತಲ್ಲೀನರಾಗಿದ್ದರು. ''ಯಾರು ? ಏನು ಬೇಕು ?'' ಎಂದು ಕೇಳಿದೆ. ಗಂಡಸೊಬ್ಬ ''ಪಿರೋಪೆಚರ್ ಚಾಮಿ ಅವರನ್ನು ನೋಡಬೇಕು'' ಎಂದ.

''ನಾನೇ.''

ನಾಲ್ಕು ಮಂದಿ ಗಂಡಸರು ಎದ್ದು ನಿಂತುಕೊಂಡು ಕೈ ಜೋಡಿಸಿ ''ನಿಮ್ಮಿಂದ ನಮ್ಮ ಮಾನ ಉಳಿಯಬೇಕು'' ಎಂದರು. ನನಗೆ ಹಿಂದುಮುಂದು ಗೊತ್ತಾಗಲಿಲ್ಲ. ಮುದುಕರಲ್ಲೊಬ್ಬ ಮಾತನಾಡುವುದಕ್ಕೆ ಮುಂದೆ ಬಂದ. ನಡುವಯಸ್ಸಿನ ಹೆಂಗಸೊಬ್ಬಳು ''ಅವನು ಮಾತನಾಡುವುದು ಬೇಡ ! ನೀವು ಹೇಳಿ'' ಎಂದು ಇನ್ನೊಬ್ಬನನ್ನು ತಿವಿದಳು. ತಿವಿಸಿಕೊಂಡವನು ಹಿಂದೂಮುಂದೂ ನೋಡುತ್ತಿದ್ದಾಗ ಮಡಿ 'ಪಾಟಿ'ಯೊಬ್ಬಳು ಎದ್ದು ನನ್ನ ಪಕ್ಕಕ್ಕೆ ಬಂದು ಬೆಟ್ಟು ತೋರಿಸುತ್ತ ''ಇವಳ ಮಗನಿಗೂ ಅವನ ಮಗಳಿಗೂ ಮದುವೆ....'' ಎಂದು ಹೇಳುತ್ತಿದ್ದಾಗಲೇ ಮುದುಕನೊಬ್ಬ ''ಹಾಗಲ್ಲ ಹೇಳಬೇಕಾದ್ದು ! ಅದು ಮದುವೆ ಅಲ್ಲ!'' ಎನ್ನುತ್ತಾ ಅವಳ

ಬಾಯನ್ನು ತನ್ನ ಕೈಯಿಂದ ಮುಚ್ಚಿ ಅವಳನ್ನು ದಬ್ಬಿಕೊಂಡು ಹೊರಕ್ಕೆ ಅಟ್ಟಿಬಿಟ್ಟು ಬಂದ. ಹೆಂಗಸರ ಬಾಯಿಗಳು ಇನ್ನಷ್ಟು ಎತ್ತರದ ದನಿಯಲ್ಲಿ ಕೂಗಾಡಿದವು. ಯಾರು ಯಾರಿಗಾದರೂ ಮದುವೆ ಆಯಿತೆ ಇಲ್ಲವೆ ಎಂಬುದೊಂದೂ ತಿಳಿಯಲಿಲ್ಲ. ನನಗೆ ಇವರ ನಡವಳಿಕೆಯನ್ನು ಕಂಡು ನಗು ತಡೆಯಲಾಗಲಿಲ್ಲ. ಈ ಮಧ್ಯೆ ಡಿಪಾರ್ಟ್ಮೆಂಟಿನ ಸಿಬ್ಬಂದಿಯೂ, ವಿದ್ಯಾರ್ಥಿಗಳೂ ಕಿಟಕಿ–ಬಾಗಿಲುಗಳನ್ನು ಅಡ್ಡಗಟ್ಟಿ ನಿಂತುಕೊಂಡು ತಮಾಷೆ ನೋಡಿ ನಗುತ್ತಿದ್ದರು.

ನನಗೆ ಏನು ತೋರಲಿಲ್ಲ. ಮೇಜನ್ನು ಬಲವಾಗಿ ಗುದ್ದಿ ಸೈಲೆನ್ಸ್ ಎಂದು ಕೂಗಿದೆ. ಗಂಡಸರ ಕೊರಲು ನಿಂತಿತು. ಇನ್ನೊಂದು ಸಲ ಅದೇ ಮಾತನ್ನು ಕೂಗಿ ಕೈಗಳನ್ನು ಜೋಡಿಸಿ. ''ತಾಯಂದಿರೇ, ದಯವಿಟ್ಟು ಒಂದೆರಡು ನಿಮಿಷಗಳಾದರೂ ತುಟಿಗಳನ್ನು ಬಿಗಿಹಿಡಿಯಿರಿ!'' ಎಂದು ಆಜ್ಞೆ ಮಾಡುವ ಧ್ವನಿಯಲ್ಲಿ ಹೇಳಿದೆ. ಸ್ವಲ್ಪ ತಹಬಂದಿಗೆ ಬಂದಿತು. ಅವರ ಪೈಕಿ ಮುದುಕನೊಬ್ಬನನ್ನು ಉದ್ದೇಶಿಸಿ ''ಸ್ವಾಮಿ, ಏನು ಹೇಳಿ?'' ಎಂದೆ.

''ಕಿಟ್ಟು ನನ್ನ ಸೊಸೆಯ ಭಾವನ ತಂಗಿಯ ಸೋದರ ಸೊಸೆಯ ಮಗಳ ಮಗ...''

'ವೇದ ಪುರುಷನ ಸುತನ ಸುತನ ಸಹೋದರನ' ಇತ್ಯಾದಿಯಂತೆ ತೋರಿತು. ''ಸ್ವಾಮಿ, ಕಿಟ್ಟುವಿಗೂ ನನಗೂ ಏನು ಸಂಬಂಧ ?'' ಎಂದೆ.

ಇನ್ನೊಬ್ಬ : ''ಅವನು ನಿಮ್ಮ ಶಿಷ್ಯ.''

ಮುತ್ತೈದೆ : ''ನನ್ನ ಅಳಿಯನ ತಮ್ಮನ ಎರಡನೇ ಹೆಂಡತಿಯ ಭಾವ ಮೈದುನನ ತಮ್ಮ.''

ನನಗೆ ಇನ್ನಷ್ಟು ತಬ್ಬಿಬ್ಬಾಗಿ ''ನೀವು ಹೆಂಗಸರು ಸ್ವಲ್ಪ ಸುಮ್ಮನಿರಿ !'' ಎಂದು ಗದರಿಸಿದೆ.

'' ನಿಮ್ಮ ಕಿಟ್ಟುವಿನ ಪೂರ್ತಿ ಹೆಸರೇನು ?''

ಪಾಟಿ : '' ಅವನನ್ನು ಕಿಟ್ಟು ಎಂದೇ ಮನೆಯಲ್ಲಿ ಕರೆಯುವುದು.''

''ನೀವು ಸುಮ್ಮನಿರುತ್ತೀರೋ ಇಲ್ಲವೋ ?''

ನಡುವಯಸ್ಸಿನವನನ್ನು ಕುರಿತು ''ಏನ್ರೀ ಅವನ ಹೆಸರು ? ಯಾವ ಕ್ಲಾಸು ?'' ಎಂದೆ.

ಅವನು ಇನ್ನೊಬ್ಬ ಹೆಂಗಸನ್ನು ನೋಡಿ ಸ್ವಲ್ಪ ಬೆದರುತ್ತ (ಆಕೆಯೂ ಬಿರುಗಣ್ಣು ಬಿಟ್ಟಿದ್ದಳು) ಎರಡು ಸಲ ಗಂಟಲೊಳಗೇ ಕೆನೆದು ''ಪಿ.ಎಸ್. ಕೃಷ್ಣಮೂರ್ತಿ, ಎಂ. ಎಸ್‌ಸಿ. ತರಗತಿ.''

''ಅವನು ಮೂರು ದಿನದಿಂದ ಕ್ಲಾಸಿಗೆ ಬಂದಿಲ್ಲವಲ್ಲಾ.''

ಮಡಿ 'ಪಾಟಿ' (ಹಿಂದೆ ಮಾತನಾಡಲೆಳಸಿದ್ದವಳು) : ''ಅಲ್ಲೇ ಸ್ವಾರಸ್ಯ ಇರೋದು !''

ಮುತ್ತೈದೆ : ''ಮುಚ್ಚೇಬಾಯಿ ! ನನ್ನ ಮೊಮ್ಮಗನ ವಿಷಯದಲ್ಲಿ ನೀನು ಬಾಯಿಹಾಕಬೇಡ!''

''ಕೃಷ್ಣಮೂರ್ತಿಗೆ ಏನಾಯಿತು ?''

ಹೆಂಗಸರೂ ಗಂಡಸರೂ ತಮ್ಮ ತಮ್ಮಲ್ಲಿಯೇ ಜಗಳ ಪ್ರಾರಂಭಿಸಿದರು. ನಾನು ತಿರುಗಿಯೂ ಸೈಲೆನ್ಸ್ ಕೂಗಿದೆ.

ಮುದಿ ಗಂಡಸರು : ''ನನ್ನ ಹೆಂಡತಿಯ ಸೋದರ ಮಾವನ ಮಗಳ ಹೆಸರು ಪಾರ್ವತಿ ಅಥವಾ ಪಾತಿ.''

''ಇದೇನ್ರೀ ಇದು ! ಕೃಷ್ಣಮೂರ್ತಿಗೆ ಏನಾಯಿತು ಎಂದರೆ ಇನ್ನಾರದೋ ಹೆಸರನ್ನು ಹೇಳುತ್ತಿದ್ದೀರಿ !''

ಮಡಿ 'ಪಾಟಿ' : ''ಅಲ್ಲೇ ಸ್ವಾರಸ್ಯ ಇರೋದು.''

ಇನ್ನೊಬ್ಬ ಅವಳನ್ನು ಹೊರಕ್ಕೆ ದಬ್ಬಿಕೊಂಡು ಹೋದ.

''ಪಾರ್ವತಿ ಯಾರು ?''

ಮಡಿ 'ಪಾಟಿ' ೨ : '' ಅವಳೇ ಕಿಟ್ಟುವನ್ನು ಕೆಡಿಸಿದ್ದು, ತಾಟಕಿ, ಶೂರ್ಪನಖಿ…''

ಪಕ್ಕದಲ್ಲಿದ್ದ ನಡುವಯಸ್ಕಳೊಬ್ಬಳು ಪಾಟಿಯ ಬಾಯನ್ನು ಎರಡು ಕೈಗಳಿಂದಲೂ ಮುಚ್ಚಿ ಹಿಡಿದಳು, ನನಗೆ ನಗು ತಡೆಯಲಾಗಲಿಲ್ಲ. ಹೊರಗೆ ನಿಂತಿದ್ದ ಗುಂಪನ್ನು ನೋಡಿದೆ. ಸಾಂದ್ರತೆ ಇಮ್ಮಡಿಯಾಗಿದ್ದುದಲ್ಲದೆ ಎಲ್ಲರೂ ಹಲ್ಲು ಕಿರಿಯುತ್ತಿದ್ದರು.

''ಕೇಳಿದ್ದಕ್ಕೆ ಮಾತ್ರ ಬದಲು ಹೇಳಿ ! ಪಾರ್ವತಿ ಯಾರು ?''

''ಅವಳೂ ನಿಮ್ಮ ಸ್ಟೂಡೆಂಟು. ಬಿ. ಎಸ್‌ಸಿ ಕ್ಲಾಸು.''

ರಿಜಿಸ್ಟರ್ ತೆಗೆದು ನೋಡಿದೆ, ಬಿ.ಎಸ್.ಸಿ. ಕೊನೆಯ ವರ್ಷ. ಅವಳೂ ಮೂರು ದಿನದಿಂದ ನಾಪತ್ತೆ. ಇದನ್ನು ತಿಳಿಸಿದೆ.

ಮಡಿ 'ಪಾಟಿ' : ''ಅಲ್ಲೇ ಸ್ವಾರಸ್ಯ ಇರೋದು !''

ಮುಂದಿನ ಕತೆಯನ್ನು ಊಹಿಸಿಕೊಂಡೆ. ಇಬ್ಬರೂ ಬುದ್ಧಿವಂತ ವಿದ್ಯಾರ್ಥಿಗಳು. ನಮಗೆಲ್ಲ ಪ್ರಿಯರಾಗಿದ್ದವರು. ''ಒಂದು ನಿಮಿಷ ಸದ್ದುಮಾಡದೆ ಇರಿ, ನಾನು ಬಂದುಬಿಡುತ್ತೇನೆ'' ಎಂದು ಬೆನ್ನು ತಿರುಗಿಸಿದ ಒಡನೆಯೇ ವಾಗ್ಯುದ್ಧ ಆರಂಭವಾಯಿತು. ಆ ಕ್ಲಾಸುಗಳಿಗೆ ಪಾಠ ಹೇಳುತ್ತಿದ್ದ ಸಹೋದ್ಯೋಗಿಗಳ ಬಳಿ ವಿಚಾರಿಸಿದೆ. ನನ್ನ ಊಹೆಯನ್ನು ಸಮರ್ಥಿಸಿದರು. ವಾಪಸು ಬರುವ ಹೊತ್ತಿಗೆ ವಾಗ್ಯುದ್ಧ ಕೈಯುದ್ಧಕ್ಕೆ ಎಡೆಗೊಡುತ್ತಿತ್ತು. ಒಬ್ಬಳು ನನ್ನ ಮೇಜಿನ ಮೇಲಿದ್ದ ಮೀಟರ್ ಸ್ಕೇಲನ್ನು ಕೈಲಿ ಹಿಡಿದುಕೊಂಡು ಹೆದರಿಸುತ್ತಿದ್ದಳು. ಮುದುಕನೊಬ್ಬ ನನ್ನ ಕುಕ್ರಿ (ಗೂರ್ಖರು ಉಪಯೋಗಿಸುವ ಅಲಗು ಕತ್ತಿ)ಯನ್ನು ಹಿಡಿದುಕೊಂಡಿದ್ದ. ಅವರಿಬ್ಬರ ಕೈಯಿಂದಲೂ ಆಯುಧಗಳನ್ನು ಕಿತ್ತುಕೊಂಡು ಗದರುಹಾಕಿದೆ.

‘‘ಕೃಷ್ಣಮೂರ್ತಿಯ ತಂದೆ–ತಾಯಂದಿರು ಇಲ್ಲಿದ್ದಾರೆಯೆ ? ಪಾರ್ವತಿಯ ತಂದೆ ತಾಯಂದಿರೂ ಇದ್ದಾರೆಯೆ ?’’

ಎದ್ದು ನಿಂತುಕೊಂಡರು. ‘‘ಇತರರೆಲ್ಲ ಹೋಗಿ ಪಕ್ಕದ ರೂಮಿನಲ್ಲಿರಿ !’’ ಎಂದೆ. ಯಾರೂ ಏಳಲೇ ಇಲ್ಲ. ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಇನ್ನೂ ಭದ್ರವಾಗಿ ಕುಳಿತುಕೊಂಡರು. ಅಟೆಂಡರುಗಳನ್ನು ಕರೆದು ‘‘ಈ ನಾಲ್ವರನ್ನು ಬಿಟ್ಟು ಉಳಿದವರನ್ನು ಹೊರಕ್ಕೆ ಎಬ್ಬಿಸಿಕೊಂಡು ಹೋಗಿ !’’ ಎಂದೆ. ಮನಸ್ಸಿಲ್ಲದೆ ಒಬ್ಬೊಬ್ಬರಾಗಿ ಎದ್ದು ಹೊರಟರು.

ಕೃಷ್ಣಮೂರ್ತಿಯ ತಂದೆ ತಾಯಂದಿರನ್ನು ವಿಚಾರಿಸಿದೆ. ‘‘ರಿಜಿಸ್ಟರ್ಡ ಮದುವೆ ಮಾಡಿಕೊಂಡರು ಎಂದು ಹೇಳುತ್ತಾರೆ’’ ಎಂದರು. ಪಾರ್ವತಿಯ ತಂದೆ ತಾಯಂದಿರನ್ನು ಕೇಳಿದೆ. ‘‘ದೇವಸ್ಥಾನದಲ್ಲಿ ಹಾರ ಬದಲಾಯಿಸಿಕೊಂಡರು ಎಂದು ಹೇಳುತ್ತಾರೆ. ನಮಗೂ ಸರಿಯಾಗಿ ತಿಳಿಯದು.’’

ಹಿಂಬದಿಯಿಂದ ಒಂದು ಕೂಗು : ಅವೆಲ್ಲ ಸಾಂಗವಾದ ಮದುವೆಯೆ ಅಲ್ಲ ಆ ! ಕಿಟ್ಟುನೂ ಪಾತೀನೂ ಗಂಡಹೆಂಡಿರೇ ಅಲ್ಲ ಆ !’’ ಆ ದಿಕ್ಕಿನಲ್ಲಿ ನೋಡಿದೆ, ಮುದಿ ‘ಪಾಟಿ’ಗಳಿಬ್ಬರೂ ಹೇಗೋ ಒಳಕ್ಕೆ ಬಂದುಬಿಟ್ಟಿದ್ದರು. ನನಗೆ ನಗು ಬಂದಿತಾದರೂ ತಾಳ್ಮೆ ಮೀರಿತು. ಅವರ ಬಳಿ ಹೋಗಿ ‘‘ಹೇಗೆ ಬಂದಿರಿ ಇಲ್ಲಿಗೆ ?’’ ಎಂದದ್ದಕ್ಕೆ ನನ್ನ ಬಾತ್ರೂಮನ್ನು ತೋರಿಸಿದರು ! ಬಾತ್ರೂಮಿನ ಹೊರಬಾಗಿಲಿಗಾಗಲಿ, ಒಳಬಾಗಿಲಿಗಾಗಲಿ ಅಗುಳಿ ಹಾಕಿರಲಿಲ್ಲವೆಂಬುದು ನೆಪಾಯಿತು. ನನಗೆ ನಗುವನ್ನು ತಡೆಯಲಾಗಲಿಲ್ಲ. ‘‘ಬಂದ ದಾರಿಯಲ್ಲೇ ಇವರನ್ನು ಹೊರಕ್ಕೆ ಕಳುಹಿಸಿ’’ ಎಂದು ಅಟೆಂಡರುಗಳಿಗೆ ಆಜ್ಞೆ ಕೊಟ್ಟೆ. ನನ್ನ ಕುರ್ಚಿಯ ಬಳಿ ಬಂದು ‘‘ಈಗ ನಾನೇನು ಮಾಡಬೇಕು ? ನಿಮ್ಮ ಸಮಸ್ಯೆಯನ್ನು ನನ್ನ ಬಳಿ ಏಕೆ ತಂದಿರಿ ?’’ ಎಂದೆ.

ತಾಯಂದಿರಿಬ್ಬರೂ ‘‘ಏನು ಹೀಗೆ ಕೇಳುತ್ತೀರಿ ? ಗುರುಗಳು ತಾನೆ ಶಿಷ್ಯರಿಗೆ ಬುದ್ಧಿವಾದ ಹೇಳಬೇಕು!’’ ಎಂದರು.

"ಏನು ಬುದ್ಧಿ ಹೇಳುವುದು ?" ಯಾವುದೋ ವಿಧದಲ್ಲಿ ಮದುವೆಯಾಗಿ ಹೋಯಿತು ಎನ್ನುತ್ತೀರಿ. "ದೀರ್ಘಕಾಲ ಸುಕವಾಗಿ ಬಾಳಲಿ ಎಂದು ತಾನೆ ಹರಸಬೇಕು? ಈಗ ಇನ್ನೇನು ಮಾಡುವುದಕ್ಕಾಗುತ್ತದೆ?

ಬಾಗಿಲಿಗೆ ಅಡಚಣೆಯಾಗಿದ್ದ ಗುಂಪಿನ ದಿಕ್ಕಿನಿಂದ : "ನೀನು ಗಂಡಸೇನಯ್ಯ ! ಇನ್ನೇನು ಮಾಡುವುದಕ್ಕೆ ಆಗುತ್ತದೆ ಎನ್ನುತ್ತೀಯಲ್ಲ! ಇಬ್ಬರನ್ನೂ ಕರೆದು ಕ್ಲಾಸಿನಲ್ಲಿ ನಿಲ್ಲಿಸಿ ಕಪಾಳಕ್ಕೆ ಬಿಗಿದು ಅವರನ್ನು ಬೇರ್ಪಡಿಸಿಸುವುದಕ್ಕೂ ಆಗುವುದಿಲ್ಲವೇನಯ್ಯ !"– ಮುತ್ತೈದೆಯ ಕೀರಲು ಕೊರಲು ಅದು. ಹೇಗೋ ಪಕ್ಕದ ರೂಮಿನಿಂದ ತಪ್ಪಿಸಿಕೊಂಡು ಬಂದು ನಿಂತಿದ್ದಳು.

ಇವರ ಸಮಸ್ಯೆ ಬಗೆಹರಿಯುವ ಹಾಗೆ ಕಾಣಲಿಲ್ಲ. ತಂದೆತಾಯಂದಿರನ್ನು ಕುರಿತು "ಯಾಕೆ ವಿರಸ, ಮನಸ್ತಾಪ? ಅದು ಅಂತರ್ಜಾತೀಯ ಸಂಬಂಧವೆ?" ಎಂದೆ.

ಒಬ್ಬ ತಂದೆ ಕೋಪದಿಂದ "ನಾವಿನ್ನೂ ಅಷ್ಟಕ್ಕೆ ಇಳಿದಿಲ್ಲ ಸಾರ್! ನಾವೆಲ್ಲ ಬೃಹಚ್ಚರಣ!"

"ಹಾಗಿದ್ದೂ ಯಾಕ್ರಿ ಈ ದಾಂಧಲೆ ?"

ಒಬ್ಬ ತಾಯಿ: "ಅದು ಹಾಗಲ್ಲ. ನಾವು (ಹೆಮ್ಮೆಯಿಂದ) ಅಷ್ಟಸಹಸ್ರ ಅವರು (ತಾತ್ಸಾರದಿಂದ) ಕಂಡ್ರಮಾಣಿಕ್ಯ !"

"ನೀವು ಮೇಲು, ಅವರು ಕೀಳು ಎಂದೆ ?"

ತಾಯಿ ಹೌದು ಎಂದೂ ಕೋಪದ ತಂದೆ ಅಲ್ಲ ಎಂದೂ ಕಾದಾಡಲಾರಂಭಿಸಿದರು. "ನನಗೇನೋ ನಿಮ್ಮ ಎರಡು ಪಂಗಡದವರಿಗೂ ವ್ಯತ್ಯಾಸವೇ ಕಾಣದು !" ಎಂದೆ. ಪಕ್ಕದ ರೂಮಿನಲ್ಲಿದ್ದ ಗಂಡಸರೂ ಹೆಂಗಸರೂ ಗುಂಪನ್ನು ಭೇದಿಸಿಕೊಂಡು ಒಳಗೆ ಬಂದು "ಹೌದು" "ಅಲ್ಲ"ಗಳ ಯುದ್ಧ ಆರಂಭಿಸಿದರು. ಒಬ್ಬ ಮುದಿ 'ಪಾಟಿ' ಏನೋ ಪಿಟಪಿಟಗುಟ್ಟುತ್ತಿದ್ದ ಮುದುಕನೊಬ್ಬನ ಬಳಿ ಹೋಗಿ ಅವನ ಕಿವಿ ಹಿಂಡಿದಳು. ಗುಂಪು ಉತ್ಸಾಹದಿಂದ ಕೂಗಿಕೊಂಡಿತು. ನನ್ನ ರೂಮು ರಣರಂಗವಾಗುತ್ತಿದ್ದುದನ್ನು ನೋಡಿ ನನಗೇ 'ಥತ್' ಎನ್ನಿಸಿತು. ಕೊನೆಯ ಮಾತನ್ನು ಹೇಳಿದೆ: "ನೀವೆಲ್ಲರೂ ವಯಸ್ಸಿನಲ್ಲಿ ನನಗಿಂತಲೂ ಹಿರಿಯರು. ಆದರೂ ನಿಮ್ಮ ನಡವಳಿಕೆ ಸಮರ್ಪಕವಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಈಗ ನಡೆದಿರುವುದು ಅಥವಾ ನಡೆಯಹೋಗುವುದು ನಿಮ್ಮ ನಿಮ್ಮ ಮನೆಗಳಿಗೆ ಸಂಬಂಧಿಸಿದ್ದು.ಅದಕ್ಕೂ ನನಗೂ ಸಂಬಂಧವಿಲ್ಲ. ಇನ್ನು ನೀವು ಇಲ್ಲಿಂದ ಹೊರಟುಹೋಗಿ. ಮತ್ತೆ ಕಾಲೇಜಿನೊಳಕ್ಕೆ ಕಾಲಿಡಬೇಡಿ." ಎರಡೂ ಕಪಿಗಳೂ ಒಬ್ಬರನ್ನೊಬ್ಬರು ಬೈದಾಡುತ್ತಲೇ ಹೊರಕ್ಕೆ ಹೋದರು. ಒಂದಿಪ್ಪತ್ತು ಹೆಜ್ಜೆ ಗುಂಪಾಗಿ ಹೋದಮೇಲೆ ಗಂಡಸರು ಮುಂದುಮುಂದಕ್ಕೆ ಹೋದರು. ಹೆಂಗಸರು ಹಿಂತಿರುಗಿ ನಿಂತುಕೊಂಡು ನನ್ನನ್ನು ಉದ್ದೇಶಿಸಿ ಕೈಗಳಿಂದ ಬಿರುಸಾಗಿ ಹಾವಭಾಗಳನ್ನು ತಿವಿಯುತ್ತ ವೃಂದಗಾನದಲ್ಲಿ "ನಿನ್ನ ತಲೆ ಪಟ್ಟಬೀಳಾ! ನಿನ್ನ ಪ್ಯಾಂಟು ಕಳಚಿಹೋಗಾ ! ನಿನ್ನ ಪೈಪು ಒಡೆದುಹೋಗಾ ! ನಿನ್ನ ಷೂ ಕಿತ್ತುಹೋಗಾ !" ಎಂದು ಬಾಯಿಗೆ ಬಂದಂತೆಲ್ಲ ಚರ್ವಿತ ಚರ್ವಣವಾಗಿ ಕೂಗುತ್ತಿದ್ದು ಸ್ವಲ್ಪ ಹೊತ್ತಾದ ಮೇಲೆ ಹೊರಟುಹೋದರು.

ಈ ಗುಂಪು ಘೋಷ ನಡೆಯುತ್ತಿದ್ದಾಗ ಪ್ರಿನ್ಸಿಪಾಲು ಅಲ್ಲಿ ಹಾದುಹೋದನಂತೆ. ತಮಾಷೆ ನೋಡುತ್ತಿದ್ದ ಗುಂಪನ್ನು ವಿಚಾರಿಸಿದನಂತೆ. ಅವರು ಏನು ಹೇಳಿದರೋ ! ಮಾರನೆಯ ದಿನ ನನ್ನ ರೂಮಿಗೆ ಬಂದು "ಏನ್ರೀ,

ಬೀದಿ ಹೆಂಗಸರ ಕೈಲಿ ಬೈಸಿಕೊಳ್ಳುವ ಸ್ಥಿತಿಗೆ ಇಳಿದುಬಿಟ್ಟಿರಲ್ರೀ! ನಿಮಗಂತೂ ಮಾನ ಮರ್ಯಾದೆಗಳಿಲ್ಲ, ಹೋಗಲಿ. ಕಾಲೇಜಿನ ಘನತೆ, ಗೌರವಗಳನ್ನೂ ಬಗೆಯುತ್ತಿದ್ದೀರಲ್ರೀ ! ಏನ್ರಿ ಮಾಡಿದಿರಿ ಅವರಿಗೆ?" ಎಂದು ಡಿಮ್ಯಾಂಡ್ ಮಾಡಿದ. ಕೊನೆಯ ವಾಕ್ಯವನ್ನು ಕೇಳಿದೊಡನೆಯೆ ತಡೆಯಲಾರದಷ್ಟು ನಗು ಉಕ್ಕಿ ಬಂದಿತು. ನಗುನಗುತ್ತಲೇ ನಿಜ ಸ್ಥಿತಿಯನ್ನು ತಿಳಿಸಿದೆ. ಅವನಿಗೂ ನಗುವನ್ನು ತಡೆಯಲಾಗಲಿಲ್ಲ. ಕೊನೆಗೆ "ಇಂಥ ಸಂದರ್ಭಗಳಲ್ಲಿ ಸಿಕ್ಕಿಹಾಕಿಕೊಳ್ಳುವುದು ನಿಮಗೇ ಸ್ಪೆಷಲ್ ಆದ Knack ಕಣ್ರಿ !""ಎಂದು ತಲೆ ಚಚ್ಚಿಕೊಳ್ಳುತ್ತಾ ಹೊರಟುಹೋದ.

# 4 ಸಂಕೀರ್ಣ


| | | |
|---|---|---|
| 4.1 ಹದಿಹರೆಯ–ಸವಿಸಮಯ | - ಡಾ. ವಸುಂಧರಾ ಭೂಪತಿ | 70 |
| 4.2 ಸಕಲವೂ ಸ್ಮಾರ್ಟ್ | - ಟಿ.ಜಿ. ಶ್ರೀನಿಧಿ | 75 |
| 4.3 ಕುಲಕುಲ ಎಂದು ನಾಶವಾದ ಕುಲಗೇಡಿಗಳು | - ಪಿ. ಲಂಕೇಶ್ | 81 |
| 4.4 (ಓದುಪಠ್ಯ) ನಾನು,ಹುಡುಗ ಮತ್ತು ಕಾಲ | - ಪ್ರತಿಭಾನಂದಕುಮಾರ್ | 85 |

# 4 ಸಂಕೀರ್ಣ

## ಆಶಯ:

ಹದಿಹರೆಯ ಸಮಸ್ಯೆಗಳು–ಸವಾಲು –ಅರಿವು. ಮನುಷ್ಯನ ಬೆಳವಣಿಗೆಯಲ್ಲಿ ಹದಿಹರೆಯದ ಅವಧಿಯು ಅತ್ಯಂತ ತೀವ್ರಗತಿಯಲ್ಲಿರುತ್ತದೆ. ಮನೋದೈಹಿಕ ಬದಲಾವಣೆಗಳ ಬಗ್ಗೆ ಹದಿಹರೆಯದವರಲ್ಲಿ ತೀವ್ರ ಕುತೂಹಲದ ಜೊತೆಗೆ ಭೀತಿ–ಆತಂಕವೂ ಇರುತ್ತದೆ. ಈ ಅವಧಿಯಲ್ಲಿ ಸೂಕ್ತ ತಿಳಿವಳಿಕೆ ಮಾಹಿತಿಯ ಅಗತ್ಯವಿರುತ್ತದೆ. ಹದಿಹರೆಯದಲ್ಲಿ ಸಾಮಾನ್ಯವಾಗಿ ಕಾಡುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಅರಿವು ನೀಡುವುದು ಅತ್ಯಂತ ಅವಶ್ಯಕ.

ಮಾಹಿತಿ ತಂತ್ರಜ್ಞಾನ ಕ್ಷೇತ್ರ ಬೆಳೆದಂತೆ ನಮ್ಮ ಸುತ್ತಲಿನ ಜಗತ್ತಿನಲ್ಲಿ ಅಗಾಧವಾದ ಬದಲಾವಣೆಗಳಾಗುತ್ತಿವೆ. ನಾವು ದಿನನಿತ್ಯವೂ ಬಳಸುವ ಹಲವು ಸಾಧನಗಳು ಸ್ಮಾರ್ಟ್ ಆಗುತ್ತಿರುವುದು ಈ ಬದಲಾವಣೆಯ ಒಂದು ಮುಖ. ಯಾವುದೇ ವಸ್ತು ಸ್ಮಾರ್ಟ್ ಆಗುವುದು ಎಂದರೆ ಏನು? ಸ್ಮಾರ್ಟ್ ಸಾಧನಗಳು ಏನನ್ನೆಲ್ಲ ಸಾಧ್ಯವಾಗಿಸುತ್ತವೆ? ಈ ಬದಲಾವಣೆಗಳಿಂದಾಗಿ ಮುಂದೆ ಇನ್ನೂ ಏನೆಲ್ಲ ಸಾಧ್ಯವಾಗಬಹುದು ಎನ್ನುವುದನ್ನು ಸಂಕ್ಷಿಪ್ತವಾಗಿ ಪರಿಚಯಿಸುವುದು ಸಕಲವೂ ಸ್ಮಾರ್ಟ್ ಲೇಖನದ ಉದ್ದೇಶ.

ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ

ಹುಟ್ಟಿದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜಾ

# ೪.೧ ಹದಿಹರೆಯ – ಸವಿಸಮಯ

**ಡಾ.ವಸುಂಧರಾ ಭೂಪತಿ**

ಹದಿಹರೆಯ ಬಾಲ್ಯ ಹಾಗೂ ಯೌವನದ ನಡುವಿನ ಕಾಲ. ಹುಡುಗಿಯಲ್ಲಿ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುವ ಕಾಲ. ಬಾಲ್ಯದ ತುಂಟತನ ತಳೆದು ಜವಾಬ್ದಾರಿ ನಿಧಾನವಾಗಿ ಅಡಿಯಿಡುತ್ತದೆ. ಮೊದಲ ಋತುಸ್ರಾವಕ್ಕೆ ದೇಹ ಸಜ್ಜಾಗುತ್ತದೆ. ದೇಹದ ಬೆಳವಣಿಗೆ ತೀವ್ರವಾಗಿ ಮುಂದುವರಿಯುತ್ತದೆ. ಎತ್ತರವಾಗುವುದಲ್ಲದೆ ಮೈ ಕೈ ತುಂಬಿಕೊಂಡು ಬೆಳೆಯುತ್ತಾಳೆ ಹುಡುಗಿ. ಸ್ತನಗಳ ಬೆಳವಣಿಗೆ ಗೋಚರಿಸುತ್ತದೆ. ನಿತಂಬದ ಮೇಲೆ ಕೊಬ್ಬು ಶೇಖರವಾಗಿ ದೇಹದ ಉಬ್ಬು-ತಗ್ಗುಗಳು ಎದ್ದು ಕಾಣತೊಡಗುತ್ತವೆ. ಹದಿಹರೆಯದ ಬೆಳವಣಿಗೆಗೆ ಹಾರ್ಮೋನುಗಳು ಬಹುಮುಖ್ಯ ಕಾರಣ. ಇವನ್ನು ನಮ್ಮ ದೇಹದಲ್ಲಿರುವ ನಿರ್ನಾಳ ಗ್ರಂಥಿಗಳು ಉತ್ಪಾದಿಸುತ್ತವೆ. ದೇಹವು ಬೆಳವಣಿಗೆಯ ಹಂತದಲ್ಲಿರುವಾಗ ಐಜಿಎಫ್-೧ (ಇನ್ಸುಲಿನ್ ಲೈಕ್ ಗ್ರೋತ್ ಫ್ಯಾಕ್ಟರ್) ಎಂಬ ರಾಸಾಯನಿಕ ವಸ್ತು ಉತ್ಪಾದನೆಯಾಗುತ್ತದೆ. ಹುಡುಗಿಯಲ್ಲಿ ಪ್ರಥಮ ಋತುಸ್ರಾವವು ೧೨ ರಿಂದ ೧೬ ವರ್ಷಗಳಲ್ಲಿ ಕಂಡುಬರುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಉತ್ತಮ ಬೆಳೆವಣಿಗೆಯಿರುವ ಹುಡುಗಿಯರು ೯ರಿಂದ ೧೦ಕ್ಕೆ ಋತುಮತಿಯರಾಗಿಬಿಡುತ್ತಾರೆ.

ಚಿಕ್ಕವಯಸ್ಸಿಗೆ ಋತುಮತಿಯರಾಗುವುದಕ್ಕೆ ಕಾರಣಗಳೆಂದರೆ ಅನುವಂಶೀಯತೆ, ಪೌಷ್ಠಿಕ ಆಹಾರ ಸೇವನೆ, ಬೊಜ್ಜು, ದೈಹಿಕ ಶ್ರಮ ಇಲ್ಲದಿರುವುದು, ರಾಸಾಯನಿಕಗಳು ಮುಖ್ಯವಾದವುಗಳು. ಹೊಸದರಲ್ಲಿ ಋತುಸ್ರಾವ(ಮುಟ್ಟು) ಪ್ರತಿತಿಂಗಳು ಸರಿಯಾಗಿ ಆಗದಿರಬಹುದು. ಸಾಮಾನ್ಯವಾಗಿ ಋತುಸ್ರಾವದ ಅವಧಿ ೨೧ರಿಂದ ೩೫ ದಿನಗಳು. ಋತುಸ್ರಾವ ಕಾಲಕ್ರಮೇಣ ಸರಿಯಾಗಿ ಆಗುತ್ತದೆ. ಅಲ್ಲದೆ ಸ್ರಾವವು ಎಲ್ಲರಲ್ಲಿ ಒಂದೇ ರೀತಿಯಲ್ಲಿರುವುದಿಲ್ಲ. ಕೆಲವರಲ್ಲಿ ೩ ದಿನವಿದ್ದರೆ ಮತ್ತೆ ಕೆಲವರಲ್ಲಿ ೭ ರಿಂದ ೮ ದಿನಗಳಿರಬಹುದು. ದೈಹಿಕ ಬೆಳವಣಿಗೆಯೊಂದಿಗೆ ಮಾನಸಿಕ ಬೆಳವಣಿಗೆ ಸಹ ಆಗುತ್ತಿರುತ್ತದೆ. ಮಾನಸಿಕ ತುಮುಲ, ಗಾಬರಿ, ಗೊಂದಲಗಳು ಹುಡುಗಿಯರಲ್ಲಿ ಕಾಣಿಸಿಕೊಳ್ಳುತ್ತವೆ. ಗೆಳತಿಯರ ಕಡೆಗೆ ಹೆಚ್ಚು ಆಕರ್ಷಿತರಾಗುತ್ತಾರೆ. ತಾಯಿಗಿಂತ ಗೆಳತಿಯೇ ಹೆಚ್ಚು ಆತ್ಮೀಯಳೆನಿಸುತ್ತಾಳೆ. ನಾಚಿಕೆ, ಸಂಕೋಚ, ಸೂಕ್ಷ್ಮತೆ, ಗಂಭೀರತೆ, ಉತ್ಸುಕತೆ, ಕುತೂಹಲ, ಕಲ್ಪನೆ, ಏಕಾಂಗಿತನ ಎಲ್ಲವೂ ಏಕಕಾಲದಲ್ಲಿ ಮೂಡುತ್ತವೆ. ಇದರಿಂದ ಹುಡುಗರೆಡೆಗೆ ಆಕರ್ಷಿತರಾಗುವುದು ಸಹಜ.

ಪೌಷ್ಟಿಕ ಆಹಾರ : ಬೇಳೆಕಾಳುಗಳು, ಸೊಪ್ಪು ತರಕಾರಿ, ಹಣ್ಣುಗಳು, ಹಾಲು, ಮೊಸರು, ತುಪ್ಪ ಎಲ್ಲವನ್ನು ಒಳಗೊಂಡಿರುವ ಪುಷ್ಟಿಕರ ಆಹಾರ ಅತ್ಯಂತ ಅವಶ್ಯಕ. ಇತ್ತೀಚಿನ ದಿನಗಳಲ್ಲಿ ಹುಡುಗಿಯರು

ದಪ್ಪಗಾಗುತ್ತೇವೆಂದು ತುಪ್ಪ ತಿನ್ನುವುದನ್ನೇ ಬಿಟ್ಟಿದ್ದಾರೆ. ದಿನಕ್ಕೆ ಒಂದು ಚಮಚ ತುಪ್ಪದಿಂದ ಖಂಡಿತ ದಪ್ಪವಾಗುವುದಿಲ್ಲ. ತುಪ್ಪ ಜೀರ್ಣಶಕ್ತಿಗೆ, ಚರ್ಮದ ಕಾಂತಿಗೆ ಬುದ್ಧಿಶಕ್ತಿಗೆ ಬೇಕೇ ಬೇಕು.

**ವ್ಯಾಯಾಮ:** ಕ್ರಮಬದ್ಧ ವ್ಯಾಯಾಮ ಇರಬೇಕು, ಯಾವುದಾದರೊಂದು ಕ್ರೀಡೆಯಲ್ಲಿ ತೊಡಗಿಕೊಳ್ಳುವುದು, ಯೋಗಾಭ್ಯಾಸ, ಜಾಗಿಂಗ್ ಮಾಡುವುದು ಒಳ್ಳೆಯದು.

**ಮಾನಸಿಕ ಒತ್ತಡ ನಿಭಾಯಿಸುವುದು:** ಮಾನಸಿಕ ಪ್ರಶಾಂತತೆಗೆ ಸ್ನೇಹ, ನಗು ಮತ್ತು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ನಗು ಆತಂಕವನ್ನು ಕಡಿಮೆ ಮಾಡುವುದು, ಮುಗುಳ್ನಗೆಯ ಮುಖ ಸಂತೋಷ ಮತ್ತು ಶಾಂತಿಯನ್ನು ಅಭಿವ್ಯಕ್ತಗೊಳಿಸುವುದರಿಂದ ಸದಾ ನಮ್ಮ ಮುಖದಲ್ಲಿ ನಗು ಎಂಬ ಒಡವೆ ಧರಿಸಿರಬೇಕು.

**ಕೀಳರಿಮೆ:** ಸಾಮಾನ್ಯವಾಗಿ ಹದಿಹರೆಯದಲ್ಲಿ ಬಣ್ಣ, ರೂಪು, ಎತ್ತರದ ಬಗ್ಗೆ ಕೀಳರಿಮೆ ಹುಟ್ಟಿಕೊಳ್ಳುತ್ತದೆ. ನಿಮ್ಮನ್ನು ನೀವು ಪ್ರೀತಿಸುವುದನ್ನು ಕಲಿಯಬೇಕು. ರೂಪು ಹೇಗಿದೆಯೋ ಹಾಗೆಯೇ ಅದನ್ನು ಒಪ್ಪಿಕೊಳ್ಳಬೇಕು. ಕಪ್ಪು ಬಣ್ಣದ ಬಗ್ಗೆ ಕೀಳರಿಮೆ ಬೇಡ, ಬೆಳ್ಳಗಾಗಲು, ಎತ್ತರವಾಗಲು ಯಾವುದೇ ಔಷಧಿಯಿಲ್ಲ. ಬಣ್ಣ, ರೂಪು, ಎತ್ತರಗಳಿಗೆ ವಂಶವಾಹಿಗಳೇ ಕಾರಣ. ಆದ್ದರಿಂದ ಅದಕ್ಕಾಗಿ ಹಣ, ಸಮಯ, ಶಕ್ತಿ ವ್ಯಯ ಮಾಡಿಕೊಳ್ಳಬೇಡಿ.

**ಮೊಡವೆ :** ಹರೆಯದಲ್ಲಿ ಕೆಲವರಿಗೆ ಮೊಡವೆಗಳ ಕಾಟ ವಿಪರೀತ. ಇಷ್ಟು ಕಾಲ ಅಂದವಾಗಿದ್ದ ಮುಖಕ್ಕೆ ಒಂದೆರಡು ಗುಳ್ಳೆಗಳು ಕಾಣಿಸಿಕೊಂಡ ಕೂಡಲೇ 'ಆತಂಕ' ಶುರುವಾಗುತ್ತದೆ. ಸದಾ ಕನ್ನಡಿಯ ಮುಂದೆ ನಿಂತು ಗುಳ್ಳೆಗಳನ್ನು ಜಿಗುಟಿಕೊಳ್ಳುವುದೊಂದು ಕೆಲಸವಾಗುತ್ತದೆ. ದಿನಕ್ಕೆ ಮೂರ್ನಾಲ್ಕು ಬಾರಿ ಬೆಚ್ಚಗಿನ ನೀರಿನಲ್ಲಿ ಮುಖ ತೊಳೆಯಬೇಕು. ಹೆಚ್ಚು ಕ್ಷಾರಯುಕ್ತ ಸಾಬೂನಿನ ಬಳಕೆ ಬೇಡ. ಪುದಿನಾ ಮತ್ತು ಅರಿಶಿನ ಬೆರೆಸಿ ಅರೆದು ಲೇಪಿಸಿ ಅರ್ಧಗಂಟೆ ಬಿಟ್ಟು ಮುಖ ತೊಳೆದುಕೊಳ್ಳಬೇಕು. ಜೇಷ್ಠಮಧು, ಬಜೆ, ಮಂಜಿಷ್ಟ ಪ್ರತಿಯೊಂದನ್ನು ೧೦ ಗ್ರಾಂ ತೆಗೆದುಕೊಂಡು ಕುಟ್ಟಿ ಪುಡಿ ಮಾಡಿಕೊಳ್ಳಬೇಕು. ಇದನ್ನು ನೀರಿನಲ್ಲಿ ಬೆರೆಸಿ ಮುಖಕ್ಕೆ ಹಚ್ಚಿ ಅರ್ಧಗಂಟೆ ಬಿಟ್ಟು ಮುಖ ತೊಳೆಯಬೇಕು. ಮುಖ ತೊಳೆಯಲು ಕಡಲೆಹಿಟ್ಟು ಬಳಸುವುದು ಉತ್ತಮ.

**ಬಾಯಿಯ ದುರ್ಗಂಧ :** ಕೆಲವರಲ್ಲಿ ಬಾಯಿಯಿಂದ ಕೆಟ್ಟ ವಾಸನೆ ಬರುತ್ತಿರುತ್ತದೆ. ಹಲ್ಲಿನ ತೊಂದರೆ, ಅಸಿಡಿಟಿ, ಮಲಬದ್ಧತೆಯ ತೊಂದರೆಗಳುಂಟಾದಾಗ ಚಿಕಿತ್ಸೆ ಪಡೆಯಬೇಕು. ದಾಲ್ಚಿನ್ನಿ ಇಲ್ಲವೆ ಏಲಕ್ಕಿಯನ್ನು ಬಾಯಿಯಲ್ಲಿ ಹಾಕಿ ಅಗಿಯಬೇಕು.

**ಮುಖದ ರೋಮಗಳಿಗೆ :** ರೋಮಗಳ ಬೆಳವಣಿಗೆಯೂ ಕೆಲವರಲ್ಲಿ ಅಧಿಕ, ಹಾರ್ಮೋನಿನ ಕಾರಣದಿಂದ ಮತ್ತು ಪಿ.ಸಿ.ಒ.ಡಿ. ಸಮಸ್ಯೆ ಇರುವವರಲ್ಲಿ ರೋಮಗಳ ಬೆಳವಣಿಗೆ ಹೆಚ್ಚು. ಬನ್ನಿಮರದ ಕಾಯಿಯನ್ನು ನೀರಿನಲ್ಲಿ ತೇಯ್ದು ಲೇಪಿಸುವುದರಿಂದ ರೋಮಗಳ ಬೆಳವಣಿಗೆ ತಗ್ಗುತ್ತದೆ.

**ರಕ್ತಹೀನತೆ :** ಅನೇಕ ಹುಡುಗಿಯರಲ್ಲಿ ರಕ್ತಹೀನತೆ ಅತ್ಯಂತ ಸಾಮಾನ್ಯ ಸಮಸ್ಯೆ. ಕೆಲವರಲ್ಲಿ ಋತುಚಕ್ರದ ಸಮಯದಲ್ಲಿ ಅಧಿಕ ರಕ್ತಸ್ರಾವವಾಗುವುದರಿಂದ ಬಹುಬೇಗ ರಕ್ತಹೀನತೆ ಉಂಟಾಗುತ್ತದೆ. ಆಹಾರದಲ್ಲಿ ಪ್ರತಿದಿನ ಸೊಪ್ಪುಗಳು, ಹಣ್ಣುಗಳು, ತರಕಾರಿ ಸೇವಿಸಬೇಕು. ದಿನಕ್ಕೊಮ್ಮೆ ಒಂದು ಲೋಟ ಹಾಲಿಗೆ ಎರಡು ಚಮಚ ಜೇನುತುಪ್ಪ ಬೆರೆಸಿ ಸೇವಿಸಬೇಕು. ಖರ್ಜೂರ, ಒಣದ್ರಾಕ್ಷಿ ಸೇವನೆ ಕೂಡ ಒಳ್ಳೆದು. ನುಗ್ಗೆಸೊಪ್ಪಿನ ರಸ ಮತ್ತು ಜೇನುತುಪ್ಪ ಸೇವಿಸಬೇಕು.

**ಅನಿಯಮಿತ ರಕ್ತಸ್ರಾವ :** ಕೆಲವರಲ್ಲಿ ಋತುಸ್ರಾವ ಎರಡು ಮೂರು ತಿಂಗಳಿಗೊಮ್ಮೆ ಬರುತ್ತದೆ. ಅಂತಹವರು ಎಳ್ಳು, ಹಿಪ್ಪಲಿ, ಭಾರಂಗಿ, ಮೆಣಸು, ಶುಂಠಿ ಸಮಭಾಗ ಪುಡಿ ಮಾಡಬೇಕು. ಒಂದು ಚಮಚದಷ್ಟು ಪುಡಿಯನ್ನು ಬೆಲ್ಲದೊಂದಿಗೆ ಬೆರೆಸಿ ಬೆಳಗ್ಗೆ ಖಾಲಿಹೊಟ್ಟೆಯಲ್ಲಿ ಸೇವಿಸಬೇಕು. ಲೋಳೆರಸದ ತಿರುಳನ್ನು ಬೆಲ್ಲದೊಂದಿಗೆ ಬೆರೆಸಿ ತಿನ್ನಬೇಕು.

**ಅತಿ ರಕ್ತಸ್ರಾವ :** ಮಾಸಿಕ ಸ್ರಾವದ ಸಮಯದಲ್ಲಿ ೫ ರಿಂದ ೭ ದಿನಗಳಗಂತ ಹೆಚ್ಚು ಕಾಲ ಸ್ರಾವವಾಗುತ್ತಿದ್ದಲ್ಲಿ ಮತ್ತು ಎರಡು ಋತುಚಕ್ರದ ಮಧ್ಯೆ ಅಂದರೆ ಮುಟ್ಟಾದ ೧೫ ದಿನಗಳಲ್ಲಿಯೇ ಮತ್ತೆ ಸ್ರಾವ ಆರಂಭವಾಗುತ್ತಿದ್ದರೆ ಅಲಕ್ಷ್ಯ ಮಾಡಬಾರದು.

ಉತ್ತರಾಣಿಯ ರಸವನ್ನು ೪ ಚಮಚದಷ್ಟು ಜೇನುತುಪ್ಪದಲ್ಲಿ ಬೆರೆಸಿ ದಿನಕ್ಕೆರಡು ಬಾರಿ ಖಾಲಿಹೊಟ್ಟೆಯಲ್ಲಿ ೧೫ ರಿಂದ ೨೧ ದಿನ ಸೇವಿಸಬೇಕು. ೪ ಚಮಚ ಆಡುಸೋಗೆ ರಸವನ್ನು ಜೇನುತುಪ್ಪದೊಂದಿಗೆ ದಿನಕ್ಕೆರಡು ಬಾರಿ ೧೫ ದಿನ ಸೇವಿಸಬೇಕು. ಈ ಸಮಯದಲ್ಲಿ ಗಂಜಿ, ಪಾಯಸಗಳ ಸೇವನೆ ಮಾಡಿದಲ್ಲಿ ಉತ್ತಮ ಫಲಿತಾಂಶ ದೊರೆಯುತ್ತದೆ.

**ಮುಟ್ಟಿನ ಹೊಟ್ಟೆನೋವು :** ಋತುಸ್ರಾವಕ್ಕೆ ಮುಂಚೆ ಮತ್ತು ಸ್ರಾವ ಆರಂಭವಾದ ನಂತರ ಹೊಟ್ಟೆನೋವನ್ನು ಅನುಭವಿಸದಿರುವ ಹುಡುಗಿಯರೇ ಬಹಳ ಕಡಿಮೆ. ಸಾಮಾನ್ಯವಾಗಿ ಬಹುತೇಕರಲ್ಲಿ ಸ್ವಲ್ಪ ಮುಟ್ಟಿನ ಹೊಟ್ಟೆನೋವು ಕಾಣಿಸಿಕೊಳ್ಳುತ್ತದೆ. ಕೆಳಹೊಟ್ಟೆ, ಸೊಂಟ, ಕಾಲುಗಳಲ್ಲಿ ಸೆಳೆತ ಹುಟ್ಟಿಕೊಳ್ಳುತ್ತದೆ. ಕೆಲವರಲ್ಲಿ ಮುಂಚೆಯೇ ನೋವು ಕಾಣಿಸಿಕೊಂಡು ಸ್ರಾವ ಆರಂಭವಾದ ನಂತರ ತಂತಾನೇ ಕಡಿಮೆಯಾಗುತ್ತದೆ. ಇನ್ನು

ಕೆಲವರಲ್ಲಿ ಋತುಸ್ರಾವದ ಆರಂಭದ ದಿನ ಮಾತ್ರ ನೋವಿನ ತೀವ್ರತೆಯಿದ್ದು ನಂತರ ಕಡಿಮೆಯಾಗುತ್ತದೆ. ಕೆಲವೊಮ್ಮೆ ಅಪರೂಪಕ್ಕೆ ಹೊಟ್ಟೆನೋವು, ತಲೆಸುತ್ತು, ವಾಂತಿ, ಮಲಬದ್ಧತೆ, ಎದೆಬಿಗಿತದಂತಹ ಸಮಸ್ಯೆಗಳು ಕಂಡುಬರುವುದು. ಇಂದಿನ ಬದಲಾದ ಜೀವನ ಶೈಲಿಯಲ್ಲಿ ವ್ಯಾಯಾಮದ ಅಭಾವದಿಂದಾಗಿ ಈ ಹೊಟ್ಟೆನೋವು ಕಂಡುಬರುತ್ತದೆ. ಕೆಲವರಲ್ಲಿ ಮಾನಸಿಕ ಖಿನ್ನತೆ, ಆತಂಕಗಳಿದ್ದಲ್ಲಿಯೂ ಈ ತೊಂದರೆ ಕಾಣಿಸಿಕೊಳ್ಳುತ್ತದೆ.

ಮುಟ್ಟಿನ ಸಮಯದಲ್ಲಿ ಕಡಲೆಕಾಳು ಗಾತ್ರದ ಇಂಗನ್ನು ತುಪ್ಪದಲ್ಲಿ ಹುರಿದು ಬಿಸಿನೀರಿನಲ್ಲಿ ಮೂರು ಬಾರಿ ಸೇವಿಸಬೇಕು. ಮಾಸಿಕ ಸ್ರಾವ ಆರಂಭವಾಗುವ ಏಳುದಿನಗಳ ಮುಂಚೆಯೇ ಶುಂಠಿ, ಮೆಣಸು, ಹಿಪ್ಪಲಿ(ತ್ರಿಕಟು) ಸಮಭಾಗ ಪುಡಿ ಮಾಡಿಟ್ಟುಕೊಂಡು ದಿನಕ್ಕೆರಡು ಬಾರಿಯಂತೆ ಒಂದು ಚಮಚ ತುಪ್ಪದಲ್ಲಿ ಬೆರೆಸಿ ಸೇವಿಸಿ, ಬಿಸಿನೀರು ಕುಡಿಯಬೇಕು.

**ತಲೆಹೊಟ್ಟು :** ಎರಡು ದಿನಗಳಿಗೊಮ್ಮೆ ತಲೆಗೆ ಸ್ನಾನ ಮಾಡಬೇಕು. ವಾರಕ್ಕೊಮ್ಮೆ ಮೆಂತ್ಯೆಸೊಪ್ಪು, ಕರಿಬೇವು, ನೆಲ್ಲಿಕಾಯಿ ಪುಡಿ ಸೇರಿಸಿ ತಲೆಗೆ ಹಚ್ಚಿಕೊಂಡು ಒಂದು ಗಂಟೆ ಬಿಟ್ಟು ಸ್ನಾನ ಮಾಡಬೇಕು.

ಹದಿಹರೆಯದಲ್ಲಿ ಸಾವಿರಾರು ಪ್ರಶ್ನೆಗಳು, ಸಮಸ್ಯೆಗಳು ಕಾಡುತ್ತಿರುತ್ತವೆ. ಅವುಗಳನ್ನು ನಿಭಾಯಿಸಲು ಜೀವನ ಕೌಶಲ್ಯಗಳನ್ನು ಕಲಿಯುವುದು ಅಗತ್ಯ. ಸಮಯ, ಸಂದರ್ಭಕ್ಕೆ ತಕ್ಕಂತೆ ಪ್ರತಿದಿನ ಎಲ್ಲವನ್ನೂ ಎದುರಿಸಬೇಕಾಗುತ್ತದೆ. ಅಲ್ಲದೆ ಆಕಸ್ಮಿಕವಾಗಿ ಎದುರಿಸಬೇಕಾಗಿ ಬರುವ ವಿಪತ್ತುಗಳಿಗೆ ಯಾವ ರೀತಿ ಸ್ಪಂದಿಸಬೇಕು ಮತ್ತು ಪರಿಣಾಮಕಾರಿಯಾಗಿ ಎದುರಿಸಬೇಕು ಎಂಬುದೇ ಜೀವನ ಕೌಶಲ್ಯ. ಪ್ರಸ್ತುತ ವಿಶ್ವದಲ್ಲಿರುವ ಯುವಜನತೆಯ ಸಂಖ್ಯೆ ಅಂದಾಜು ಒಂದೂವರೆ ಲಕ್ಷ ಶತಕೋಟಿ. ಇವರು ೧೦ ರಿಂದ ೨೪ ವರ್ಷ ವಯೋಮಿತಿಯವರು. ಇವರಲ್ಲಿ ಶೇಕಡಾ ೮೫ ರಷ್ಟು ಅಭಿವೃದ್ಧಿಹೊಂದುತ್ತಿರುವ ಭಾರತದಂತಹ ರಾಷ್ಟ್ರದಲ್ಲೇ ಇದ್ದಾರೆ. ಸುಮಾರು ೭೩ ದಶಲಕ್ಷ ಹದಿಹರೆಯದವರು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ದುಡಿಯುತ್ತಿದ್ದಾರೆ. ವಿಶ್ವದಾದ್ಯಂತ ಶೇ. ೧೦ ರಷ್ಟು ಜನನಗಳು ಹದಿಹರೆಯದ ಹುಡುಗಿಯರಿಂದ ಆಗುತ್ತವೆ. ಲೈಂಗಿಕ ಸಂಬಂಧದ ತಿಳುವಳಿಕೆ, ಕುತೂಹಲ, ಲೈಂಗಿಕ ಸಂಪರ್ಕದಿಂದ ಹರಡುವ ಕಾಯಿಲೆಗಳು, ಲೈಂಗಿಕ ಕಿರುಕುಳ, ಬೇಡದ ಗರ್ಭಧಾರಣೆ ಇಂತಹ ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಜೀವನ ಕೌಶಲ್ಯದ ಶಿಕ್ಷಣ ಶಾಲೆಯಿಂದಲೇ, ಶಿಕ್ಷಕರಿಂದಲೇ ಆರಂಭವಾಗಬೇಕು. ಹದಿಹರೆಯ ಹೊಸಕನಸುಗಳು ಹುಟ್ಟುಹಾಕುವ, ಜವಾಬ್ದಾರಿಯುತ ಹೆಣ್ಣಾಗಿ ರೂಪುಗೊಳ್ಳುವಲ್ಲಿ ಸಹಾಯಕವಾಗಬೇಕೇ ಹೊರತು ಸಮಸ್ಯೆಗಳ ಆಗರವಾಗಬಾರದು.

# 4.2 ಈಗ ಸಕಲವೂ ಸ್ಮಾರ್ಟ್

**– ಟಿ. ಜಿ. ಶ್ರೀನಿಧಿ**

ಚೂಟಿಯಾಗಿರುವ ಮಕ್ಕಳನ್ನು ಸ್ಮಾರ್ಟ್ ಎನ್ನುತ್ತಾರಲ್ಲ, ಕೆಲ ವರ್ಷಗಳ ಹಿಂದಿನವರೆಗೆ ಈ ವಿಶೇಷಣ ನಮಗೆ ಪರಿಚಯವಿದ್ದದ್ದು ಅದೊಂದು ಅರ್ಥದಲ್ಲಿ ಮಾತ್ರವೇ. ಜೀವವಿಲ್ಲದ ವಸ್ತುಗಳೂ ಚೂಟಿಯಾಗಿರಬಹುದು ಎಂಬ ವಿಷಯ ಗೊತ್ತಾಗಿದ್ದು ಬಹುಶಃ ಸ್ಮಾರ್ಟ್ ಫೋನ್ ಎಂಬ ಹೊಸ ಸಾಧನ ಸುದ್ದಿಯಾದಾಗಲೇ ಇರಬೇಕು.

ಅದಾಗಿ ಕೆಲವೇ ವರ್ಷಗಳಲ್ಲಿ ನಾವಿಂದು ಸ್ಮಾರ್ಟ್ ಫೋನಿನ ಜೊತೆಗೆ ಸ್ಮಾರ್ಟ್ ಕಾರ್ಡ್, ಸ್ಮಾರ್ಟ್ ವಾಚ್, ಸ್ಮಾರ್ಟ್ ಟಿವಿ ಮುಂತಾದ ಅನೇಕ ಸ್ಮಾರ್ಟ್ ಸಾಧನಗಳನ್ನು ಬಳಸುತ್ತಿದ್ದೇವೆ. ಈ ಸಾಧನಗಳ ಮಾತು ಹಾಗಿರಲಿ, ಸ್ಮಾರ್ಟ್ ಮನೆ ಹಾಗೂ ಸ್ಮಾರ್ಟ್ ನಗರಗಳ ಬಗೆಗೂ ಸಾಕಷ್ಟು ವಿಷಯಗಳು ನಮಗೆ ಕೇಳಲು – ನೋಡಲು ಸಿಗುತ್ತೆ.

ಇಷ್ಟಕ್ಕೂ ಯಾವುದಾದರೂ ಸಾಧನ ಅಥವಾ ಸಂಗತಿ ಸ್ಮಾರ್ಟ್ ಆಗುವುದು ಹೇಗೆ?

### ಸ್ಮಾರ್ಟ್ ಜಗತ್ತು

ಯಾವುದೇ ಸಾಧನ ಸ್ಮಾರ್ಟ್ ಎಂದು ಕರೆಸಿಕೊಳ್ಳಬೇಕಾದರೆ ಮೊದಲಿಗೆ ಅದರಲ್ಲಿ ತನ್ನಂತಹುದೇ ಇತರ ಸಾಧನ ಅಥವಾ ಜಾಲಗಳ (ನೆಟ್ವರ್ಕ್) ಜೊತೆ ಸಂಪರ್ಕ ಕಲ್ಪಿಸಿಕೊಳ್ಳುವ ಸಾಮರ್ಥ್ಯ ಇರಬೇಕು. ಅಂದರೆ, ವೈ–ಫೈ ,ಎನ್ ಎಫ್ ಸಿ, ಬ್ಲೂಟೂತ್ ಮುಂತಾದ ಯಾವುದೋ ಒಂದು ಸೌಲಭ್ಯ ಬಳಸಿ ಸಂವಹನ ನಡೆಸಲು, ಮಾಹಿತಿ ವಿನಿಮಯ ಮಾಡಿಕೊಳ್ಳಲು ಆ ಸಾಧನ ಶಕ್ತವಾಗಿರಬೇಕು.

ಈ ಸಾಮರ್ಥ್ಯವನ್ನು ಮೊದಲಿಗೆ ಪಡೆದದ್ದು ನಾವು ಹೆಚ್ಚಾಗಿ ಬಳಸುವ ಹಾಗೂ ಹೆಚ್ಚು ಸಮಯ ನಮ್ಮೊಡನೆಯೇ ಇಟ್ಟುಕೊಂಡಿರುವ ವಾಚ್, ಮೊಬೈಲ್ ಮುಂತಾದ ಸಾಧನಗಳು. ಸ್ಮಾರ್ಟ್ ಫೋನ್, ಸ್ಮಾರ್ಟ್ ವಾಚ್ ಗಳೆಲ್ಲ ಜನಪ್ರಿಯವಾಗಿದ್ದು ಹೀಗೆಯೇ. ನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಲೈಟ್ ಬಲ್ಬ್, ಟಿವಿ ಮುಂತಾದ ಇನ್ನಿತರ ಸಾಧನಗಳೂ ಆನಂತರದಲ್ಲಿ ಸ್ಮಾರ್ಟ್ ಎಂಬ ಹಣೆಪಟ್ಟಿ ಪಡೆದುಕೊಂಡವು. ಯೂಟ್ಯೂಬಿನಲ್ಲಿರುವ ವಿಡಿಯೋವನ್ನು ಮನೆಯ ಟಿವಿಯಲ್ಲೇ ನೋಡುವುದು, ಅಂಗಳದ ಲೈಟ್ ಬಲ್ಬನ್ನು ಮೊಬೈಲಿನಿಂದಲೇ ನಿಯಂತ್ರಿಸುವುದೆಲ್ಲ ಸಾಧ್ಯವಾಗಿದ್ದು ಇದರಿಂದಲೇ.

ಈಗಾಗಲೇ ಪರಿಚಿತವಾಗಿರುವ ಸಾಧನಗಳು ಸ್ಮಾರ್ಟ್ ಆಗುವುದು ಹಾಗಿರಲಿ, ಸ್ಮಾರ್ಟ್ ಆಗಲೆಂದೇ ರೂಪುಗೊಂಡ ಸಾಧನಗಳೂ ಇವೆ. ಇತ್ತೀಚಿಗೆ ಜನಪ್ರಿಯತೆ ಗಳಿಸಿಕೊಳ್ಳುತ್ತಿರುವ ಸ್ಮಾರ್ಟ್ ಅಸಿಸ್ಟೆಂಟ್ ಇದಕ್ಕೊಂದು ಉದಾಹರಣೆ.

**ಇವರು ಸ್ಮಾರ್ಟ್ ಸಹಾಯಕರು**

ನಾವು ದಿನನಿತ್ಯವು ಹತ್ತಾರು ಬಗೆಯ ಕೆಲಸಗಳನ್ನು ಮಾಡುತ್ತಿರುತ್ತೇವೆ. ಈ ಪೈಕಿ ಕೆಲವು ಕೆಲಸಗಳನ್ನು (ಉದಾ: ಬೈಕಿಗೆ ಪೆಟ್ರೋಲ್ ಹಾಕಿಸುವುದು) ನಿರ್ದಿಷ್ಟ ಸ್ಥಳಕ್ಕೆ ಹೋಗಿ ಮಾಡಬೇಕಾದರೆ ಇನ್ನೂ ಕೆಲವನ್ನು (ಉದಾ: ಅಲಾರಾಂ ಇಡುವುದು, ಆನ್ಲೈನ್ ಶಾಪಿಂಗ್ ಮಾಡುವುದು) ಕಂಪ್ಯೂಟರಿನಲ್ಲೋ ಮೊಬೈಲಿನಲ್ಲೋ ಮಾಡಿಕೊಳ್ಳುವುದು ಸಾಧ್ಯ.

ಈ ಕೆಲಸಗಳನ್ನೆಲ್ಲ ನಮ್ಮ ಪರವಾಗಿ ಬೇರೆ ಯಾರಾದರೂ ಮಾಡಿಕೊಡುವಂತಿದ್ದರೆ? 'ಸ್ಮಾರ್ಟ್ ಸಹಾಯಕರ' ಸೃಷ್ಟಿಯ ಹಿಂದಿರುವುದು ಇದೇ ಆಲೋಚನೆ.

ಅಂದಹಾಗೆ ಇಲ್ಲಿ ಸ್ಮಾರ್ಟ್ ಸಹಾಯಕರೆಂದರೆ ಚೂಟಿಯಾಗಿರುವ ಮನೆಕೆಲಸದವರಲ್ಲ, ಇವು ನಮ್ಮ ಕೆಲಸಗಳಲ್ಲಿ ನೆರವಾಗಬಲ್ಲ ತಂತ್ರಾಂಶ ಹಾಗೂ ಯಂತ್ರಾಂಶಗಳು. ಧ್ವನಿರೂಪದ ಸಂದೇಶಗಳಿಗೆ ಪ್ರತಿಕ್ರಿಯಿಸುವುದು, ನಾವು ಹೇಳಿದ ಕೆಲಸ ಮಾಡಿಕೊಡುವುದು ಇವುಗಳ ವೈಶಿಷ್ಟ್ಯ. ಇವುಗಳೊಡನೆ ಮಾತನಾಡುವ ಮೂಲಕವೇ ಮೊಬೈಲ್ ಕರೆ ಮಾಡುವುದು, ಸಂದೇಶ ಕಳಿಸುವುದು, ಹಾಡು ಕೇಳುವುದು, ಆನ್ ಲೈನ್ ಶಾಪಿಂಗ್ ಮಾಡುವುದನ್ನೆಲ್ಲ ಸಾಧ್ಯವಾಗಿಸಿಕೊಳ್ಳಬಹುದು.

ಉದಾಹರಣೆಗೆ ನೀವು ಕಾರು ಚಲಾಯಿಸುತ್ತಿದ್ದೀರಿ ಎಂದುಕೊಳ್ಳಿ. ನೀವು ಹೋಗಬೇಕಾದ ಜಾಗ ಎಲ್ಲಿದೆ ಎನ್ನುವುದರ ಬಗ್ಗೆ ಗೊಂದಲವಾದರೆ ಮೊಬೈಲಿನಲ್ಲಿ ಗೂಗಲ್ ಮ್ಯಾಪ್ಸ್ ಬಳಸುವುದು ಸಾಮಾನ್ಯ. ಆದರೆ ವಾಹನ ಚಲಾಯಿಸುವಾಗ ಒಂದು ಕೈಯಲ್ಲಿ ಮೊಬೈಲ್ ಬಳಸಲು ಹೋಗುವುದು ಅಪಾಯಕಾರಿಯಾಗಬಹುದು.

ಸ್ಮಾರ್ಟ್ ಸಹಾಯಕರು ಸಹಾಯಕ್ಕೆ ಬರುವುದೇ ಇಂತಹ ಸಂದರ್ಭಗಳಲ್ಲಿ. ನಿಮ್ಮ ಆಂಡ್ರಾಯ್ಡ್ ಫೋನಿನಲ್ಲಿರುವ ಗೂಗಲ್ ಅಸಿಸ್ಟೆಂಟಳನ್ನು ಕರೆದರೆ ಸಾಕು, ಆಕೆ ನೀವು ಹೋಗಬೇಕಾದ ಸ್ಥಳಕ್ಕೆ ದಾರಿತೋರಿಸಬಲ್ಲಳು. ಇನ್ನೂ ಗೊಂದಲವಿದ್ದರೆ ನಿಮ್ಮ ಗೆಳೆಯರಿಗೆ ಫೋನ್ ಕರೆಯನ್ನೂ ಮಾಡಬಲ್ಲಳು!

ಅಂದಹಾಗೆ ಇದನ್ನು ಸಾಧ್ಯವಾಗಿಸಲು ನಿಮ್ಮಲ್ಲಿ ವಿಶೇಷ ಸಾಧನಗಳೇನೂ ಇರಬೇಕಾಗಿಲ್ಲ, ಹೆಚ್ಚುವರಿ ಶುಲ್ಕ ಕೊಟ್ಟು ತಂತ್ರಾಂಶಗಳನ್ನು ಕೊಳ್ಳಬೇಕಾದ ಅಗತ್ಯವೂ ಇಲ್ಲ. ನಿಮ್ಮ ಮೊಬೈಲಿನಲ್ಲಿ ಗೂಗಲ್ ಅಸಿಸ್ಟೆಂಟ್ ಸವಲತ್ತನ್ನು ಒಮ್ಮೆ ಸಕ್ರಿಯಗೊಳಿಸಬೇಕು, ಅಂತರಜಾಲ ಸಂಪರ್ಕ ಇರಬೇಕು ಹಾಗೂ ನಿಮ್ಮ ಧ್ವನಿ ಕೇಳಿಸುವಷ್ಟು ಹತ್ತಿರದಲ್ಲಿ

ಮೊಬೈಲ್ ಇರಬೇಕು – ಅಷ್ಟೇ! ಧ್ವನಿರೂಪದ ನಿರ್ದಿಷ್ಟ ಆದೇಶಗಳನ್ನು (ಉದಾ: 'ಕಾಲ್ ಅಮ್ಮ', 'ಓಪನ್ ಯುಟ್ಯೂಬ್', 'ಸೆಂಡ್ ಮೆಸೇಜ್') ಅರ್ಥಮಾಡಿಕೊಳ್ಳುವ ಈ ವ್ಯವಸ್ಥೆ ಅದನ್ನು ಥಟ್ಟನೆ ಪಾಲಿಸುತ್ತದೆ. ಆಂಡ್ರಾಯ್ಡ್ ಕಾರ್ಯಾಚರಣ ವ್ಯವಸ್ಥೆಯಲ್ಲಿ 'ಗೂಗಲ್ ಅಸಿಸ್ಟೆಂಟ್' ಇರುವಂತೆಯೇ ಆಪಲ್ ಐಒಎಸ್ ನಲ್ಲಿ 'ಸಿರಿ' ಎಂಬ ಸವಲತ್ತು ಇದೆ. ಮೊಬೈಲ್ ಬೆಳೆಸಿ ನಾವು ಮಾಡುವ ಹಲವು ಕೆಲಸಗಳನ್ನು ನಮ್ಮ ಮಾತಿನ ಮೂಲಕವೇ ಸಾಧಿಸಿಕೊಳ್ಳಲು ನೆರವಾಗುವುದು ಇಂತಹ ಸವಲತ್ತುಗಳ ಉದ್ದೇಶ. ನಿರ್ದಿಷ್ಟ ಮಾಹಿತಿಯನ್ನು ಅಂತರ್ಜಾಲದಲ್ಲಿ ಹುಡುಕುವುದು, ಹೊಸ ಸುದ್ದಿಗಳನ್ನು ತಿಳಿಸುವುದು, ಜೋಕ್ ಹೇಳುವುದು, ಟ್ಯಾಕ್ಸಿ ಕರೆಸುವುದು, ತಿಂಡಿ ತಿನಿಸು– ದಿನಸಿ ಇತ್ಯಾದಿಗಳನ್ನು ಆರ್ಡರ್ ಮಾಡುವುದು ಇವುಗಳಿಗೆ ಗೊತ್ತು.

ಹಾಗೆಂದಮೇಲೆ ಸ್ಮಾರ್ಟ್ ಸಹಾಯಕರು ಫೋನಿನಲ್ಲೇ ಯಾಕಿರಬೇಕು? ಈ ಪ್ರಶ್ನೆಗೆ ಉತ್ತರರೂಪವಾಗಿ ಪ್ರತ್ಯೇಕ ಯಂತ್ರಾಂಶ ರೂಪದ ಸ್ಮಾರ್ಟ್ ಸಹಾಯಕರೂ ಸಿದ್ದರಾಗಿದ್ದಾರೆ. ಗೂಗಲ್ ನ 'ಹೋಮ್' ಹಾಗೂ ಅಮೆಜಾನ್ ಸಂಸ್ಥೆಯ 'ಎಕೋ' ಸಾಧನಸರಣಿ ಇದರ ಉದಾಹರಣೆಗಳು.

ಮೊಬೈಲಿನಲ್ಲಿ ತಂತ್ರಾಂಶ ರೂಪದಲ್ಲಿರುವ ಬದಲು ಪ್ರತ್ಯೇಕ ಯಂತ್ರಾಂಶವಾಗಿರುವುದರಿಂದ ಟಿವಿ ರೇಡಿಯೋಗಳಂತೆ ಇವನ್ನೂ ಒಂದೆಡೆ ಇಟ್ಟಿರುವುದು, ಮನೆಯ ಇತರ ಸದಸ್ಯರೊಡನೆ ಮಾತನಾಡಿದಂತೆ ಇವುಗಳ ಜೊತೆಗೂ ಮಾತನಾಡುವುದು, ಉತ್ತರ ಪಡೆದುಕೊಳ್ಳುವುದು ಸುಲಭ ಎನ್ನುವುದು ಈ ಸಾಧನಗಳ ಸೃಷ್ಟಿಯ ಹಿಂದಿರುವ ಆಲೋಚನೆ. ಇವುಗಳನ್ನು ಬಳಸಿ ಮನೆಯಲ್ಲಿರುವ ಇತರ ಸ್ಮಾರ್ಟ್ ಸಾಧನಗಳನ್ನು (ಉದಾ:ಸ್ಮಾರ್ಟ್ ಬಲ್ಬ್, ಸ್ಮಾರ್ಟ್ ಟಿವಿ) ನಿಯಂತ್ರಿಸುವುದು ಕೂಡ ಸಾಧ್ಯ.

ಅಂದಹಾಗೆ ಈ ಸಾಧನಗಳದ್ದು ಹೀಗೆ ಹೇಳಿದರೆ ಹೀಗೆಯೇ ಮಾಡುವುದು ಎನ್ನುವ ಮಕ್ಕಿ–ಕಾ–ಮಕ್ಕಿ ಕಾರ್ಯವೈಖರಿಯೇನೂ ಅಲ್ಲ. ನೀವು ಹೇಳಿದ ಕೆಲಸ ಪೂರೈಸಲು ಹೆಚ್ಚಿನ ಮಾಹಿತಿ ಬೇಕಿದ್ದರೆ ಕೇಳಿ ಪಡೆದುಕೊಳ್ಳುವುದು (ಉದಾ: ಕರೆಮಾಡಬೇಕಿರುವುದು ಅಮ್ಮನ ಮೊಬೈಲಿಗೋ ಲ್ಯಾಂಡ್ಲೈನಿಗೋ), ಲಭ್ಯವಿರುವ ಆಯ್ಕೆಗಳ ಬಗ್ಗೆ ತಿಳಿಸುವುದು (ಉದಾ: ಬರೆದುಕೊಂಡಿರುವ ಸಂದೇಶ ಸರಿಯಿದೆಯೋ ಬದಲಿಸಬೇಕೋ) ಮುಂತಾದ ಸೌಲಭ್ಯಗಳೂ ಸ್ಮಾರ್ಟ್ ಅಸಿಸ್ಟೆಂಟ್ ವ್ಯವಸ್ಥೆಯಲ್ಲಿರುತ್ತವೆ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಮಶೀನ್ ಲರ್ನಿಂಗ್ ಮುಂತಾದ ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದ ಇವು ತಮ್ಮ ಕಾರ್ಯವೈಖರಿಯನ್ನು ನಿರಂತರವಾಗಿ ಉತ್ತಮಪಡಿಸಿಕೊಳ್ಳುವ ನಿಟ್ಟಿನಲ್ಲಿ (ಉದಾ: ನೀವು ಯಾವಾಗಲೂ ಅಮ್ಮನ ಮೊಬೈಲಿಗೇ ಕರೆಮಾಡುತ್ತಿದ್ದರೆ ಮುಂದಿನ ಬಾರಿ ನೇರ ಆ ಸಂಖ್ಯೆಗೇ ಕರೆಮಾಡುವುದು) ಕೂಡ ಪ್ರಯತ್ನಗಳು ಸಾಗಿವೆ. ಈ ಸಾಧನಗಳಲ್ಲಿ ಇಂಗ್ಲೀಷ್ ಜೊತೆಗೆ ಇತರ ಭಾಷೆಗಳನ್ನು ಗುರುತಿಸುವ ಸಾಮರ್ಥ್ಯವನ್ನು ಬೆಳೆಸಲಾಗುತ್ತಿದೆ.

## ಮನೆಯೂ ಸ್ಮಾರ್ಟ್

ಸ್ಮಾರ್ಟ್ ಫೋನ್, ಸ್ಮಾರ್ಟ್ ವಾಚ್, ಸ್ಮಾರ್ಟ್ ಬಲ್ಬ್, ಸ್ಮಾರ್ಟ್ ಟಿವಿ – ಹೀಗೆ ಮನೆಯ ಸಾಧನೆಗಳೆಲ್ಲ ಸ್ಮಾರ್ಟ್ ಆದಮೇಲೆ ಇದೀಗ ಪೂರ್ತಿ ಮನೆಯೇ ಸ್ಮಾರ್ಟ್ ಆಗಿ ಬದಲಾಗುತ್ತಿದೆ.

ಡಿಜಿಟಲ್ ತಂತ್ರಜ್ಞಾನದ ಅನುಕೂಲತೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮನೆಯೇ 'ಸ್ಮಾರ್ಟ್ ಹೋಮ್', ಇಲ್ಲಿನ ಫ್ಯಾನು–ಲೈಟುಗಳನ್ನು ಮೊಬೈಲ್ ಆಪ್ ಬಳಸಿ ನಿಯಂತ್ರಿಸಬಹುದು, ಮನೆಯ ತಾಪಮಾನ–ಗಾಳಿಯ ಗುಣಮಟ್ಟದ ಮಾಹಿತಿಯನ್ನು ಮೊಬೈಲಿನಲ್ಲೇ ಪಡೆದುಕೊಳ್ಳಬಹುದು, ವಾಷಿಂಗ್ ಮಷೀನ್ – ಮೈಕ್ರೋವೇವ್ ಓವನ್ ಕೆಲಸಗಳನ್ನೆಲ್ಲ ಆಫೀಸಿನಲ್ಲಿ ಕುಳಿತೇ ಗಮನಿಸಿಕೊಳ್ಳಬಹುದು, ಸೆಕ್ಯೂರಿಟಿ ಕ್ಯಾಮರಾಗೆ ಕಾಣುತ್ತಿರುವ ದೃಶ್ಯಗಳನ್ನು ಸ್ಮಾರ್ಟ್ ಫೋನಿನಲ್ಲಿ ನೋಡಬಹುದು. ಅಂದಹಾಗೆ ಇವೆಲ್ಲ ಮುಂದೆಂದೋ ಸಾಧ್ಯವಾಗುವ ಸಂಗತಿಗಳಲ್ಲ– ಮೇಲಿನ ಉದಾಹರಣೆಗಳ ಪೈಕಿ ಬಹಳಷ್ಟು ಸೌಲಭ್ಯಗಳು ಈಗಾಗಲೇ ಮಾರುಕಟ್ಟೆಯಲ್ಲಿವೆ, ನಮ್ಮ ದೇಶದಲ್ಲೂ!

ಈ ಪೈಕಿ ಸ್ಮಾರ್ಟ್ ಬಲ್ಬ್ ನಂತಹ ಸಾಧನಗಳಂತೂ ಕೆಲವೇ ನೂರು ರೂಪಾಯಿಗಳಲ್ಲಿ ದೊರಕುತ್ತವೆ. ಮೊಬೈಲ್ ಮೂಲಕ ನಿಯಂತ್ರಿಸಬಹುದಾದ ಈ ದೀಪಗಳು ನಮಗೆ ಬೇಕಾದಾಗ ಬೆಳಕನ್ನು ಹೆಚ್ಚು–ಕಡಿಮೆ ಮಾಡಿಕೊಳ್ಳಬಲ್ಲವು, ಬೆಳಕಿನ ಬಣ್ಣವನ್ನು ಬದಲಿಸಬಲ್ಲವು. ಮೊಬೈಲಿನಿಂದ ಹೊಮ್ಮುವ ಹಾಡಿಗೆ ಸ್ಮಾರ್ಟ್ ಬೆಲ್ಬ್ ಸಾಂಗತ್ಯವಿದ್ದರೆ ಮನೆಯಲ್ಲೇ ಡಿಸ್ಕೋ ಎಫೆಕ್ಟ್ ರೆಡಿ! ಸೀಲಿಂಗ್ ಫ್ಯಾನಿನಿಂದ ಟಾಯ್ಲೆಟ್ ಸೀಟಿನವರೆಗೆ ಇದೇ ರೀತಿ ಮೊಬೈಲ್ ಮೂಲಕ ನಿಯಂತ್ರಿಸಬಹುದಾದ ಇನ್ನೂ ಅನೇಕ ಸ್ಮಾರ್ಟ್ ಸಾಧನಗಳು ಮಾರುಕಟ್ಟೆಯಲ್ಲಿವೆ.

ಅಂತರ್ಜಾಲ ಸಂಪರ್ಕವಿರುವ ಇಂತಹ ಸಾಧನಗಳ ಬಳಕೆಯಿಂದ ಏನೆಲ್ಲಾ ಸಾಧ್ಯವಾಗಬಹುದು? ಕಾಲಿಂಗ್ ಬೆಲ್ ಉದಾಹರಣೆ ನೋಡೋಣ. ಕ್ಯಾಮೆರಾ ಸೌಲಭ್ಯವಿರುವ ಕಾಲಿಂಗ್ ಬೆಲ್ ಅನ್ನೂ ಅಂತರ್ಜಾಲ ಸಂಪರ್ಕವನ್ನೂ ಬಳಸಿಕೊಂಡು ಮನೆಯಲ್ಲಿ ಬೆಲ್ ಒತ್ತುತ್ತಿರುವುದು ಯಾರು ಎನ್ನುವುದನ್ನು ನೀವು ಎಲ್ಲೇ ಇದ್ದರೂ ಮೊಬೈಲಿನಲ್ಲೇ ನೋಡಬಹುದು. ಬಂದಿರುವವರ ಜೊತೆ ಮಾತನಾಡಲೂಬಹುದು. ಮೊಬೈಲ್ ಮೂಲಕವೇ ಬೀಗ ತೆರೆದು ಅವರನ್ನು ಮನೆಯೊಳಗೆ ಸ್ವಾಗತಿಸಬಹುದು.

ಗಮನಿಸಬೇಕಾದ ಅಂಶವೆಂದರೆ ಸ್ಮಾರ್ಟ್ಫೋನ್, ಸ್ಮಾರ್ಟ್ ವಾಚ್ ಗಳಿಗೆಲ್ಲ ಇರುವಂತೆ ಸ್ಮಾರ್ಟ್ ಮನೆಗೆ ನಿರ್ದಿಷ್ಟವಾದ ಸ್ವರೂಪವೇನು ಇರುವುದಿಲ್ಲ. ಮೇಲೆ ಹೇಳಿದ ವಿವಿಧ ಸೌಲಭ್ಯಗಳು ಸೇರಿದ ಒಂದು ವಿಶಾಲವಾದ ಪರಿಕಲ್ಪನೆಯಷ್ಟೇ ಆದ್ದರಿಂದ ನಮ್ಮ ಸ್ಮಾರ್ಟ್ ಮನೆ ಇನ್ನೊಬ್ಬರದಕ್ಕಿಂತ ಸಂಪೂರ್ಣ ಭಿನ್ನವಾಗಿರುವುದು ಸಾಧ್ಯ. ನಮ್ಮ ಅಗತ್ಯಗಳಿಗೆ ತಕ್ಕಂತೆ ನಾವು ಬಳಸುವ ಸಾಧನಗಳೂ ಬೇರೆಬೇರೆಯಾಗಿರಬಹುದು: ಹಿರಿಯರ ಆರೋಗ್ಯದ ಮೇಲೆ ನಿಗಾ ಇಡುವ ಯಂತ್ರಗಳಿಂದ ಪ್ರಾರಂಭಿಸಿ ಸಾಕುಪ್ರಾಣಿಗಳಿಗೆ ಸಮಯಕ್ಕೆ ಸರಿಯಾಗಿ ಊಟ ಹಾಕುವ

ವ್ಯವಸ್ಥೆಯ ವರೆಗೆ ವಿವಿಧ ಅಗತ್ಯಗಳಿಗೆ ಸ್ಪಂದಿಸುವ ಅದೆಷ್ಟೋ ಸ್ಮಾರ್ಟ್ ಸಾಧನಗಳು ಈಗಾಗಲೇ ರೂಪುಗೊಂಡಿವೆ. ಅಷ್ಟೇ ಅಲ್ಲ, ಕೊಂಚ ತಾಂತ್ರಿಕ ಪರಿಣತಿ ಇದ್ದರೆ ಹೊಸ ವ್ಯವಸ್ಥೆಗಳನ್ನು ನಾವೇ ರೂಪಿಸಿ ಸ್ಮಾರ್ಟ್ ಮನೆಯ ಸಾಧ್ಯತೆಗಳನ್ನು ಇನ್ನಷ್ಟು ವಿಸ್ತರಿಸಿಕೊಳ್ಳಲೂಬಹುದು.

ಮನೆಯೊಳಗಿನ ವಸ್ತುಗಳಷ್ಟೇ ಅಲ್ಲ, ವಾಹನಗಳೂ ಸ್ಮಾರ್ಟಾಗಿವೆ. ನಾವು ಹೊರಗಡೆ ಎಲ್ಲೋ ಇದ್ದಾಗಲೂ ಸ್ಮಾರ್ಟ್ಫೋನ್ ಮೂಲಕ ನಮ್ಮ ಕಾರಿನೊಡನೆ ಸಂಪರ್ಕದಲ್ಲಿರಬಹುದು. ಅಷ್ಟೇ ಅಲ್ಲ, ಕಂಪ್ಯೂಟರುಗಳೊಡನೆ ಸಂಪರ್ಕ ಏರ್ಪಡಿಸಿಕೊಡುವ ಸಾಧನಗಳ ನೆರವಿನಿಂದ ನಮ್ಮ ಕಾರಿನ ಆರೋಗ್ಯದ ಸ್ಥಿತಿಗತಿಯನ್ನು ಥಟ್ ಅಂತ ತಿಳಿದುಕೊಂಡುಬಿಡಬಹುದು.

**ವಸ್ತುಗಳ ಅಂತರಜಾಲ**

ಇತರೆಲ್ಲಾ ಸ್ಮಾರ್ಟ್ ಸಾಧನಗಳಂತೆ ಸ್ಮಾರ್ಟ್ ಮನೆಯ ಹಿನ್ನೆಲೆಯಲ್ಲಿರುವುದೂ ಅಂತರಜಾಲವೇ. ಆದರೆ ಇಲ್ಲಿರುವುದು ಕಂಪ್ಯೂಟರ್ಗಳಷ್ಟೇ ಅಲ್ಲವಾದ್ದರಿಂದ ಇದು ಬರಿಯ ಅಂತರಜಾಲವಲ್ಲ– ವಸ್ತುಗಳ ಅಂತರಜಾಲ, ಅಂದರೆ ' ಇಂಟರ್ನೆಟ್ ಆಫ್ ಥಿಂಗ್ಸ್'!

ಇಂಟರ್ನೆಟ್ ಎಂದಾಕ್ಷಣ ಕಂಪ್ಯೂಟರ್ ಹಾಗೂ ಮೊಬೈಲ್ ಫೋನ್ಗಳಷ್ಟೇ ನಮ್ಮ ಮನಸ್ಸಿಗೆ ಬರುವುದು ಸಾಮಾನ್ಯ. ಅಂತರಜಾಲ ಸಂಪರ್ಕವನ್ನು ಇಂತಹ ಸಾಧನಗಳಿಗಷ್ಟೇ ಸೀಮಿತಗೊಳಿಸದೆ ನಿತ್ಯದ ಬಳಕೆಯ ವಸ್ತುಗಳನ್ನೂ ಅದರ ವ್ಯಾಪ್ತಿಗೆ ತರುವುದು, ಅವುಗಳ ನಡುವೆ ಸಂವಹನ ಸಾಧ್ಯವಾಗಿಸುವುದು ಈ ಪರಿಕಲ್ಪನೆಯ ವೈಶಿಷ್ಟ್ಯ.

ನಾವು ದಿನನಿತ್ಯವೂ ಬಳಸುವ ನೂರಾರು, ಸಾವಿರಾರು ಸಂಖ್ಯೆಯ ವಸ್ತುಗಳು (ಥಿಂಗ್ಸ್) ಬೃಹತ್ ಜಾಲವೊಂದರ ಭಾಗವಾಗಿ ಬೆಳೆದಾಗ ವಸ್ತುಗಳ ಅಂತರಜಾಲ ರೂಪುಗೊಳ್ಳುತ್ತದೆ. ನಮ್ಮ ಪರಿಚಯದ ಅಂತರಜಾಲದಲ್ಲಿ ಹೇಗೆ ಲ್ಯಾಪ್ಟಾಪ್– ಡೆಸ್ಕ್ ಟಾಪುಗಳು, ಸರ್ವರು ಗಳು, ಮೊಬೈಲ್–ಟ್ಯಾಬ್ಲೆಟ್ಟುಗಳು ಒಂದಕ್ಕೊಂದು ಸಂಪರ್ಕಿತವಾಗಿವೆಯೋ ಹಾಗೆ ವಸ್ತುಗಳ ಈ ಅಂತರ್ಜಾಲದಲ್ಲಿ ನಾವು ಕಲ್ಪಿಸಿಕೊಳ್ಳಬಹುದಾದ ಎಲ್ಲ ಸಾಧನಗಳೂ ಅಂತರಜಾಲ ಸಂಪರ್ಕ ಪಡೆದುಕೊಳ್ಳಬಲ್ಲವು, ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಳ್ಳಬಲ್ಲವು. ಗೃಹೋಪಯೋಗಿ ವಸ್ತುಗಳು – ವಾಹನಗಳು ಮುಂತಾದ ದೊಡ್ಡ ಸಾಧನಗಳಷ್ಟೇ ಅಲ್ಲ, ನಮ್ಮ ದೇಹದೊಳಗೆ ಸೇರಿ ಆರೋಗ್ಯವನ್ನೂ ನಮ್ಮ ಓಡಾಟವನ್ನೂ ಗಮನಿಸಿಕೊಳ್ಳುವ ಸೆನ್ಸರುಗಳಂತಹ ಅತಿಸೂಕ್ಷ್ಮ ವಸ್ತುಗಳೂ ಈ ಜಾಲದ ಭಾಗವಾಗಿರುವುದು ಸಾಧ್ಯ.

ಇಷ್ಟೆಲ್ಲ ಸಾಧನಗಳು ಅಂತರಜಾಲದ ಸಂಪರ್ಕಕ್ಕೆ ಬಂದರೆ ಅವುಗಳ ನಡುವೆ ವಿನಿಮಯವಾಗುವ ಮಾಹಿತಿಯ ಪ್ರಮಾಣವೂ ಭಾರೀ ಪ್ರಮಾಣದಲ್ಲಿ ಹೆಚ್ಚುತ್ತದಲ್ಲ, ಅದನ್ನು ನಿಭಾಯಿಸುವ ಸಿದ್ದತೆಗಳೂ ನಡೆದಿವೆ. ಶಿಜಿಯಂತಹ

ಹೊಸ ಪರಿಕಲ್ಪನೆಗಳ ಮೂಲಕ ಸದ್ಯ ಬಳಕೆಯಲ್ಲಿರುವ ತಂತ್ರಜ್ಞಾನದ ಸ್ವರೂಪವನ್ನು ಗಮನಾರ್ಹವಾಗಿ ಬದಲಿಸುವುದು ಹಾಗೂ ಈಗ ನಮಗೆ ಪರಿಚಯವಿರುವುದಕ್ಕಿಂತ ಹಲವಾರು ಪಟ್ಟು ಹೆಚ್ಚು ವೇಗದ ಅಂತರಜಾಲ ಸಂಪರ್ಕಗಳನ್ನು ಕಲ್ಪಿಸಿಕೊಡುವುದು ಇಂತಹ ಸಿದ್ಧತೆಗಳ ಪೈಕಿ ಕೆಲವು. ವಿಶ್ವದಾದ್ಯಂತ ದೂರಸಂಪರ್ಕ ಕ್ಷೇತ್ರದ ಮುಂಚೂಣಿಯಲ್ಲಿರುವ ಹಲವ ಸಂಸ್ಥೆಗಳು ಈ ನಿಟ್ಟಿನಲ್ಲಿ ಈಗಾಗಲೇ ಕೆಲಸಮಾಡುತ್ತಿವೆ.

# 4.3 ಕುಲಕುಲ ಎಂದು ನಾಶವಾದ ಕುಲಗೇಡಿಗಳು

**– ಪಿ.ಲಂಕೇಶ್**

ಗಣೇಶನ ಹಬ್ಬವಾಗಿ ಮೂರು ದಿನ ಆಗಿತ್ತು. ನಾನು ಎಂದಿನಂತೆ ನಮ್ಮ ಮನೆಗೆ ಒಂದು ಕಿಲೋಮೀಟರ್ ದೂರದ ಸಣ್ಣ ಬಿಡಿಎ ಪಾರ್ಕಿನಲ್ಲಿ ನಡೆಯುತ್ತಿದ್ದೆ. ಈಗ ನನ್ನ ಬದುಕಿನಲ್ಲಿ ಉಳಿದಿರುವ ಹಲವೇ ಸಂತೋಷಗಳಲ್ಲಿ ಬೆಳಗಿನ ವಾಕ್ ಒಂದು; ಇಷ್ಟವಾದ ಪುಸ್ತಕಗಳನ್ನು ತರಿಸಿ ಓದುವುದು; ಟಬ್ ಸ್ನಾನ, ತೀರಾ ಹತ್ತಿರದ ಗೆಳೆಯರು ಸಿಕ್ಕರೆ ಹರಟುವುದು, ಇವೆಲ್ಲ ಇನ್ನೂ ಹಲವು ಖುಷಿಗಳು. ಜೋಕ್ ಮಾಡಿ ನಗುವುದು, ಹತ್ತಿರದವರ ಬಗ್ಗೆ ಕತೆ ಕಟ್ಟಿ ಹೇಳುವುದು, ನನ್ನ ಆಳದಲ್ಲಿನ ಕೆಲವು ವೃತ್ತಾಂತಗಳನ್ನು ನಿತ್ಯವೂ ಬೆಳೆಸುವುದು. ಅವು ನಿಜಕ್ಕೂ ಬೆಳೆಯುತ್ತವೆಯೆ? ಬೆಳೆಸಲು, ಬರೆಯಲು ಯೌವನ, ಶಕ್ತಿ, ಅಹಂಕಾರ ಎಲ್ಲವೂ ಬೇಕಲ್ಲವೇ. ಹಾಗೆ ಕೇಳುತ್ತಾ ಕೂತುಕೊಳ್ಳುವ ಬದಲು ನಮ್ಮಲ್ಲಿನ ಬೆಂಕಿಯನ್ನು ಆದಷ್ಟು ಕಾಪಾಡಿಕೊಳ್ಳುವುದು, ಹೆಚ್ಚು ಹೆಚ್ಚು ಉರಿಸಲೆತ್ನಿಸುವುದು ವಾಸಿ. ಅದೆಲ್ಲಾ ಈಗ ಇರಲಿ. ಅವತ್ತು ಬೆಳಗ್ಗೆ ಎದ್ದು ನಿತ್ಯ ನಾನು ನಡೆಯುವ ಪಾರ್ಕ್ ನಲ್ಲಿ ವಾಕ್ ಮಾಡುತ್ತಾ ಇದ್ದೆ. ಅದು ಪುಟ್ಟ, ಅಷ್ಟೇನೂ ಸುಂದರವಲ್ಲದ, ನನ್ನಂಥವರು ನಾಲ್ಕು ದಿನ ಹೋಗದಿದ್ದರೆ ಬೀದಿ ನಾಯಿಗಳೆಲ್ಲಾ ಸ್ವಂತದ ವಾಸಸ್ಥಳ ವಾಗಿ ಮಾಡಿಕೊಳ್ಳುವ, ಹತ್ತಿರದಲ್ಲಿ ಹೊಸಮನೆ ಕಟ್ಟಿಸುವವರ ವಾಚ್‌ಮನ್‌ಗಳೆಲ್ಲ ಗಲೀಜು ಮಾಡುವ ಜಾಗ. ಬಿಡಿಎ ಪಾರ್ಕ್ ಆದ್ದರಿಂದ ಅದರಲ್ಲಿ ಯಾರಿಗೂ ಆಸಕ್ತಿ ಇಲ್ಲ. ನಾನು ಅಲ್ಲಿಗೆ ಹೋಗುವುದೇಕೆಂದರೆ, ಬೀದಿಯಲ್ಲಿ ನಡೆದರೆ ವಾಹನಗಳ, ದನಕರುಗಳ ಕಾಟ. ಅವುಗಳಿಂದೆಲ್ಲ ಹುಷಾರಾಗಿ ತಪ್ಪಿಸಿಕೊಂಡು ವಾಕ್ ಮಾಡುವಲ್ಲಿ ಬೇಸರವಾಗಿರುತ್ತದೆ. ರಸ್ತೆಗಳಲ್ಲಿ ಬೇರೆ ಗುಂಡಿ, ನೀರು, ಫುಟ್ ಪಾತ್ ಗಳಲ್ಲಿ ಕಾಲಿಡುವಂತಿಲ್ಲ. ಹೀಗಾಗಿ ಈ ಪಾರ್ಕೇ ಸರಿ ಎಂದು ಹಾಳಾಗಿದ್ದ ಅದರ ಬೇಲಿಯನ್ನು ಸರಿಪಡಿಸಿ, ನಮ್ಮ ತೋಟದ ಆಳುಗಳನ್ನು ಕರೆದು ಕಿತ್ತು ಹೋಗಿದ್ದ ಗೇಟ್ ಭದ್ರ ಮಾಡಿದೆ. ರಸ್ತೆಯ ದನಗಳು, ಹೊಣೆಗೇಡಿ ಮನುಷ್ಯರು ಅದನ್ನು ಅಲ್ಲಿ ಗಲೀಜು ಮಾಡದಂತೆ ದೊಡ್ಡ ಗೇಟ್‌ಗೆ ತಂತಿ ಹಾಕಿಸಿ ಸಣ್ಣ ಗೇಟ್ ಗಳನ್ನು ಸರಿ ಮಾಡಿಸಿದೆ. ಅಲ್ಲಿ ಬಿದ್ದಿದ್ದ ಕಾಗದ, ಎಲೆ, ಐಸ್ ಕ್ರೀಂ ಪ್ಯಾಕೆಟ್ ಗಳು, ತಿಂಡಿಯ ಅವಶೇಷಗಳು ಎಲ್ಲವನ್ನೂ ತೆಗೆಸಿದೆ. ಎಲ್ಲಾ ಸರಿ ಹೋಯಿತು ಎಂದು ಕೆಲವು ತಿಂಗಳು ಅಲ್ಲಿ ವಾಕ್ ಮಾಡುವಷ್ಟರಲ್ಲಿ ಮೊನ್ನೆ ಗಣೇಶನ ಹಬ್ಬ ಬಂತು. ಗೌರಿ, ಗಣೇಶನ ಹಬ್ಬದಂದು ಅಷ್ಟು ಗಲಾಟೆ ಇರಲಿಲ್ಲ. ಗಣೇಶನ ಹಬ್ಬವಾದ ನಾಲ್ಕು ದಿನಗಳ ತರುವಾಯ ಹತ್ತಾರು ಹುಡುಗರು ಬಂದು ಪಾರ್ಕಿನೊಳಗೆ ಚಪ್ಪರ ಹಾಕತೊಡಗಿದರು. ಗಣೇಶನ ಹಬ್ಬವಾಗಿದ್ದರೂ ‘ ಗಣೇಶ ಗಣೇಶ’ ಅನ್ನುತ್ತಿದ್ದ ಅವರನ್ನು ನೋಡಿ ನಾನು

ಸುಮ್ಮನಿದ್ದೆ; ವೃಥಾ ಜಗಳವಾಡುವುದು ಬೇಡ ಎನ್ನುವುದು ನನ್ನ ಪಾಲಿಸಿ. ಅಷ್ಟರಲ್ಲಿ ನಾಲ್ಕು ಜನ ದೊಡ್ಡ ಗೇಟ್ ಕೀಳತೊಡಗಿದರು. ನಾನು 'ಯಾಕೆ?' ಅಂದೆ.

'ಗಣೇಶನ ಇಡ್ತೀವಿ ಸಾರ್.'

'ಹಬ್ಬವಾಗಿ ನಾಲ್ಕು ದಿನವಾಯ್ತಲ್ರೀ?'

'ಇಲ್ಲ ಸಾರ್, ಬೇರೆ ಕಡೆ ಇಟ್ಟಿದ್ದೀವಿ. ಅದನ್ನು ಈಗ ಇಲ್ಲಿಗೆ ತಂದಿಟ್ಟು ಎರಡು ದಿನದಲ್ಲಿ ವಿಸರ್ಜನೆ ಮಾಡ್ತೀವಿ.'

'ಸರಿ, ಅದಕ್ಕೆ ಯಾಕೆ ಗೇಟ್ ಕೀಳ್ತಿದೀರಿ?'

'ಜನ ಬರೋದಕ್ಕೆ ಅನುಕೂಲವಾಗುತ್ತೆ. ಮತ್ತೆ ಮುಂಚಿನ ಹಾಗೆ ಸರಿಮಾಡ್ತೀವಿ.'

'ಸರಿ, ನೆನಪಿಟ್ಟುಕೊಳ್ಳಿ. ಇದು ಸಾರ್ವಜನಿಕ ಜಾಗ. ಇಲ್ಲಿ ಏನು ಹಾಳಾದರೂ ಕೇಳೋರಿಲ್ಲ. ನೀವು ಮರೀದೇ ಸರಿ ಮಾಡಬೇಕು' ಅಂದೆ. ನನ್ನ ಪಾಡಿಗೆ ನಾನು ವಾಕ್ ಮಾಡಿ ಬಂದೆ. ಮತ್ತೆ ನಾಲ್ಕು ದಿನ ನಾನು ಅತ್ತ ಹೋಗಲಿಲ್ಲ.

ಗಣೇಶನನ್ನು ಕಳಿಸಿದ ಮೇಲೆ ಕಿತ್ತ ಗೇಟ್ ಹಾಗೇ ಎಸೆದುಹೋಗಿದ್ದಾರೆ. ಈ ಬಗ್ಗೆ ಬರೆಯಬಾರದೆಂದು ಸುಮ್ಮನಿದ್ದೆ. ಎಲ್ಲಕ್ಕೂ ಯಾಕೆ ತಲೆಬಿಸಿ ಮಾಡಿಕೊಳ್ಳುವುದೆಂದು ನಿರ್ಲಕ್ಷ್ಯದಿಂದ ಇರಲು ಯತ್ನಿಸಿದೆ. ಆದರೆ ಹತ್ತಾರು ಸುದ್ದಿಗಳು ಬಂದು ನನ್ನನ್ನು ಕೆಣಕುತ್ತಿರುವುದರಿಂದ ಇಲ್ಲಿ ಸುಮ್ಮನೇ ಹೇಳುತ್ತಿದ್ದೇನೆ. ಗಣಪನ ಕಳಿಸುವ ದಿವಸ ಈ ಚಡ್ಡಿಗಳು ಶಿವಮೊಗ್ಗಾದಲ್ಲಿ ರಕ್ತ ಸುರಿಸಲೆತ್ನಿಸಿದ್ದು, ಅನೇಕ ಕಡೆ ರಕ್ತಪಾತ ಮಾಡಲೆತ್ನಿಸಿದ್ದು ನನ್ನನ್ನು ರೇಗಿಸಿದೆ. ಶಿವಮೊಗ್ಗೆಯ ಶಾಸಕ, ಆತನ ಗೆಳೆಯರೆಲ್ಲ ಶತಪ್ರಯತ್ನ ಮಾಡಿ ಶಿವಮೊಗ್ಗಾದಲ್ಲಿ ಗಲಭೆ, ಅನಾಹುತ ತಪ್ಪಿಸಿದರು. ಈ ಪುಂಡುಪೋಕರಿಗಳ ಬಗ್ಗೆ ಸಹನೆಯಿಂದಿರಬೇಕೆಂದು ನಾನು ಎಷ್ಟೇ ಪ್ರಯತ್ನಿಸಿದರೂ ಇವರ ದುಷ್ಟತನ ನನ್ನನ್ನು ಕಂಗೆಡಿಸುತ್ತಿದೆ. ಇವರು ತಿಳಿದುಕೊಳ್ಳಬೇಕು :ನನ್ನಂಥವರು ಸಹನೆಯಿಂದ ವರ್ತಿಸಿದಷ್ಟೂ ನಮ್ಮ ಸಹನೆಯೇ ನಮ್ಮ ಸಿದ್ಧಾಂತವನ್ನು ಗಟ್ಟಿ ಮಾಡುತ್ತದೆ. ನಮ್ಮ ನಂಬಿಕೆ ದೃಢವಾಗುತ್ತದೆ. ಈ ಬಗ್ಗೆ ನಾನು ಯೋಚಿಸುತ್ತಿರುವಾಗಲೇ ದೂರದ ದೇಶಗಳಿಂದ ಕೆಟ್ಟ ಸುದ್ದಿ ಬರುತ್ತಿವೆ.

ನಾನು ಇವರ ವರ್ತನೆಯನ್ನು ನೋಡಿ ವ್ಯಥೆ ಪಟ್ಟಿದ್ದೆ. ಇಡಿ ಜಗತ್ತಿನಲ್ಲಿ ಅತ್ಯಂತ ಬುದ್ಧಿವಂತರೆಂದು ಹೆಸರಾದವರು, ಒಳ್ಳೆಯ ಶಿಕ್ಷಣ ಪಡೆದವರು, ಎರಡು ಸಾವಿರ ವರ್ಷದಿಂದ ಸಾವು–ನೋವು ಅವಮಾನ ಅನುಭವಿಸಿದವರು, ಈ ಯಹೂದ್ಯರು(JEWS) ನಮ್ಮೆಲ್ಲ ಅನುಕಂಪೆ ಪಡೆದ ಸಾಹಸಿಗಳು, ಬದುಕುವುದಕ್ಕಾಗಿ

ಪ್ರತಿಕ್ಷಣವೂ ಎಚ್ಚರದಿಂದ ಇರಬೇಕಾದ ಜನರಿವರು. ಆದರೆ ಇವರು ೧೯೮೯ರಲ್ಲಿ ಮಾಡಿದ್ದು ನೋಡಿ ನನಗೆ ಅಚ್ಚರಿಯಾಯಿತು. ರಷ್ಯಾದಲ್ಲಿ ಕಮ್ಯುನಿಸ್ಟ್ ಸರ್ಕಾರ ಬಿದ್ದು ಗರ್‌ಬಚೋವ್ ತನ್ನ ದೇಶಕ್ಕೆ ಪ್ರಜಾಪ್ರಭುತ್ವ ತಂದ. ರಷ್ಯಾವನ್ನು ಅಲ್ಲಿದ್ದ ಯಹೂದ್ಯರು ಬಿಡ ತೊಡಗಿದರು. ರಷ್ಯಾವನ್ನು ತೊರೆದ ಯಹೂದ್ಯರನ್ನು ಇಸ್ರೇಲಿನ ಯಹೂದ್ಯರು ಸ್ವಾಗತಿಸಿ, 'ನಮ್ಮಲ್ಲಿ ಜಾಗ ಇದೆ, ದಯವಿಟ್ಟು ಬನ್ನಿ' ಎಂದು ಹೇಳಿದರು. ಮೊದಲೇ ಇಸ್ರೇಲ್ ಚಿಕ್ಕ ದೇಶ. ಕರ್ನಾಟಕದ ಒಂದು ಜಿಲ್ಲೆಯಷ್ಟಿರುವ ಈ ದೇಶಕ್ಕೆ ಯಹೂದ್ಯರನ್ನು ಆಹ್ವಾನಿಸಲು ಅವರಿಗಿದ್ದ ಒಂದೇ ಕಾರಣ–ತಾವೂ ಯಹೂದ್ಯರು. ಜಗತ್ತಿನ ಯಹೂದ್ಯರೆಲ್ಲ ಬಂದು ಇಸ್ರೇಲ್ ಸೇರಿದರೆ ಇಸ್ರೇಲ್ ದೊಡ್ಡ, ಬಲಶಾಲಿ ರಾಷ್ಟ್ರವಾಗುವುದೆಂಬ ಭ್ರಮೆ ಇಸ್ರೇಲಿಗಳಿಗೆ. ಹೀಗಾಗಿ ಇಸ್ರೇಲ್ ದೇಶ ಜನಿಸಿದ ಮೇಲೆ ಕಳೆದ ಐವತ್ತು ವರ್ಷದಲ್ಲಿ ಅನೇಕ ದೇಶಗಳಿಗಿಂತ ಯಹೂದ್ಯರು ತಮ್ಮ ತವರು ದೇಶವಾದ ಇಸ್ರೇಲ್ಗೆ ಬಂದಿದ್ದಾರೆ. ಇವರಿಗೆ ಜಾಗ ಮಾಡಿಕೊಡಲು ಇಸ್ರೇಲಿಗಳು ಪಕ್ಕದ ಮುಸ್ಲಿಂ ದೇಶಗಳನ್ನು ಒತ್ತರಿಸಿಕೊಂಡಿದೆ; ಮುಸ್ಲಿಮರು ಸಿಟ್ಟಿನಿಂದ ತಿರುಗಿ ಬಿದ್ದಾಗಲೆಲ್ಲ ಅಮೇರಿಕಾ ಇಸ್ರೇಲ್ ಗೆ ನೆರವಾಗಿದೆ. ಇಸ್ರೇಲ್ ಮುಸ್ಲಿಮರನ್ನು ಸದೆಬಡಿದಿದೆ. ಇಡೀ ಜಗತ್ತಿಗೆ ಇರುವ ಕಲ್ಪನೆ ಏನೆಂದರೆ ಈ ಚಿಕ್ಕದೇಶ ಇಸ್ರೇಲ್ ಬೃಹತ್ ಮುಸ್ಲಿಂ ರಾಷ್ಟ್ರಗಳ ಎದುರು ನಿಂತು ಗರ್ಜಿಸಿದೆ; ಅವುಗಳ ಮೇಲೆ ಯುದ್ಧ ಮಾಡಿ ಗೆದ್ದಿದೆ. ಹಾಗೆಯೇ ಎಲ್ಲರ ಇನ್ನೊಂದು ಭ್ರಮೆ ಏನೆಂದರೆ, ಇಸ್ರೇಲ್ ಕೃಷಿಯಲ್ಲಿ, ಕೈಗಾರಿಕೆಯಲ್ಲಿ ತುಂಬಾ ಮುಂದುವರಿದಿದೆ; ಎಲ್ಲವನ್ನೂ ವೈಜ್ಞಾನಿಕ ಜ್ಞಾನದ ತುಟ್ಟತುದಿಗೆ ತೆಗೆದುಕೊಂಡು ಹೋಗಿದೆ. ಇವರ ಪ್ರಕಾರ ಇಸ್ರೇಲಿಗಳು ಮಹಾ ಪರಾಕ್ರಮಿಗಳು; ಅತಿರಥ ಮಹಾರಥರು. ಸತ್ಯ ಏನೆಂದರೆ, ಇಸ್ರೇಲ್ನ ಕೃಷಿ, ಕೈಗಾರಿಕೆ, ಅಸ್ತ್ರಗಳು ಎಲ್ಲವೂ ಅಮೆರಿಕಾದಿಂದ, ಮುಂದುವರಿದ ದೇಶಗಳಿಂದ ಬರುತ್ತಿವೆ. ಅಮೇರಿಕಾದ ಯಹೂದ್ಯರು ಕೋಟ್ಯಂತರ ಡಾಲರ್ ಕೊಡುವುದಷ್ಟೇ ಅಲ್ಲ, ಅಮೇರಿಕನ್ ಸರ್ಕಾರ ಕೂಡ ನೆರವಾಗುತ್ತದೆ. ಎರಡನೆಯ ಮಹಾಯುದ್ಧದಲ್ಲಿ ಯಹೂದ್ಯರು ಹಿಟ್ಲರ್ನಿಂದ ಕೋಟ್ಯಂತರ ಸಂಖ್ಯೆಯಲ್ಲಿ ಸತ್ತರು. ಜರ್ಮನಿಯನ್ನೊಳಗೊಂಡು ಪಶ್ಚಿಮದ ರಾಷ್ಟ್ರಗಳೆಲ್ಲ ಈ ಅಳುಕಿನಿಂದ ಇಸ್ರೇಲ್ಗೆ ನೆರವಾಗಿದೆ. ಹಾಗೆ ನೋಡಿದರೆ ಇಸ್ರೇಲಿಗಳಿಗೂ ಮುಸ್ಲಿಮರಿಗೂ ಯಾವುದೇ ವ್ಯತ್ಯಾಸವಿಲ್ಲ. ಬೇರೆಬೇರೆ ದೇಶಗಳಿಂದ ಧರ್ಮದ ಹೆಸರಲ್ಲಿ ವಲಸೆ ಬಂದ ಇಲ್ಲಿಯ ಯಹೂದ್ಯರು ಸ್ವಲ್ಪ ಹೆಚ್ಚು ಓದಿದವರು, ವ್ಯಾಪಾರ ಬಲ್ಲವರು, ಅದನ್ನು ಬಿಟ್ಟರೆ ಯಹೂದ್ಯರು ತಮ್ಮ ಜಾತೀಯತೆ, ಸಣ್ಣತನದಿಂದಾಗಿಯೇ ಇಡೀ ಜಗತ್ತಿನಲ್ಲಿ ಕೆಟ್ಟ ಹೆಸರು ಪಡೆದವರು. ಯಹೂದ್ಯರ ಪರವಾಗಿ ಮಾತಾಡುವ ಫ್ರಾನ್ಸ್ ಮತ್ತು ಇಂಗ್ಲೆಂಡಿನಲ್ಲಿ ಕೂಡ ಇವತ್ತಿಗೂ ಯಹೂದ್ಯ ವಿರೋಧಿಗಳಿದ್ದಾರೆ.

ಯಹೂದ್ಯರ ಜಾತೀಯತೆ ಎಲ್ಲಾ ಜನರ ಜಾತೀಯತೆಯಂತೆಯೇ ಏನೇನು ದುರಂತ ತರಬಹುದೋ ಅದನ್ನೆಲ್ಲ ತರುತ್ತಿದೆ. ಜಾತಿಯ ಹೆಸರಲ್ಲಿ ರಷ್ಯಾದ, ಅಮೆರಿಕಾದ ಯುರೋಪಿನ ವಿವಿಧ ರಾಷ್ಟ್ರಗಳ ಯಹೂದ್ಯರನ್ನು ತಮ್ಮ ನಾಡಿನಲ್ಲಿ ಬಿಟ್ಟುಕೊಂಡು ಅವರಿಗೆ ಎಲ್ಲ ಸವಲತ್ತುಗಳನ್ನು ಇಸ್ರೇಲ್ ಕೊಟ್ಟಿತು. ಇಸ್ರೇಲ್ ಜಾತೀಯತೆಯಿಂದ ಎಷ್ಟು ಕುರುಡಾಗಿರುವ ದೇಶವೆಂದರೆ, ಇಸ್ರೇಲಿನ ಯಹೂದ್ಯರು ತಮ್ಮ ಜಾತಿಯ ಜನರೆಲ್ಲ ಶ್ರೇಷ್ಠರು, ಮುಗ್ಧರು ಎಂದು ತಿಳಿದುಕೊಂಡಿದ್ದರು. ಈಗ ಅವರಿಗೆ ಇದ್ದಕ್ಕಿದ್ದಂತೆ ಗೊತ್ತಾಗಿದೆ. ಏನೆಂದರೆ, ಇವತ್ತು ಇಸ್ರೇಲ್ಗೆ ಈಗ ದೊಡ್ಡ ಸವಾಲಾಗಿರುವುದು ಮುಸ್ಲಿಂ ಕಂದಾಚಾರಿಗಳಲ್ಲ, ಸದ್ದಾಂ ಅಣುಬಾಂಬ್ ಅಲ್ಲ; ಇವತ್ತು ಇಸ್ರೇಲ್ ದೇಶವನ್ನು ನಾಶ ಮಾಡುವ ಅಪಾಯ ತಲೆದೋರಿರುವುದು ರಷ್ಯಾದಿಂದ ಇಸ್ರೇಲ್ಗೆ ವಲಸೆ ಬಂದ ಅಂತರ್‌ರಾಷ್ಟ್ರೀಯ ಅಫೀಮು, ಅಸ್ತ್ರಗಳ ಕಳ್ಳರು ಮತ್ತು ದಲ್ಲಾಳಿಗಳಿಂದ. ರಷ್ಯಾದೇಶ ೧೯೮೯ರಲ್ಲಿ ಮುಕ್ತರಾಷ್ಟ್ರವಾದೊಡನೆ ಇಸ್ರೇಲ್ಗೆ ಯಹೂದ್ಯರು ಎಂಬ ಪಾಸ್ಪೋರ್ಟ್ನೊಂದಿಗೆ ಬಂದವರಲ್ಲಿ ಬಹುಪಾಲು ಜನ ಅಂತರಾಷ್ಟ್ರೀಯ ಚೋರರು, ಡ್ರಗ್ ಮತ್ತು ಅಸ್ತ್ರಗಳ ವ್ಯಾಪಾರಿ ಮತ್ತು ಮಧ್ಯವರ್ತಿಗಳಿಗೆ ಧರ್ಮವೆಂಬುದಿಲ್ಲ, ದೇಶವೆಂಬುದಿಲ್ಲ– ಅವರಿಗೆ ಹಣವೇ ಸತ್ಯ. ಹಣವೇ ನಿತ್ಯ! ಹೀಗಾಗಿ ಎಲ್ಲೋ ದೋಚಿದ ಹಣವನ್ನು ಅಧಿಕೃತ ಹಣವನ್ನಾಗಿ ಶುದ್ಧೀಕರಿಸುವ ಯಹೂದ್ಯರು ಇಸ್ರೇಲ್ಗೆ ಮುಗಿಬಿದ್ದಿದ್ದಾರೆ; ತಮ್ಮ ತವರನ್ನು ಅವರೆಲ್ಲ ಬೇಕಾಬಿಟ್ಟಿಯಾಗಿ ಬಳಸಿಕೊಂಡಿದ್ದಾರೆ!

ಇವತ್ತು ಬಿಜೆಪಿಗಳು ಮತ್ತು ಆರ್ ಎಸ್ ಎಸ್ ಗಳು ನೋಡಲು ಎಲ್ಲರಂತೆಯೇ ಕಾಣಬಹುದು– ಆದರೆ ಅವರ ಬಗ್ಗೆ ದೃಢ ಚಿತ್ತರೂ ಕಲ್ಲುಮನಸ್ಸಿನವರು ಆಗಬೇಕಾದದ್ದು ಎಲ್ಲರ ಕರ್ತವ್ಯ. ನಮ್ಮ ಕಣ್ಣೆದುರಿಗೆ ಮುಸ್ಲಿಂ, ಕ್ರಿಶ್ಚಿಯನ್ ಸಮಯಸಾಧಕರು ಆರೆಸ್ಸೆಸ್, ಬಿಜೆಪಿಗಳಾದರೂ ನಮ್ಮ ಸಿದ್ಧಾಂತ ಶಿಥಿಲಗೊಳ್ಳಕೂಡದು. ಸಿರಿಯಗರ ಹೊಡೆದವನನ್ನು ನುಡಿಸುವುದು ಎಷ್ಟು ಕಷ್ಟವೋ ಅಷ್ಟೇ ಕಷ್ಟ ಈ ಜಾತೀಯತೆಯ ಗರ ಹೊಡೆದವರನ್ನು ನುಡಿಸುವುದು, ತಿದ್ದುವುದು. ಅದರಲ್ಲೂ ಅವರಿಗೆ ಅಧಿಕಾರ ಬರುತ್ತೆಂದರೆ ಮಾಯಾಮೃಗಗಳಂತೆ ನಮ್ಮೆದುರು ಆಡತೊಡಗುತ್ತಾರೆ. ಬೆಳಗಾದರೆ ಎಲ್ಲೆಲ್ಲೂ ಏಳುತ್ತಿರುವ ದೇವಸ್ಥಾನಗಳು, ಇವರ ಮೂರ್ಖ ಘೋಷಣೆಗಳು ನಿಮ್ಮನ್ನೆಲ್ಲ ಎಚ್ಚರಿಸಬೇಕು.

ನಾನು ಬಲ್ಲ ಪಾರ್ಕ್ ನನಗೆ ಎಚ್ಚರಿಕೆ ನೀಡಲು ಸಾಕು.

# 4.4 ಓದುಪತ್ಯ : ನಾನು ಹುಡುಗ ಮತ್ತು ಕಾಲ

**– ಪ್ರತಿಭಾ ನಂದಕುಮಾರ್**

– ೧ –

ಹದಿನಾರರ ಹರೆಯದಲ್ಲಿ ನನಗೆ
ಕನಸಿನ ರಾಜಕುಮಾರನಂತೆ ಕಾಣಿಸಿದ
ಈ ಹುಡುಗ
ಅಪರಂಜಿ ಗುಣದ ಮೀರಿದ ಬುದ್ಧಿವಂತ
ದೇಶ ಕಾಣದ ಅವನ ಮೀಸೆಯಡಿಯಲ್ಲಿ
ಲೋಕದ ಎಲ್ಲ ಸಮಸ್ಯೆಗಳಿಗೂ ಉತ್ತರ.
ಅವನ ನಡೆ ನುಡಿ ನೋಟಕ್ಕೆ ಸರಿಮಿಗಿಲಿಲ್ಲ.
ಅವನಿಲ್ಲದ ಜೀವನದಲ್ಲಿ ಬೆಳಕಿಲ್ಲ.
ಅವನ ಕರ್ಚೀಫ್ ತುದಿಗೆ ಕಸೂತಿ ಹಾಕುವುದು
ನನ್ನ ಜೀವನದ ಪರಮಧ್ಯೇಯ.

–೨–

ಹದಿನೆಂಟರ ತುಂಟತನದಲ್ಲಿ
ಈ ಹುಡುಗ
ಇನ್ನೂ ಸ್ವಲ್ಪ ಎತ್ತರವಿರಬೇಕಿತ್ತು
ನನಗೆ ಅತ್ಯಂತ ಆಪ್ತ ಆದರೆ
ಕಳೆದ ಸಲ ಊರಿಗೆ ಹೋಗುವಾಗ ಹೇಳಲಾಗಲಿಲ್ಲ.
ಮೊನ್ನೆ ನನ್ನ ಪಾರ್ಟಿಗೆ ಬರಲಿಲ್ಲ
ತುಂಬ ಕೆಲಸವಿತ್ತೇನೋ ಪಾಪ.
ಒಂದೆರಡು ಮೋಸ ಸುಳ್ಳು ಅಸಹನೆ

ಈ ಪ್ರಪಂಚದಲ್ಲಿ ಯಾರು ತಾನೆ ಪರ್ಫೆಕ್ಟ್ ಹೇಳಿ ?

– ೩ –

ಇಪ್ಪತ್ತರ ನಂತರ ಕಣ್ಣರಳಿಸಿ ಲೋಕ ನೋಡತೊಡಗಿದಾಗ

ಈ ಹುಡುಗ

ಯಾಕೆ ಇಷ್ಟು ಪೆದ್ದುಪೆದ್ದಾಗಿದ್ದಾನೆ ?

## ಕನ್ನಡ ಭಾಷಾ ಪಠ್ಯ  ಗಣಕ ಸೌರಭ

## ಬಿಸಿಎ ಮೂರನೇ ಸೆಮಿಸ್ಟರ್ ಮಾದರಿ ಪ್ರಶ್ನೆಪತ್ರಿಕೆ

**ಸಮಯ: 2 ಗಂಟೆ 3೦ ನಿಮಿಷ**

**ಅಂಕಗಳು : 60**

| ಕೆಳಗಿನ ಪ್ರಶ್ನೆಗಳಲ್ಲಿ ಐದಕ್ಕೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ 2x5= 10

೧ ವಸಿಷ್ಠ ಸೃಷ್ಟಿಸಿದ ಲೋಕ ಯಾವುದು?

೨ ಮೂರು ಮಂಗಗಳ ಹೆಸರೇನು ?

೩ ತೂರ ಯಾರು? ಅವನ ಕೆಲಸವೇನು?

೪ ನಂದನವನಕ್ಕೆ ಯಾರು ಯಾರು ಹೋದರು?

೫ ಹೆಣ್ಣುಮಕ್ಕಳು ಗಂಡನ ಮನೆಗೆ ಹೋಗುವಾಗ ಧಾನ್ಯ ಚೆಲ್ಲುತ್ತಾ ಹೋಗಲು ಕಾರಣವೇನು

೬ ಹದಿಹರೆಯದವರು ಸೇವಿಸಬೇಕಾದ ಆಹಾರಗಳು ಯಾವುವು?

೭ ಯಾವುದೇ ಸಾಧನ ಸ್ಮಾರ್ಟ್ ಆಗುವುದು ಹೇಗೆ?

೮ ಊಟದ ಶಿಸ್ತು ಹೇಗಿರಬೇಕೆಂದು ಲೇಖಕರು ಹೇಳಿದ್ದಾರೆ?

|| ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ 5X4=20

೧ ಶಾಂಬನ್ ತಂಡ ನಡೆಸಿದ ಸಂಶೋಧನೆ ಯನ್ನು ಕುರಿತು ಬರೆಯಿರಿ

೨ ಪ್ರಕೃತಿಯೊಂದಿಗೆ ಜನಪದರ ಬಾಂಧವ್ಯ ಎಂಥದ್ದೆಂದು' ಏಳುತಲೆ 'ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ

೩ ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು ಕಥೆಯ ಅಂತ್ಯದ ಬಗ್ಗೆ ನಿಮ್ಮ ಅಭಿಪ್ರಾಯವೇನು?

೪ ತಳವಾರ ರಾಮುವಿನ ಸಂವೇದನೆಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ?

೫ ಅಲಿ ಅನಿಲನ ಪ್ರಾಣ ಉಳಿಸಿದ ಸಂದರ್ಭವನ್ನು ವಿವರಿಸಿ

೬ ಮನೆಯೂ ಸ್ಮಾರ್ಟ್ ಆಗುವುದು ಹೇಗೆ ವಿವರಿಸಿ

||| ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಬರೆಯಿರಿ 10X2=20

೧ ಸ್ವಾತಂತ್ರ್ಯದ ಹಣತೆ ಉರಿಯುತ್ತಿರುವ ಬಗೆಯನ್ನು ಕವಿ ಹೇಗೆ ವಿವರಿಸಿದ್ದಾರೆ?

೨ ಲೇಖಕರ ಎಮ್ಮೆಗೆ ಮಾತು ತಿಳಿದ ಸಂದರ್ಭಗಳನ್ನು ಕುರಿತು ವಿವರಿಸಿ:–

೩ ಸಿದ್ಧರಾಮನ ಜಾತ್ರೆಯ ಬಗ್ಗೆ ಬರೆಯಿರಿ.

೪ ಯಹೂದ್ಯರ ಜಾತೀಯತೆ ತರುತ್ತಿರುವ ದುರಂತಗಳನ್ನು ವಿವರಿಸಿ.

|V ಕೆಳಗಿನ ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:– 5X2=10

೧ ಬಡತನದಲ್ಲೇ ಸಿರಿತನವನ್ನು ಕಂಡ ಕವಿ ಬದುಕನ್ನು ಕುರಿತು ನಾನು ಬಡವಿ ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ.

೨ ಸ್ವಾಮಿಯವರಿಗೂ, ಬಂದಿದ್ದ ಜನರಿಗೂ ನಡೆದ ಸಂಭಾಷಣೆಯ ಸ್ವಾರಸ್ಯವನ್ನು

ಕುರಿತು ಬರೆಯಿರಿ

೨ ನಾನು ಹುಡುಗ ಮತ್ತು ಕಾಲ ಕವಿತೆಯನ್ನು ವಿವರಿಸಿ

೪ ಮನುಷ್ಯತ್ವವನ್ನು ಕುರಿತು ಫಾತಿಮಾ ರವರು ಹೇಳಿರುವ ಅಂಶಗಳನ್ನು ತಿಳಿಸಿ